
ರಂಜನೆ ಬೋಧನೆ ಪ್ರಚೋದನೆ

ಲಂಕೇಶ್


05 ಜುಲೈ 2017 ಪುಟ 16 ರೂ. 15/-



ಭುಗಿಲೆದ್ದಿರುವ ಹೊಲಗದ್ದೆಗಳು



ಸಂಘಿ ಸೈತಾನ ಭಟ್ಟ



ಆಪರೇಷನ್ ಬಸವಣ್ಣ



ಸಿಮ್ಮನ ಎಮ್ಮೆಲ್ಲೆ ಕನಸು

ಶ್ರೀರಂಗಪಟ್ಟಣ



ನಂಜುಂಡೇಗೌಡ ಜೆಡಿಎಸ್ ಸೇರ್ತಾರಾ?

ವೈದ್ಯರೇ ನಿಮ್ಮ ಕ್ಷೇತ್ರದ ಘನತೆಯನ್ನು ಉಳಿಸಿ

ವೈದ್ಯರುಗಳೇ, ವೈದ್ಯ ಕ್ಷೇತ್ರದ ಘನತೆಯನ್ನು ಉಳಿಸಿಕೊ

ಅಂಚಿನಿಂದ.....



ಡಾ.ವಾಸು ಎಚ್.ವಿ.

ಈ ದೇಶದಲ್ಲಿ ಆರೋಗ್ಯ ವ್ಯವಸ್ಥೆಯ ಅವ್ಯವಸ್ಥೆಯ ಕುರಿತು ವ್ಯಾಪಕವಾದ ಬೇಸರವಿದೆ. ಆಗಾಗ ಅದು ರೋಗಿಯ ಸಂಬಂಧಿಕರ ಆಕ್ರೋಶವಾಗಿ ಸ್ಫೋಟಗೊಳ್ಳುತ್ತದೆ. ಈ ರೀತಿ ಸ್ಫೋಟಗೊಂಡಾಗ ಕೆಲವು ಸಾರಿ ಆ ನಿರ್ದಿಷ್ಟ ಪ್ರಕರಣಗಳಲ್ಲಿ ವೈದ್ಯರದ್ದು ತಪ್ಪಿರುವುದಿಲ್ಲ ಅಥವಾ ವಿಜ್ಞಾನದ ಮಿತಿಯಿಂದಲೋ, ಮನುಷ್ಯ ಸಹಜ ಮಿತಿಗಳಿಂದಲೋ ತಪ್ಪುಗಳು ಆಗಿರುತ್ತವೆ. ಹೀಗೆಲ್ಲಾ ನಡೆದಾಗ ವೈದ್ಯರುಗಳು ಸಂಕೀರ್ಣವಾದ ವೈದ್ಯಕೀಯ ಜ್ಞಾನದ ಅರಿವಿಲ್ಲದವರು ಈ ರೀತಿ ಅನಗತ್ಯವಾಗಿ ತಪ್ಪೆಸಗದ ವೈದ್ಯಕೀಯ ಸಿಬ್ಬಂದಿ ಮೇಲೆ ದಾಳಿ ನಡೆಸುವುದರ ಬಗ್ಗೆ ಮಾತಾಡುತ್ತಾರೆ. ಹೀಗೆ ಆದರೆ, ವೈದ್ಯರುಗಳು ಯಾರಿಗೇ ಆದರೂ ಚಿಕಿತ್ಸೆ ನೀಡುವ ಮುಂಚೆ ಹೆದರುವಂತಾಗುತ್ತದೆ; ಇದೇ ಕಾರಣಗಳಿಂದ ಅನಗತ್ಯವಾದ ಪರೀಕ್ಷೆಗಳೂ ಹೆಚ್ಚಾಗುತ್ತಾ ಹೋಗುತ್ತದೆ. ಈ ಎಲ್ಲಾ ಸಮಸ್ಯೆಗಳು ವೈದ್ಯರ ಸಂಘಗಳ ಮುಖಾಂತರ ಅದು ಸರ್ಕಾರವನ್ನೂ ತಲುಪಿ, ವೈದ್ಯರು ಮತ್ತು ವೈದ್ಯಕೀಯ ಸಿಬ್ಬಂದಿಯನ್ನು ರಕ್ಷಿಸುವ ಒಂದು ಕಾಯ್ದೆಯೂ ಬಂದಿದೆ. ಆ ಕಾಯ್ದೆಯಿಂದ, ಇಂತಹ ಗಲಭೆಗಳನ್ನು ಮಾಡಿದ ಸಾರ್ವಜನಿಕರನ್ನು ಕೂಡಲೇ ಬಂಧಿಸುವ ಮತ್ತು ಸುಲಭಕ್ಕೆ ಜಾಮೀನು ಸಿಗದ ರೀತಿಯಲ್ಲಿ ಮಾಡುವ ರಕ್ಷಣೆಯೂ ಒದಗಿಬಂದಿದೆ.

ಆದರೂ ಕಾಯ್ದೆಯಷ್ಟೇ ವೈದ್ಯರುಗಳಿಗೆ ಸಂಪೂರ್ಣ ರಕ್ಷಣೆ ಒದಗಿಸುವುದು ಸಾಧ್ಯವಾಗಿಲ್ಲ, ಈಗಲೂ ಅಲ್ಲಲ್ಲಿ ಹಲ್ಲೆ ಅಥವಾ ಪ್ರತಿಭಟನೆಯ ಪ್ರಕರಣಗಳು ಕೇಳಿಬರುತ್ತವೆ. ಕೆಲವು ಆಸ್ಪತ್ರೆಗಳಲ್ಲಿ ರೋಗಿಯೊಬ್ಬರು ನಿಧನರಾದರೆ ವೈದ್ಯರ ಎದೆಯಲ್ಲಿ ಅವಲಕ್ಕಿ ಕುಟ್ಟುತ್ತದೆ. ಇದು ಹೀಗಿರಬಾರದು. ಇದೇರೀತಿ ಮುಂದುವರೆದರೆ, ವೈದ್ಯಕೀಯ ವ್ಯವಸ್ಥೆಯು ನಡೆಯುವುದು ಕಷ್ಟ. ಆದರೆ, ಈ ರೀತಿ ಆಗುವಲ್ಲಿ ವೈದ್ಯರ ಮತ್ತು ವೈದ್ಯಕೀಯ ಸಂಸ್ಥೆಗಳ ಪಾತ್ರವೇನು ಎಂಬುದರ ಕುರಿತು ಆ ಕ್ಷೇತ್ರದಲ್ಲಿ ಗಂಭೀರ ಆತ್ಮಾವಲೋಕನ ನಡೆದಿದೆಯೇ? ಇಲ್ಲವೇ ಇಲ್ಲ ಎಂದರೆ, ಕೆಲವರಿಗೆ ಬೇಸರವಾಗಬಹುದು. ಶೇ. 0.001 ಅಷ್ಟು ನಡೆದಿರಬಹುದೆಂದು ಖಚಿತವಾಗಿ ಹೇಳಬಹುದು. ಇದೊಂದು ದೊಡ್ಡ ಸಮಸ್ಯೆ. ಇದಕ್ಕಿಂತ ಮುಖ್ಯವಾದ ಸಮಸ್ಯೆ ಎಂದರೆ, ಅದು ನಮ್ಮ ಸರ್ಕಾರೀ ವೈದ್ಯಕೀಯ ವ್ಯವಸ್ಥೆಯು ದುರ್ಬಲವಾಗಿ ನಿರ್ಮಿತವಾಗಿರುವುದು ಮತ್ತು ದಿನೇದಿನೇ ಹೆಚ್ಚೆಚ್ಚು ದುರ್ಬಲವಾಗುತ್ತಿರುವುದು.

ಇವೆಲ್ಲದರ ಪರಿಣಾಮವಾಗಿ ಸಾರ್ವಜನಿಕರಲ್ಲಿ ವೈದ್ಯರ ಕುರಿತು ಮತ್ತು ವೈದ್ಯಕೀಯ ಸಂಸ್ಥೆಗಳ ಕುರಿತ ವಿಶ್ವಾಸಾರ್ಹತೆ ಕುಸಿದಿದೆ ಮತ್ತು ಕುಸಿತದ ವೇಗ ಹೆಚ್ಚಾಗುತ್ತಿದೆ. ವೈದ್ಯಲೋಕದ ಘನತೆಯೇ ಕುಸಿದಿದೆ. ಇದನ್ನು ಎತ್ತಿ ನಿಲ್ಲಿಸುವ ಕೆಲಸ ವೈದ್ಯಕೀಯ ಕ್ಷೇತ್ರದ ಒಳಗಿನಿಂದ ನಡೆಯುವ ಸಾಧ್ಯತೆ ಬಹುತೇಕ ಇಲ್ಲ, ಮಾನವೀಯವಾದ ನಿಲುವುಳ್ಳವರು ಮತ್ತು ಒಳ್ಳೆಯ ರೀತಿ ಪ್ರಾಕ್ಟೀಸ್ ಮಾಡುತ್ತಿರುವ ವೈದ್ಯರು ಸಾಕಷ್ಟು ಸಂಖ್ಯೆಯಲ್ಲಿದ್ದಾರೆ. ನಿಜಕ್ಕೂ 'ಸೇವೆ' ಮಾಡುತ್ತಿರುವವರು ಅವರು. ಅದಲ್ಲದೇ ರೋಗಿಗಳು 'ದೇವರೆಂದು' ಭಾವಿಸುವ ಮಟ್ಟಿಗಿನ ಸೇವೆ ಮಾಡುತ್ತಿರುವವರೂ ಇದ್ದಾರೆ. ಸ್ವತಃ ತಜ್ಞ ವೈದ್ಯರಾಗಿದ್ದು, ಕಾರ್ಪೊರೇಟ್ ವ್ಯವಸ್ಥೆಯ ಲಾಭಕೋರತನವನ್ನು ಧಿಕ್ಕರಿಸಿ ಹೊರಗೆ ನಿಂತವರೂ ಇದ್ದಾರೆ. ಆದರೆ, ಇಂತಹವರ ಸಂಖ್ಯೆ ಹೆಚ್ಚಾಗುತ್ತಿಲ್ಲ, ಇವರುಗಳು ತಮ್ಮ ಪ್ರಾಕ್ಟೀಸ್‌ಅನ್ನು ಸರಿಯಾದ ನೈತಿಕ ನೆಲೆಗಟ್ಟಿನಲ್ಲಿ ಮಾಡುತ್ತಾರಾದರೂ, ಈ ವ್ಯವಸ್ಥೆಯನ್ನು ಪ್ರಶ್ನಿಸಿ ನಿಲ್ಲುವುದಿಲ್ಲ, ಆ ರೀತಿ ಒಳಗಿನಿಂದ ಇದರ ಬಗ್ಗೆ ಪ್ರಶ್ನೆ ಮಾಡುವವರು ಬಹಳ ಬಹಳ ಕಡಿಮೆ ಮತ್ತು ಅಂತಹವರನ್ನು ಈ ಕ್ಷೇತ್ರದಲ್ಲಿ ನಿರ್ಲಕ್ಷಿಸಿ ಮೂಲೆಗುಂಪು ಮಾಡಲಾಗುತ್ತದೆ. ಇದರ ನಿಯಂತ್ರಣಕ್ಕೆ ಇರುವ ಕೆಲವು ಅರೆಬರೆ ಸಂಸ್ಥೆಗಳಲ್ಲಿ ವೈದ್ಯರೇ ಇದ್ದು ಬಹುತೇಕ ಪ್ರಕರಣಗಳಲ್ಲಿ ವೈದ್ಯರ ಹಿತಾಸಕ್ತಿಯನ್ನೇ ಕಾಪಾಡಿಕೊಂಡು ಬರುವುದು ಸಂಪ್ರದಾಯವಾಗಿದೆ. ಅತ್ಯಂತ ಮಾನವೀಯ ಲೋಕವಾಗಿರಬೇಕಾದ ವೈದ್ಯಕೀಯ ಲೋಕದಲ್ಲಿ ನಡೆಯುತ್ತಿರುವ ಅಮಾನವೀಯ ಘಟನೆಗಳು ನಮ್ಮನ್ನು ವಿಷಾದಕ್ಕೆ ಮತ್ತು ಹತಾಶೆಗೆ ದೂಡುತ್ತವೆ.

ಇನ್ನು ಲಾಭಕೋರತನದ ವಿಚಾರಕ್ಕೆ ಬರೋಣ. ಇಂತಿಷ್ಟು ಶಸ್ತ್ರಚಿಕಿತ್ಸೆಗಳನ್ನು ಮಾಡಲೇಬೇಕೆಂಬ ಟಾರ್ಗೆಟ್ ಹೊಂದಿರುವ ವೈದ್ಯರುಗಳು ಮತ್ತು ಸಂಸ್ಥೆಗಳು ಸಾವಿರಾರು ಸಂಖ್ಯೆಯಲ್ಲಿ ಇಲ್ಲ, ಆದರೆ, ಸಂಖ್ಯೆ ಹೆಚ್ಚಾಗುತ್ತಿದೆ. ರೆಫರ್ ಮಾಡಿದ್ದಕ್ಕೆ, ಔಷಧಿ ಬರೆದುಕೊಟ್ಟಿದ್ದಕ್ಕೆ, ಕಿಟ್‌ಗಳನ್ನು ಪಡೆಯುವವರ ಸಂಖ್ಯೆ ಇನ್ನೂ ಹೆಚ್ಚಿದೆ. ರೋಗ ಪತ್ತೆ ಹಚ್ಚುವ ಪರೀಕ್ಷೆಗಳನ್ನು ಬರೆದಿದ್ದಕ್ಕಾಗಿ ಕಮೀಷನ್ ಪಡೆಯುವವರ ಸಂಖ್ಯೆ ಬಹಳ ಬಹಳ ಹೆಚ್ಚಿದೆ. ವೈದ್ಯರುಗಳೇ ನಡೆಸುವ ಆಸ್ಪತ್ರೆಗಳಿಗಿಂತ, ಕಂಪನಿಗಳ ಥರದಲ್ಲಿ ನಡೆಯುವ ಆಸ್ಪತ್ರೆಗಳಲ್ಲಿ ಸುಲಿಗೆ ನಡೆಯುವುದಿಲ್ಲ; ಲೂಟಿ ನಡೆಯುತ್ತದೆ. ಹಲವೆಡೆ ವೈದ್ಯರುಗಳೇ ಕಂಪನಿಗಳಾಗಿದ್ದಾರೆ. ಇನ್ನೂ ಹೆಚ್ಚಿನ ವಿವರಗಳ ಅಗತ್ಯವಿಲ್ಲ, ಎಲ್ಲರಿಗೂ ರೋಗ ಬರುತ್ತಾದ್ದರಿಂದ ವಿವರಗಳು ಎಲ್ಲರಿಗೂ ಗೊತ್ತಿವೆ.

ಇವೆಲ್ಲದರ ಕಾರಣದಿಂದ ಸರ್ಕಾರೀ ಆರೋಗ್ಯ ವ್ಯವಸ್ಥೆಯನ್ನು ಸುಭದ್ರಗೊಳಿಸಬೇಕು ಮತ್ತು ಖಾಸಗಿ ವ್ಯವಸ್ಥೆಯನ್ನು ನಿಯಂತ್ರಣಕ್ಕೊಳಪಡಿಸಬೇಕು. ನಿಯಂತ್ರಣಕ್ಕೆ ಈಗಾಗಲೇ ಹಲವು ಯಂತ್ರಾಂಗಗಳಿವೆ ಎಂದು ಕೆಲವು ವೈದ್ಯರು ಹೇಳುತ್ತಿದ್ದಾರೆ. ಇದು ಅರ್ಧಸತ್ಯ. ಖಾಸಗಿ ವೈದ್ಯಕೀಯ ವ್ಯವಸ್ಥೆಯನ್ನು ನಿಯಂತ್ರಿಸುವ ಸಮಗ್ರ ಕಾಯ್ದೆಯೆಂದರೆ ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ಕಾಯ್ದೆ (ಕೆಪಿಎಂಇ) ಮಾತ್ರ. ಉಳಿದ ಕಾನೂನುಗಳಾದ ಪಿಸಿಪಿಎನ್‌ಡಿಟಿ (ಭ್ರೂಣ ಹತ್ಯೆ ತಡೆ ಕಾಯ್ದೆ), ಬಯೋ ಮೆಡಿಕಲ್ ವೇಸ್ಟ್ ಮ್ಯಾನೇಜ್‌ಮೆಂಟ್ ಕಾಯ್ದೆ ಥರದವು ರೋಗಿ-ವೈದ್ಯ ಸಂಬಂಧಗಳಿಗೆ ಅಥವಾ ಒಟ್ಟಾರೆ ವೈದ್ಯಕೀಯ ಪ್ರಾಕ್ಟೀಸ್‌ಗೆ ಸಂಬಂಧಿಸಿಲ್ಲ. ಪ್ರಾಕ್ಟೀಸ್‌ಗೆ ಸಂಬಂಧಿಸಿದ ಸ್ಟ್ಯಾಂಡರ್ಡೈಸೇಷನ್ (ಇಂಗ್ಲಿಷ್ ಪದಗಳಿಗೆ ಕ್ಷಮಿಸಿ), ವರ್ಗೀಕರಣ ಮತ್ತು ದರಗಳ ಕುರಿತು ಮಾತನಾಡಬಲ್ಲ ಒಂದೇ ಒಂದು ಕಾಯ್ದೆಯೆಂದರೆ ಇದು. ಇದು 2007ರಲ್ಲಿ ಜಾರಿಗೆ ಬಂದಿತ್ತು, ಅದು ಖಾಸಗಿ ಆಸ್ಪತ್ರೆಗಳ ನಿಯಂತ್ರಣದ ವಿಚಾರದಲ್ಲಿ ಹೆಚ್ಚೇನೂ ಪರಿಣಾಮ ಬೀರಲಿಲ್ಲ, ಹೀಗಾಗಿ ಅದಕ್ಕೆ ತಿದ್ದುಪಡಿಯನ್ನು ತರಲು ಸರ್ಕಾರವು ಹೊರಟಿದೆ.

ಖಾಸಗಿ ವೈದ್ಯಕೀಯ ಸಂಸ್ಥೆಗಳ ನಿಯಂತ್ರಣಾ ಕಾಯ್ದೆಯ ತಿದ್ದುಪಡಿಯ ವಿಚಾರದಲ್ಲಿ ದೊಡ್ಡ ಗದ್ದಲ ಎದ್ದಿರುವುದು ನಿರೀಕ್ಷಿತ. ಇತಿಹಾಸದಲ್ಲಿ ಎಂದೂ ಯಾರೂ ನಿಯಂತ್ರಿಸಲಾಗದ ವೈದ್ಯಕುಲವನ್ನು ಒಂದು ಚೌಕಟ್ಟಿಗೆ ತರುವ ಪ್ರಯತ್ನವು ಸುಲಭಕ್ಕೆ ಯಶಸ್ವಿಯಾಗುವುದು ಅನುಮಾನ. 'ನಮ್ಮನ್ನು ನಿಯಂತ್ರಿಸಲು ನೀವ್ಯಾರು?' ಎಂದು ವೈದ್ಯರಲ್ಲಿನ ಒಂದು ಗುಂಪು ಕೇಳುತ್ತಿದೆ. ವಾಸ್ತವದಲ್ಲಿ ವೈದ್ಯಲೋಕದ ಅಹಂನ ಮಟ್ಟ ಇನ್ನೂ ಹೆಚ್ಚೇ ಇದೆ. ವ್ಯಕ್ತಿಯೊಬ್ಬರ ದೇಹದ ಕುರಿತು, ಆ ವ್ಯಕ್ತಿಗಿಂತ ಇನ್ನೊಬ್ಬರಿಗೆ ಹೆಚ್ಚು ತಿಳಿದಿರುತ್ತದೆ ಎಂಬುದೇ, 'ತಿಳಿದಿರುವ' ವ್ಯಕ್ತಿಯನ್ನು ಸರ್ವಜ್ಞನನ್ನಾಗಿಸಿಬಿಡುತ್ತದೆ. ಅದು ವೈದ್ಯರುಗಳಿಗೆ ತಂದುಕೊಟ್ಟಿರುವ ಸೊಕ್ಕು (Arrogance) ಅಷ್ಟಿಷ್ಟಲ್ಲ, ಮಿಕ್ಕವರೆಲ್ಲರನ್ನೂ ಕ್ಷುಲ್ಲಕ ಜನರೆಂಬಂತೆ ವೈದ್ಯ ಸಮುದಾಯ ನೋಡುವುದು ಸರ್ವೇಸಾಮಾನ್ಯ. ಈ ಸಂದರ್ಭದಲ್ಲೂ ಅದು ಒಂದಲ್ಲಾ ಒಂದು ಮಟ್ಟಿಗೆ ಕಂಡುಬರುತ್ತಿದೆ.

ಖಾಸಗಿಯನ್ನು ನಿಯಂತ್ರಿಸದೇ ಸರ್ಕಾರೀ ವ್ಯವಸ್ಥೆ ಬಲಗೊಳಿಸುವುದು ಸಾಧ್ಯವೇ?

ಪ್ರಸ್ತಾಪಿತ ಮಸೂದೆಯ ಕುರಿತ ಚರ್ಚೆಗಳಲ್ಲಿ ಪ್ರಧಾನವಾಗಿ ಕೇಳಿಬರುತ್ತಿರುವ ಒಂದು ವಾದವೇನೆಂದರೆ, 'ನೀವು ಸರ್ಕಾರೀ ಆಸ್ಪತ್ರೆಗಳನ್ನು ಬಲಗೊಳಿಸಿದರೆ ಸಾಕಲ್ಲವೇ. ಖಾಸಗಿಯವರನ್ನು ನಿಯಂತ್ರಣಕ್ಕೆ ತೆಗೆದುಕೊಳ್ಳುವ ಸರ್ಕಸ್ಸೇಕೆ?' ಎಂಬುದು. ಮೇಲ್ನೋಟಕ್ಕೆ ಇದು ಹೌದಲ್ಲವೇ ಎಂದು ಎಲ್ಲರಿಗೂ ಅನಿಸುತ್ತದೆ. ಆದರೆ, ಅಸಲೀ ಸಂಗತಿ ಇರುವುದು ಇಲ್ಲಿಯೇ. ಶಿಕ್ಷಣದ ವಿಚಾರದಲ್ಲೂ ಇದೇ ಅನ್ವಯಿಸುತ್ತದೆ. ಜಗತ್ತಿನಲ್ಲಿ ಖಾಸಗಿ ಕ್ಷೇತ್ರ ಮತ್ತು ಸಾರ್ವಜನಿಕ ಕ್ಷೇತ್ರಗಳೆರಡೂ ಗಣನೀಯ ಪ್ರಮಾಣದಲ್ಲಿದ್ದೂ ಶಿಕ್ಷಣದ ಸಾರ್ವತ್ರೀಕರಣವನ್ನು ಸಾಧಿಸಿರುವ ಒಂದೇ ಒಂದೇ ದೇಶವೂ ಇಲ್ಲ. ಏಕೆಂದರೆ, ಸಾರ್ವಜನಿಕ ಕ್ಷೇತ್ರವು ದುರ್ಬಲವಾಗಿದ್ದರೇನೇ ಶಿಕ್ಷಣದ ವ್ಯಾಪಾರೀಕರಣವು ಸಾಧ್ಯ. ಆಗ ಮಾತ್ರವೇ ಖಾಸಗಿ ಕ್ಷೇತ್ರದ ಗಣನೀಯ (significant presence) ಅಸ್ತಿತ್ವವೂ ಸಾಧ್ಯ.

ವೈದ್ಯಕೀಯ ಕ್ಷೇತ್ರದಲ್ಲಿ ಒಂದು ಉದಾಹರಣೆಯ ಮೂಲಕ ಇದನ್ನು ನೋಡಬಹುದು. ನಮ್ಮ ವೈದ್ಯಕೀಯ ಕ್ಷೇತ್ರವು ವೈದ್ಯ ಕೇಂದ್ರಿತವಾಗಿದೆ (ಇದನ್ನು ಸಾಧ್ಯವಾದಷ್ಟೂ ಕಡಿಮೆ ಮಾಡುವುದೂ ಆಗಬೇಕಿದೆ). ವೈದ್ಯರಿಲ್ಲದೇ ಆಸ್ಪತ್ರೆ ಇರುವುದು ಸಾಧ್ಯವಿಲ್ಲ, ಆದರೆ, ಸರ್ಕಾರೀ ಕ್ಷೇತ್ರದಲ್ಲಿ



ಯಾವಾಗಲೂ ವೈದ್ಯರುಗಳ ಕೊರತೆ. ಅದರಲ್ಲೂ ತಜ್ಞ ವೈದ್ಯರುಗಳ ಸಂಖ್ಯೆ ಇನ್ನೂ ಕಡಿಮೆ. ಇದನ್ನು ಸರಿ ಮಾಡಿಕೊಳ್ಳಲು ಸರ್ಕಾರವು ವೈದ್ಯರುಗಳ ಸಂಬಳವನ್ನು ಎರಡು-ಮೂರು ಪಟ್ಟು ಹೆಚ್ಚಿಸಿತು. ಆದರೆ, ಖಾಸಗಿ ಪ್ರಾಕ್ಟೀಸ್‌ನಲ್ಲಿ ತಿಂಗಳೊಂದಕ್ಕೆ 3-4 ಲಕ್ಷ ರೂ. ದುಡಿಯುವ ಸಾಧ್ಯತೆ ಹೊಂದಿರುವವರು ಸರ್ಕಾರೀ ಕ್ಷೇತ್ರಕ್ಕೆ ಬರುವುದಿಲ್ಲ, ದಿನವೊಂದಕ್ಕೆ 1-2 ಲಕ್ಷ ರೂ. ದುಡಿಯುವ ವೈದ್ಯರೂ ಇದ್ದಾರೆ. ಇದನ್ನು ನಿಯಂತ್ರಿಸದೇ ಇದ್ದರೆ, ಸರ್ಕಾರೀ ವ್ಯವಸ್ಥೆಗೆ ವೈದ್ಯರು ಎಲ್ಲಿಂದ ಬಂದಾರು? ಖಾಸಗಿಯಾಗಿ ಲಕ್ಷಾಂತರ ರೂ. ದುಡಿಯುವ ಸಾಧ್ಯತೆ ಇರುವಾಗ ಸರ್ಕಾರೀ ವೈದ್ಯರಿಗೆ ಖಾಸಗಿ ಪ್ರಾಕ್ಟೀಸ್ ಮಾಡಲೇಬೇಡಿ ಎಂಬ ಆದೇಶವನ್ನು ಕಟ್ಟುನಿಟ್ಟಾಗಿ ಜಾರಿಗೆ ತಂದರೆ, ಸರ್ಕಾರೀ ವ್ಯವಸ್ಥೆಯನ್ನು ವೈದ್ಯರಿಲ್ಲದೇ ನಡೆಸಬೇಕಾದೀತು! ಇದಲ್ಲದೇ ಸಾಮಾನ್ಯವಾಗಿ ಸರ್ಕಾರೀ ವ್ಯವಸ್ಥೆಯನ್ನು ಖಾಸಗಿ ವ್ಯವಸ್ಥೆಯು ಹಾಳು ಮಾಡುವ ಇನ್ನಿತರ ವಿಧಾನಗಳು ಹೇಗೂ ಇವೆ.

ಸರ್ಕಾರೀ ಆಸ್ಪತ್ರೆಗಳು ಹಾಳಾಗಿರುವುದಕ್ಕೆ ಇದಷ್ಟೇ ಕಾರಣವಲ್ಲ, ಅದಕ್ಕೆ ಪ್ರಧಾನ ಕಾರಣ, ನಮ್ಮ ಸರ್ಕಾರದ ನೀತಿಗಳೇ ಆಗಿವೆ. ಅದನ್ನು ಸರಿಪಡಿಸಿಕೊಂಡು, ಅತ್ಯಂತ ಸುಭದ್ರ ಸರ್ಕಾರೀ ವೈದ್ಯಕೀಯ ಕ್ಷೇತ್ರವನ್ನು ಕಟ್ಟುವುದು ಅತ್ಯಂತ ಮುಖ್ಯ. ಆದರೆ, ಜೊತೆಜೊತೆಯಲ್ಲೇ ಪ್ರಬಲ ಖಾಸಗೀ ಕ್ಷೇತ್ರವೂ ಉಳಿದುಕೊಂಡು, ಇದನ್ನು ಸಾಧಿಸಬಹುದೆನ್ನುವುದು ಅಸಾಧ್ಯದ ಮಾತು. ಇವೆರಡೂ, ಖಾಸಗಿ ಕ್ಷೇತ್ರದ ನಿಯಂತ್ರಣ ಮತ್ತು ಸರ್ಕಾರೀ ವ್ಯವಸ್ಥೆಯ ಸಬಲೀಕರಣ, ಜೊತೆಜೊತೆಯಾಗಿಯೇ ಸಾಗಬೇಕು. ನಿಯಂತ್ರಣ ಮಾಡ್ತೀವಿ, ಸರ್ಕಾರೀ ಆಸ್ಪತ್ರೆಗಳನ್ನು ಹಾಗೆಯೇ ಇಟ್ಟುಕೊಳ್ಳುತ್ತೇವೆ ಎಂದು ಸರ್ಕಾರ ಹೇಳುವುದಾದರೆ, ಅದರ ಉದ್ದೇಶ ಪ್ರಶ್ನಾರ್ಹ.

ಈ ರೀತಿ ಖಾಸಗೀ ವೈದ್ಯಕೀಯ ಕ್ಷೇತ್ರವನ್ನು ನಿಯಂತ್ರಿಸುವುದು ಸಂವಿಧಾನಕ್ಕೆ ವಿರುದ್ಧವಾದುದು ಎಂದು ಕೆಲವರು ಹೇಳುತ್ತಿದ್ದಾರೆ. ಸಂವಿಧಾನದ ಕಲಂ 47 ಸಾರ್ವಜನಿಕ ಆರೋಗ್ಯವನ್ನು ಉತ್ತಮಗೊಳಿಸುವುದು ಸರ್ಕಾರದ ಕರ್ತವ್ಯ ಎನ್ನುತ್ತದೆ. ಕಲಂ 21 ಘನತೆಯಿಂದ ಬದುಕುವ ಹಕ್ಕನ್ನು ಖಾತರಿಗೊಳಿಸುವುದನ್ನು ಮೂಲಭೂತ ಕರ್ತವ್ಯವಾಗಿಸಿದೆ. ಈ ರೀತಿ ಯಾವುದು ಸರ್ಕಾರದ ಕರ್ತವ್ಯವೋ, ಅದನ್ನು ಖಾತರಿಗೊಳಿಸುವ[illegible] ಪ್ರತಿಯೊಬ್ಬ ಪ್ರಜೆ ಮತ್ತು ಖಾಸಗಿ ಸಂಸ್ಥೆಗಳ '[illegible] ಜವಾಬ್ದಾರಿ'ಯೂ (parallel respo[illegible] ಆಗಿರುತ್ತದೆ ಮತ್ತು ಅದಕ್ಕಾಗಿ ಸರ್ಕಾರವು ಖಾಸ[illegible] ಮತ್ತು ಸಂಸ್ಥೆಗಳನ್ನು 'ಪ್ರಭುತ್ವದ ಉಪಕರ[illegible] instruments of state) ರೀತಿ ಬಳಸಿಕ[illegible] ಈ ಮಾತು ಸಂವಿಧಾನವನ್ನು ಜಾರಿ ಮಾ[illegible] ವ್ಯಾಖ್ಯಾನ ಮಾಡುವ ಅಧಿಕಾರ [illegible] ಸುಪ್ರೀಂಕೋರ್ಟಿನದ್ದು, ರಾಜಸ್ಥಾನ ಖಾಸಗಿ ಶಿ[illegible] ಸಂಘದ ಮೊಕದ್ದಮೆಯಲ್ಲಿ! ಹೀಗಾಗಿ ಖಾಸಗಿ[illegible] ಕ್ಷೇತ್ರದ ಮೇಲೆ ನಿಯಂತ್ರಣ ಹೇರುವುದು [illegible] ಮಾತ್ರವಲ್ಲ, ಸಂವಿಧಾನ ಬದ್ಧ ಕರ್ತವ್ಯದ [illegible] ನಿಯಂತ್ರಣ ಕಾಯ್ದೆಯು ಇಂದು ಬರುತ್ತಿರುವು[illegible] ಇನ್ನಷ್ಟು ಬಲಗೊಳಿಸುವ ನಿಟ್ಟಿನಲ್ಲಿ ಈ [illegible] ಒಂದೆರಡು ಹೆಜ್ಜೆ ಮುಂದಕ್ಕೆ ಹೋಗುತ್ತಿವೆ ಅ[illegible] - ಮೂರು ಹೊಸ ಆದರೆ ಪ್ರಮುಖ [illegible] ಇದರಲ್ಲಿವೆಯಾದರೂ, ತಪ್ಪಿತಸ್ಥ ವೈದ್ಯರಿಗೆ [illegible] ಜೈಲು ಶಿಕ್ಷೆಗಳೆಲ್ಲಾ ಈ ಹಿಂದೆಯೂ ಇದ್ದ[illegible] ಹೊಸದಾಗಿ ಏನೋ ಆಗಿ ಬಿಡುತ್ತಿ[illegible] ಹುಯಿಲೆಬ್ಬಿಸುವುದರ ಹಿಂದೆ ಬೇರೆ ಹಿತಾ[illegible]

ಇವರನ್ನು ನಿಯಂತ್ರಿಸುವುದರ ಜೊತೆ[illegible] ವ್ಯವಸ್ಥೆಯನ್ನು ಬಲಗೊಳಿಸದಿದ್ದ[illegible] ಸಾಧಿಸಿದಂತಾಗುವುದಿಲ್ಲ, ಆ ನಿಟ್ಟಿನಲ್ಲಿ ಈ[illegible] ಮುನ್ನಡೆಯದಿದ್ದರೆ, ಸಹಜವಾಗಿ ಅವರ ಬದ್ಧ[illegible] ಪ್ರಶ್ನೆಗಳು ಏಳುತ್ತವೆ. ಸರ್ಕಾರೀ ವ್ಯವಸ್ಥೆಯ[illegible] ಬದಲಾವಣೆಗಳನ್ನು ತರುವ ಪ್ರ[illegible] ಆರಂಭವಾಗಿರುವುದನ್ನು ಕಾಣುತ್ತೇವೆ. ಆದ[illegible] ಕೋನದಿಂದಲೂ ಅವು ಸಾಕಾಗುವಂತಿಲ್ಲ, [illegible] ಒತ್ತಡ, ಒತ್ತಾಸೆ ಮತ್ತು ಹೋರಾಟವು ಪ್ರ[illegible] ಅಗತ್ಯವಿದೆ. ಅದೇನೇ ಇದ್ದರೂ, ನಿಯಂತ್ರಣ[illegible] ಹಲ್ಲುಗಳನ್ನು ಕಲ್ಪಿಸುವುದು ಬಹಳ ಮುಖ್ಯವಾ[illegible] ಈ ಸರ್ಕಾರ ಮಾಡಲು ಹೊರಟಿದೆ. ಅದಕ[illegible] ಆಸ್ಪತ್ರೆಗಳ ಚಿಕಿತ್ಸೆಗಳ ದರವನ್ನು ನಿಗದಿ ಪ[illegible] ಕುಂದುಕೊರತೆ ಪರಿಹಾರಗಳಿಗಾಗಿ ಜಿಲ್[illegible] ಮಹಾನಗರಗಳ ಮಟ್ಟದಲ್ಲಿ ಜಿ.ಪಂ ಸಿಇಒ [illegible] ಸಮಿತಿ ರಚನೆ ಹಾಗೂ ಅದಕ್ಕೆ ಸೂಕ್ತ ಅಧಿ[illegible] ನಡೆದುಕೊಳ್ಳಬೇಕೆಂಬುದರ ಕುರಿತು ವೈದ್ಯಕೀಯ[illegible] ಮತ್ತು ರೋಗಿಗಳಿಬ್ಬರಿಗೂ ಸನ್ನದು, ಈ ಹಿಂ[illegible] ದಂಡ ಹಾಗೂ ಶಿಕ್ಷೆಯ ಪ್ರಮಾಣ ಹೆಚ್ಚ[illegible] ಕೆಲವು ಅಂಶಗಳು ಅದರಲ್ಲಿದ್ದವು. ಇವೆಲ್ಲಕ್ಕೆ ದ[illegible] ಎಲ್ಲಾ ಸಮಿತಿಗಳಲ್ಲೂ ಖಾಸಗಿ ವೈದ್ಯ ಪ್ರ[illegible] ಇರುತ್ತಾರೆಂಬುದನ್ನು ಮರೆಯಬಾರದು. ನಂತ[illegible] ಶಿಕ್ಷೆಯ ಪ್ರಮಾಣ ಹೆಚ್ಚಳವನ್ನು ತೆಗೆದುಹಾ[illegible] ಮತ್ತು ವೈದ್ಯ ಸನ್ನದಿನ ಕೆಲವು ಅಂಶಗಳನ್ನೂ [illegible] ಮಾಡಲಾಯಿತು.

ಆದರೆ, ವೈದ್ಯರುಗಳ ಕಡೆಯಿಂದ ಶಿಕ್ಷೆಯ[illegible] ವಿಪರೀತ ಉತ್ಪ್ರೇಕ್ಷೆಯ ಸುಳ್ಳುಗಳನ್ನು ಹರಿಯಬಿ[illegible] ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಶುಲ್ಕ ನಿಗದಿ ಪ[illegible] ಹಾಗೂ ಜಿಲ್ಲಾ ಮಟ್ಟದ ಕುಂದುಕೊರತೆ[illegible] ಸಮಿತಿಗಳ ರಚನೆ ವೈದ್ಯರುಗಳಿಗೆ ಸಹಿಸದಾಯಿ[illegible] ಕುತ್ತು ಬರಬಾರದು ಮತ್ತು ನಮ್ಮನ್ನು ನಿ[illegible] ಯಾರೂ ಇರಬಾರದು ಎಂಬುದು ಅವರ [illegible] ಮೂಲಧೋರಣೆಯಾಗಿತ್ತು.

ಸಣ್ಣ ಹಾಗೂ ಮಧ್ಯಮ ಆಸ್ಪತ್ರೆ[illegible] ತಿದ್ದುಪಡಿಗಳು ನುಂಗಿಬಿಡುತ್ತವೆಯೇ?

ಒಂದೆಡೆ ಬಲಾಢ್ಯ ಕಾರ್ಪೊರೇಟ್ ವ್ಯ[illegible] ಬಲಾಢ್ಯವಾಗಿ ಬೆಳೆಯುತ್ತಿರುವಾಗ ತರಲಾಗು[illegible] ನಿಯಮಗಳು, ಸಣ್ಣ ಮತ್ತು ಮಧ್ಯಮ [illegible] ಆಸ್ಪತ್ರೆಗಳನ್ನು ಇಲ್ಲವಾಗಿಸುತ್ತವೆ ಎಂಬ ಆತಂಕ[illegible] ಈ ಮಸೂದೆಯು ತನ್ನಂತೆ ತಾನೇ ಸಣ್ಣ ಮತ್ತು[illegible] ಪ್ರಮಾಣದ ಆಸ್ಪತ್ರೆಗಳ ವಿರುದ್ಧ ಇಲ್ಲ, [illegible] ಕಾಯ್ದೆಯನ್ವಯ ನಿಯಮಗಳನ್ನು ರೂಪಿಸು[illegible] ಆಸ್ಪತ್ರೆಗಳಲ್ಲೂ ಇಂತಿಷ್ಟು ಕನಿಷ್ಠ ಸವಲತ್ತುಗಳು [illegible] ಎಂದು ಮಾಡಿದರೆ ಹಾಗೂ ಸಣ್ಣ ಆಸ್ಪತ್ರೆ[illegible] ಕಡಿಮೆ ಮತ್ತು ದೊಡ್ಡ ಆಸ್ಪತ್ರೆಗಳಿಗೆ ಭಾರೀ [illegible] ನಿಗದಿ ಆದರೆ, ಅದರ ಪರಿಣಾಮ ನಕಾರಾತ್ಮಕ[illegible] ನಿಯಮಗಳನ್ನು ರೂಪಿಸುವಾಗ, ಸಣ್ಣ ಆಸ್ಪತ್ರೆ[illegible] ಸ್ವತಂತ್ರ ವೈದ್ಯರನ್ನು ಗಮನದಲ್ಲಿಟ್ಟ[illegible] ಮುಂದುವರೆಯಬೇಕಾದ ಜವಾಬ್ದಾರಿ ಸರ್ಕಾರ[illegible] ವಾಸ್ತವದಲ್ಲಿ ಮಸೂದೆಯಲ್ಲಿ ಇಬ್ಬರನ್ನೂ ಒಂದೆ[illegible]


ಕೋವಿಂದ್ ಎಂಬ ದಲಿತನಿಂದಾಗಿ ಯಾರ ಉದ್ಧಾರ?



ಕಂಡಹಾಗೆ

• ಗೌರಿ ಲಂಕೇಶ್
editorlankesh@gmail.com

ನರೇಂದ್ರ ಮೋದಿ ಮತ್ತು ಅಮಿತ್ ಶಾ ಜೋಡಿ ...ಡ ಮುಂದಿನ ರಾಷ್ಟ್ರಪತಿ ಅಭ್ಯರ್ಥಿಯಾಗಿ ...ನಾಥ್ ಕೋವಿಂದ್ ಎಂಬ ದಲಿತನನ್ನು ಆಯ್ಕೆ ...ದೆ. ಈತನ ಆಯ್ಕೆಯ ಹಿಂದಿನ ಕಾರಣಗಳು ... ವಾಸ್ತವದಲ್ಲಿ ದೇಶದಾದ್ಯಂತ ದಲಿತರ ಮೇಲಿನ ...ಗಳು ಹೆಚ್ಚುತ್ತಿದ್ದರೂ ಅದನ್ನು ತಡೆಯಲು ...ಒಂದು ಹೆಜ್ಜೆಯನ್ನೂ ಇಡದ ಮೋದಿ ಸರ್ಕಾರ ...ಪತಿ ಎಂಬ ಅಲಂಕಾರಿಕ ಸ್ಥಾನದಲ್ಲಿ ...ನೋರ್ವನನ್ನು ಕೂರಿಸುವ ಮೂಲಕ ತಾನು ...ತ ಪರ ಎಂದು ತೋರಿಸಿಕೊಳ್ಳಲು ಹೊರಟಿದೆ. ...ಗೆ ಉತ್ತರ ಪ್ರದೇಶದ ವಾರಣಾಸಿ ಲೋಕಸಭಾ ...ವನ್ನು ಮೋದಿಯೇ ಪ್ರತಿನಿಧಿಸುತ್ತಿದ್ದು ಪ್ರಧಾನಿ ...ತ ಆಗಿರುವುದರಿಂದ ಅದೇ ರಾಜ್ಯದ ...ವಿಂದ್‌ನನ್ನು ರಾಷ್ಟ್ರಪತಿ ಸ್ಥಾನದಲ್ಲಿ ಕೂರಿಸಿದರೆ ಆ ...ದಲ್ಲಿ ಬಿಜೆಪಿಯ ಹಿಡಿತವನ್ನು ಹೆಚ್ಚಿಸಿಕೊಂಡು ...ದಿನ ಲೋಕಸಭಾ ಚುನಾವಣೆಯಲ್ಲೂ ...ಭೇರಿ ಬಾರಿಸುವುದು ಅದರ ದುರುದ್ದೇಶ. ಅಷ್ಟೇ ...ದ, ಸ್ಪೃಶ್ಯ 'ಕೋರಿ' ಜಾತಿಗೆ ಸೇರಿರುವ ಮತ್ತು ...ರ ಮಾಂಸ ತಿನ್ನದ ದಲಿತನನ್ನು ಆಯ್ಕೆ ಮಾಡುವ ...ಲಕ ಮಾಯಾವತಿಯವರ ಜಾತವ್ ಜಾತಿಯ ...ರತಾಗಿ ಇತರೆ ದಲಿತ ಸಮುದಾಯಗಳನ್ನು ...ಯತ್ತ ಸೆಳೆದಿಡುವುದೂ ಬಿಜೆಪಿಯ ಇಚ್ಛೆ.



...ಇರಲಿ. ಇಲ್ಲಿ ಇರುವ ಮುಖ್ಯ ವಿಷಯ 'ಯಾರು ಕೋವಿಂದ್? ದಲಿತರ ಬಗೆಗಿನ ಆತನ ...ವೇನು? ಅಲ್ಪಸಂಖ್ಯಾತರ ಕುರಿತು ಆತನ ...ಪ್ರಾಯವೇನು?' ಎಂಬುದು.

ಮೊದಲು ಅಲ್ಪಸಂಖ್ಯಾತರ ಕುರಿತು ನೋಡೋಣ. ... ಆರೆಸ್ಸೆಸ್ ಪ್ರಾಡಕ್ಟ್ ಆದ ಕೋವಿಂದ್ ...ಸಂಖ್ಯಾತರ ವಿರೋಧಿ. 2009ರಲ್ಲಿ ರಂಗನಾಥ್ ...ಶ್ರಾ ಆಯೋಗವು ಸರ್ಕಾರಿ ನೌಕರಿ ...ಸಲಾತಿಯಲ್ಲಿ ಮುಸಲ್ಮಾನರಿಗೆ ಶೇ. 10 ಮತ್ತು ...ಯನ್ನರಿಗೆ ಶೇ. 5 ಮೀಸಲಿಡಬೇಕೆಂದೂ, ಬೇರೆ ...ರ್ಮಗಳಲ್ಲಿರುವ ದಲಿತರನ್ನೂ ಪರಿಶಿಷ್ಟ ...ತಿಯವರು ಎಂದು ಪರಿಗಣಿಸಬೇಕೆಂದೂ ಶಿಫಾರಸ್ಸು ...ಡಿತ್ತು, ಆಗಿನ ಕಾಂಗ್ರೆಸ್ ಸರ್ಕಾರ ಈ ಕುರಿತು ...ಬೀರ ಚರ್ಚೆಯನ್ನೂ ಶುರುಮಾಡಿತ್ತು, ಆಗ ಬಿಜೆಪಿ ...ರ ವಿರುದ್ಧ ಬೊಬ್ಬೆ ಹೊಡೆದಿತ್ತು, ಅದೇ ...ತ್ತಿನಲ್ಲಿ ಈ ಕೋವಿಂದ್ ಬಿಜೆಪಿಯ ವಕ್ತಾರನಾಗಿದ್ದ. ...ಟೈಮ್ಸ್ ಆಫ್ ಇಂಡಿಯಾದಲ್ಲಿ ಪ್ರಕಟಗೊಂಡಿರುವ ...ದಿಯ ಪ್ರಕಾರ 2010 ಮಾರ್ಚ್ ತಿಂಗಳಲ್ಲಿ ...ವಿಂದ್ ಒಂದು ಪತ್ರಿಕಾಗೋಷ್ಠಿ ಕರೆದ. ಅವತ್ತು ... ಪತ್ರಕರ್ತ "ಮುಸಲ್ಮಾನರಿಗೆ ಮತ್ತು ...ಯನ್ನರಿಗೆ ಮೀಸಲಾತಿ ಕೊಡಬೇಕೆಂದಿರುವ ಮಿಶ್ರಾ ...ಯೋಗದ ಶಿಫಾರಸ್ಸಿನ ಬಗ್ಗೆ ನಿಮ್ಮ ...ಪ್ರಾಯವೇನು?" ಎಂದು ಪ್ರಶ್ನಿಸಿದ್ದ.

ಅದಕ್ಕೆ ಕೋವಿಂದ್ ಕೊಟ್ಟ ಉತ್ತರ ಹೀಗಿತ್ತು: ...ದು ಸಾಧ್ಯವಿಲ್ಲ. ಮೀಸಲಾತಿ ಬರೀ ಹಿಂದೂ ...ತರಿಗೆ ಮಾತ್ರ ಇರಬೇಕು. ಆದ್ದರಿಂದ ...ಸಲ್ಮಾನರಿಗೆ ಮತ್ತು ಕ್ರಿಶ್ಚಿಯನ್ನರಿಗೆ ಮೀಸಲಾತಿ ...ಡುವುದು ಸಂವಿಧಾನ ವಿರೋಧಿ ಕ್ರಮವಾಗುತ್ತದೆ" ...ದಿದ್ದ.

ಆಗ ಪತ್ರಕರ್ತ "ಆದರೆ ಸಿಖ್ ...ದಾಯದಲ್ಲಿರುವ ದಲಿತರು ಮೀಸಲಾತಿಯ ...ಲಾಭವನ್ನು ಪಡೆಯುತ್ತಿದ್ದಾರಲ್ಲ?" ಎಂದು ...ಪ್ರಶ್ನೆ ಹಾಕಿದ್ದ.

ಅದಕ್ಕೆ ಕೋವಿಂದ್ ನೀಡಿದ ಪ್ರತಿಕ್ರಿಯೆ ಹೀಗಿತ್ತು: "ಇಸ್ಲಾಂ ಮತ್ತು ಕ್ರಿಶ್ಚಿಯನ್ ಧರ್ಮಗಳು ಭಾರತೀಯ ಧರ್ಮಗಳಲ್ಲ." ಅರ್ಥಾತ್ ಈತನ ಪ್ರಕಾರ ಅವೆರಡೂ ಧರ್ಮಗಳು ಬೇರೆ ದೇಶಗಳಲ್ಲಿ ಜನಿಸಿದ್ದರಿಂದ ಭಾರತೀಯ ಮುಸಲ್ಮಾನರು ಮತ್ತು ಕ್ರಿಶ್ಚಿಯನ್ನರು ಬೇರೆ ದೇಶಗಳಿಗೆ ಸೇರಿದವರು. ಇದು ಚೆಡ್ಡಿ ನಾಯಕ ಗೋಲ್ವಾಲ್ಕರ್‌ನ ಅಭಿಪ್ರಾಯಕ್ಕಿಂತ ಹೇಗೆ ಭಿನ್ನ?

ಸಾಚಾರ್ ವರದಿಯು ಭಾರತದಲ್ಲಿ ಮುಸಲ್ಮಾನರ ಆರ್ಥಿಕ, ಸಾಮಾಜಿಕ ಸ್ಥಿತಿಗತಿ ದಲಿತರಿಗಿಂತಲೂ ಕೆಟ್ಟದಾಗಿದೆ ಎಂದು ಹೇಳಿದ್ದರೂ ಈ ಬಗ್ಗೆ ಕೋವಿಂದ್ ಅಭಿಪ್ರಾಯ ಭಿನ್ನವಾದದ್ದು ಮಾತ್ರವಲ್ಲ, ವಿಚಿತ್ರವೂ ಆಗಿದೆ. "ಪರಿಶಿಷ್ಟ ಜಾತಿಯ ಮಕ್ಕಳಿಗಿಂತಲೂ ಮತಾಂತರಗೊಂಡಿರುವ ಮುಸಲ್ಮಾನರ ಮಕ್ಕಳು ಪಡೆಯುವ ಶಿಕ್ಷಣ ಉತ್ತಮವಾದದ್ದು. ಯಾಕೆಂದರೆ, ಎಲ್ಲರಿಗೂ ಗೊತ್ತಿರುವಂತೆ ಅವರುಗಳು ಕಾನ್ವೆಂಟ್‌ಗಳಲ್ಲಿ ಶಿಕ್ಷಣ ಪಡೆಯುತ್ತಾರೆ. ಆದ್ದರಿಂದ ಅವರಿಗೆ ಸರ್ಕಾರಿ ನೌಕರಿಗಳಲ್ಲಿ ಮೀಸಲಾತಿ ನೀಡಿದರೆ ಮತಾಂತರಗೊಂಡಿರುವವರ ಮಕ್ಕಳು ಎಲ್ಲಾ ಹುದ್ದೆಗಳನ್ನು ಕಬ್ಜಾ ಮಾಡಿಕೊಳ್ಳುತ್ತಾರೆ. ಅದಕ್ಕಿಂತ ಮುಖ್ಯವಾಗಿ ಅವರಿಗೆ ಮೀಸಲಾತಿ ಕೊಟ್ಟರೆ ಪಂಚಾಯತಿ ಮಟ್ಟದಿಂದ ಹಿಡಿದು ಲೋಕಸಭೆ ತನಕ ಅವರು ಮೀಸಲು ಕ್ಷೇತ್ರಗಳಲ್ಲಿ ಸ್ಪರ್ಧಿಸುತ್ತಾರೆ. ಹಾಗಾದಾಗ, ಅದು ಮತಾಂತರಕ್ಕೆ ಪುಷ್ಟಿ ಕೊಟ್ಟು ಭಾರತೀಯ ಸಮಾಜವನ್ನೇ ನಾಶಮಾಡುತ್ತದೆ."

ಇನ್ನು ದಲಿತರ ಬಗ್ಗೆ ಮತ್ತು ಅವರ ಮೇಲೆ ನಡೆಯುವ ದೌರ್ಜನ್ಯದ ಬಗ್ಗೆ ಈ ಕೋವಿಂದ್‌ನ ನಿಲುವು ಏನೆಂದು ನೋಡೋಣ.

ದಿ ವೈರ್.ಇನ್‌ನಲ್ಲಿ ಅಜೋಯ್ ಆಶೀರ್ವಾದ್ ಮಹಾಪ್ರಶಸ್ತ ಎಂಬುವವರು ಬರೆದಿರುವ ಲೇಖನದ ಸಂಕ್ಷಿಪ್ತ ವಿವರ ಹೀಗಿದೆ: "ಭಾರತೀಯ ದಲಿತರ ಆರ್ಥಿಕ ಮತ್ತು ಸಾಮಾಜಿಕ ಭವಿಷ್ಯ ಕುರಿತು ಅಮೆರಿಕದ ರಾಯಭಾರಿ ಅಧಿಕಾರಿಗಳು 2005ರಲ್ಲಿ ಒಂದು ಗುಪ್ತ ವರದಿಯನ್ನು ತಯಾರಿಸಿದ್ದರು. ಆ ವರದಿಯನ್ನು ವಿಕಿಲೀಕ್ಸ್ ಸೋರಿಕೆ ಮಾಡಿತ್ತು. ಆ ವರದಿಯು ಕೋವಿಂದ್, ಜಾತಿ ವ್ಯವಸ್ಥೆ ಕುರಿತು ಸಂಘಪರಿವಾರ ತಾಳಿರುವ ನಿಲುವನ್ನೇ ಹೊಂದಿದ್ದಾನೆ ಎಂದು ಸ್ಪಷ್ಟಪಡಿಸಿತ್ತು. ಯಾಕೆಂದರೆ ಕೋವಿಂದ್ ಪ್ರಕಾರ ಬಿ.ಆರ್.ಅಂಬೇಡ್ಕರ್ ತರಹದ ಭಾರತೀಯ ನಾಯಕರು ಪ್ರತಿಪಾದಿಸಿದ ಜಾತಿವಿನಾಶಕ್ಕಿಂತಲೂ ಸಂಘಪರಿವಾರ ಹಿಂದೂ ಜಾತಿವ್ಯವಸ್ಥೆಯಲ್ಲಿ ಸುಧಾರಣೆ ತರುವುದರಿಂದ ತಾರತಮ್ಯ ಕಡಿಮೆ ಆಗುತ್ತದೆ ಎಂದೇ ನಂಬಿದ್ದಾನೆ. ಹಾಗೆಯೇ ಭಾರತದ ಗ್ರಾಮೀಣ ಪ್ರದೇಶಗಳಲ್ಲಿ ದಲಿತರ ಮೇಲೆ ವ್ಯಾಪಕ ದೌರ್ಜನ್ಯ ನಡೆಯುತ್ತಿದೆ ಎಂದೇ ಅಂಕಿ–ಅಂಶಗಳು ಸಾಬೀತುಪಡಿಸಿದ್ದರೂ ಕೋವಿಂದ್ "ಜಾತಿ ತಾರತಮ್ಯ ಕುಗ್ಗುತ್ತಿದ್ದು, ಈಗ ಕೆಲಸ ಕೊಡುವಾಗ ಯಾರೂ ಜಾತಿಯನ್ನು ಪರಿಗಣನೆಗೆ ತೆಗೆದುಕೊಳ್ಳುವುದಿಲ್ಲ" ಎಂದು ವಾದಿಸುತ್ತಾನೆ.

ಯುಜಿಸಿಯ ಮಾಜಿ ಅಧ್ಯಕ್ಷ ಮತ್ತು ಚಿಂತಕ ಎಸ್.ಕೆ. ಥೋರಟ್ ತರಹದವರು ಮೀಸಲಾತಿ ಪದ್ಧತಿಯು "ಭಾಗಶಃ ಯಶಸ್ವಿಯಾಗಿರುವುದರಿಂದ ಖಾಸಗಿ ವಲಯದಲ್ಲೂ ಮೀಸಲಾತಿಯನ್ನು ಜಾರಿಗೆ ತರಬೇಕು" ಎಂದು ವಾದಿಸಿದರೆ ಕೋವಿಂದ್ "ದಲಿತರ ಹಕ್ಕುಗಳನ್ನು ಹೆಚ್ಚಿಸುವಲ್ಲಿ ಮೀಸಲಾತಿ ಭಾರಿ ಪ್ರಮಾಣದಲ್ಲಿ ಯಶಸ್ವಿಯಾಗಿದೆ" ಎಂದೇ ವಾದಿಸುತ್ತಾನೆ. ಥೋರಟ್ ತರಹದವರು ಶೇ. 5 ರಷ್ಟು ದಲಿತರಿಗೆ ಮಾತ್ರ ಮೀಸಲಾತಿಯಿಂದ ಉಪಯೋಗವಾಗಿದ್ದು, ಈಗಲೂ ಹೆಚ್ಚಿನ ದಲಿತರು ಕಡಿಮೆ ಆದಾಯ ತರುವ ವೃತ್ತಿಗಳಲ್ಲಿದ್ದಾರೆ ಎಂದು ಅಭಿಪ್ರಾಯಪಟ್ಟರೆ, ಕೋವಿಂದ್ "ಭೇದಭಾವಕ್ಕೆ ಕಾರಣ ಆರ್ಥಿಕ ಸ್ಥಿತಿಗತಿಯೇ ಹೊರತು ಜಾತಿ ಅಲ್ಲ, ಉಳ್ಳವರು ಬಡವರ ವಿರುದ್ಧ ಭೇದಭಾವವನ್ನು ಮುಂದುವರೆಸುತ್ತಾ ಬಂದಿದ್ದಾರೆಯೇ ಹೊರತು ಜಾತಿಯ ಕಾರಣಕ್ಕೆ ಅಲ್ಲ" ಎನ್ನುತ್ತಾನೆ. ಮಾತ್ರವಲ್ಲ, ಜಾತಿವ್ಯವಸ್ಥೆಯನ್ನು ಊಳಿಗಮಾನ್ಯ ಯುರೋಪಿನಲ್ಲಿದ್ದ ವೃತ್ತಿ ಸಂಘಗಳಿಗೆ ಹೋಲಿಸುವ ಕೋವಿಂದ್ "ಜಾತಿವ್ಯವಸ್ಥೆಯೂ ಆ ವೃತ್ತಿ ಸಂಘಗಳು ರೀತಿಯೇ ಕೆಲಸ ಮಾಡುತ್ತಿತ್ತು. ಜನರು ಹುಟ್ಟನಿಂದಲೇ ವೃತ್ತಿಯನ್ನು ಪಡೆಯುತ್ತಿದ್ದರು. ಈಗ ಜಾತಿ ಎಂಬ ಅಂಶ ವೃತ್ತಿ ಮತ್ತು ಜೀವನೋಪಾಯಗಳನ್ನು ರಕ್ಷಿಸಿಕೊಳ್ಳಲು ಬಳಕೆಯಾಗುತ್ತಿದೆಯೇ ಹೊರತು ಬೇರೆ ಯಾವುದಕ್ಕೂ ಅಲ್ಲ" ಎನ್ನುತ್ತಾನೆ. ಕೋವಿಂದ್ ಅವರ ವಾದ ಸಂಘಪರಿವಾರ ಹಲವಾರು ವರ್ಷಗಳಿಂದ ಪ್ರತಿಪಾದಿಸಿಕೊಂಡು ಬರುತ್ತಿರುವ ವಾದವನ್ನೇ ಸಮರ್ಥಿಸುತ್ತದೆ. ಉದಾಹರಣೆಗೆ ಆರೆಸ್ಸೆಸ್ ಸರಸಂಘಚಾಲಕ ಮೋಹನ್ ಭಾಗವತ್ 2010ರಲ್ಲಿ ಮೀಸಲಾತಿಗೆ ಆರ್ಥಿಕ ಸ್ಥಿತಿಗತಿ ಆಧಾರವಾಗಬೇಕೆ ಹೊರತು ಜಾತಿ ಅಲ್ಲ ಎಂದಿದ್ದು ಜನರಿಗೆ ಇನ್ನೂ ನೆನಪಿದೆ."

ಇವತ್ತು ಸಂಘಪರಿವಾರ ಕೋವಿಂದ್ ತನ್ನ ಜೀವನದುದ್ದಕ್ಕೂ ಶೋಷಿತರ ಮತ್ತು ದಮನಿತರ ಪರವಾಗಿ ಕೆಲಸ ಮಾಡಿರುವ ಪ್ರಾಮಾಣಿಕ ವ್ಯಕ್ತಿ ಎಂದು ಪ್ರಚಾರ ಮಾಡುತ್ತಿದೆ. ಈ ಕೋವಿಂದ್ ನಿಜವಾಗಲೂ ಎಷ್ಟು ಪ್ರಾಮಾಣಿಕ ಮತ್ತು ಪ್ರಾಮಾಣಿಕರ ಪರ ನಿಲ್ಲುವ ವ್ಯಕ್ತಿ ಎಂದು ಅದೇ ದಿವೈರ್.ಇನ್‌ನಲ್ಲಿ ಅನೂ ಭುಯಾನ್ ಎಂಬುವವರು ಬರೆದಿರುವ ಲೇಖನ ತೆರೆದಿಡುತ್ತದೆ.

ಅನೂ ಭುಯಾನ್ ಹೀಗೆ ಬರೆಯುತ್ತಾರೆ: "ಇವತ್ತಿನ ಬಿಜೆಪಿಯ ರಾಷ್ಟ್ರಪತಿ ಅಭ್ಯರ್ಥಿಯು 2012ರಲ್ಲಿ ಭ್ರಷ್ಟಾಚಾರ ಎಸಗಿದ ಕಾರಣಕ್ಕೆ ಶಿಕ್ಷೆಗೆ ಗುರಿಯಾಗಿದ್ದ ಬಿಜೆಪಿಯ ಅಧ್ಯಕ್ಷ ಬಂಗಾರು ಲಕ್ಷ್ಮಣ್ ಪರ ನ್ಯಾಯಾಲಯದಲ್ಲಿ ಸಾಕ್ಷ್ಯ ನೀಡಿದ್ದರು. ಭ್ರಷ್ಟಾಚಾರದ ವಿರುದ್ಧ ಹೋರಾಡುತ್ತೇನೆಂದು ಹೇಳುವ ಬಿಜೆಪಿ ಇವತ್ತು ಒಬ್ಬ ಭ್ರಷ್ಟನ ಪರವಾಗಿ ಸಾಕ್ಷಿ ನೀಡಿದ್ದವನನ್ನೇ ಈ ಹುದ್ದೆಗೆ ಅಭ್ಯರ್ಥಿಯಾಗಿ ಆಯ್ಕೆ ಮಾಡಿರುವುದು ವಿಚಿತ್ರವಾಗಿದೆ.

2012ರ 'ಸಿಬಿಐ ವರ್ಸಸ್ ಬಂಗಾರು ಲಕ್ಷ್ಮಣ್' ಕೇಸಿನಲ್ಲಿ ಸಾಕ್ಷ್ಯ ನೀಡಿದ ಕೋವಿಂದ್ "ಬಂಗಾರು ಲಕ್ಷ್ಮಣ್ ಅವರನ್ನು ನಾನು ಇಪ್ಪತ್ತು ವರ್ಷಗಳಿಂದ ಬಲ್ಲೆ. ಅವರು ನೇರನುಡಿಯ, ಸರಳ ಮತ್ತು ಪ್ರಾಮಾಣಿಕ ವ್ಯಕ್ತಿ" ಎಂದಿದ್ದರು. ಅದೇ ಸಾಕ್ಷ್ಯದಲ್ಲಿ ಕೋವಿಂದ್ "ತೆಹೆಲ್ಕಾದವರು ಬಂಗಾರು ಲಕ್ಷ್ಮಣ್ ಅವರ ಮೇಲೆ ಸ್ಟಿಂಗ್ ಆಪರೇಶನ್ ಮಾಡಿ ಒಂದು ಲಕ್ಷ ಲಂಚ ಪಡೆದಿದ್ದನ್ನು ಮತ್ತು ಉಳಿದ ಹಣವನ್ನು ಡಾಲರ್‌ಗಳಲ್ಲಿ ಕೊಡಬೇಕು ಎಂದಿದ್ದನ್ನೂ ಸೆರೆಹಿಡಿದು ಪ್ರಸಾರ ಮಾಡಿದರು. ಅದನ್ನು ನೋಡಿ ನಾನು ಬಂಗಾರು ಲಕ್ಷ್ಮಣ್ ಅವರನ್ನು ಭೇಟಿಯಾದೆ. ಲಕ್ಷ್ಮಣ್ ತಾವು ಲಂಚ ಪಡೆದಿಲ್ಲ ಎಂದೂ, ತಮ್ಮನ್ನು ಬೇಕಂತಲೇ ಫಿಕ್ಸ್ ಮಾಡಲಾಗಿದೆ ಎಂದೂ ನನಗೆ ಹೇಳಿದರು" ಎಂದಿದ್ದರು.

ತನ್ನ ಪರವಾಗಿ ನ್ಯಾಯಾಲಯದ ಮುಂದೆ ಬಂಗಾರು ಲಕ್ಷ್ಮಣ್ ಇಬ್ಬರನ್ನು ಮಾತ್ರ ಸಾಕ್ಷ್ಯ ನುಡಿಯಲು ಕರೆಸಿದ್ದರು. ಒಬ್ಬಾತ ಕಂಪ್ಯೂಟರ್ ಪದವೀಧರ ಕಾರ್ತಿಕ್ ಗೋದಾವರ್ತಿ ಎಂಬಾತನಾದರೆ, ಮತ್ತೊಬ್ಬ ಕೋವಿಂದ್. ಬಿಜೆಪಿಯ ಮತ್ತಿನ್ಯಾರೂ ಆತನ ಪರ ನ್ಯಾಯಾಲಯದಲ್ಲಿ ಮಾತನಾಡಲು ಸಿದ್ಧರಿರಲಿಲ್ಲ."

ಈ ಹಿಂದೆ ರಾಷ್ಟ್ರಪತಿಯಾಗಿದ್ದ ಕೆ.ಆರ್.ನಾರಾಯಣನ್ ಅವರೊಂದಿಗೆ ಇವತ್ತು ಚೆಡ್ಡಿಗಳು ಕೋವಿಂದ್‌ನನ್ನು ಹೋಲಿಸುತ್ತಿದ್ದಾರೆ. ಆದರೆ ಅವರಿಬ್ಬರ ನಡುವೆ ಅಜಗಜಾಂತರ ವ್ಯತ್ಯಾಸಗಳಿವೆ. ಭಾರತದ ಹತ್ತನೇ ರಾಷ್ಟ್ರಪತಿಯಾಗಿದ್ದ ನಾರಾಯಣನ್ ಅವರು ತಮ್ಮ ವೃತ್ತಿ ಜೀವನವನ್ನು ಐಎಫ್‌ಎಸ್ ಆಫೀಸರ್ ಆಗಿ ಪ್ರಾರಂಭಿಸಿದವರು. ಹತ್ತಾರು ದೇಶಗಳಲ್ಲಿ ಭಾರತಕ್ಕಾಗಿ ದುಡಿದವರು. ಇಂದಿರಾ ಗಾಂಧಿಯವರು ನೀಡಿದ ಸಲಹೆಯಂತೆ ರಾಜಕೀಯ ರಂಗವನ್ನು ಪ್ರವೇಶಿಸಿ ಮೂರು ಬಾರಿ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಿ, ಗೆದ್ದು ಕೇಂದ್ರದಲ್ಲಿ ಸಚಿವರಾಗಿದ್ದರು.


ಈಗ ದೇಶದ ಹದಿನಾಲ್ಕನೆ ರಾಷ್ಟ್ರಪತಿಯಾಗಲಿರುವ ಕೋವಿಂದ್ ಸಾಗಿ ಬಂದಿರುವ ದಾರಿಯನ್ನೊಮ್ಮೆ ನೋಡಿ. ಈತ 16 ವರ್ಷ ವಕೀಲ ಆಗಿದ್ದಾತ. ಅಲ್ಲಿಯತನಕ ಬ್ರಾಹ್ಮಣರ ಪಕ್ಷ ಎಂದೇ ಪರಿಗಣಿಸಲಾಗುತ್ತಿದ್ದ ಬಿಜೆಪಿಯನ್ನು 1991ರಲ್ಲಿ ಸೇರಿದ ಪ್ರಥಮ ದಲಿತರಲ್ಲಿ ಈತನೂ ಒಬ್ಬ. ಅಲ್ಲಿಂದ ಇಲ್ಲಿಯ ತನಕ ಈತ ಸದಾ ಆರೆಸ್ಸೆಸ್‌ಗೆ ಸೇವೆ ಸಲ್ಲಿಸುವ ಮೂಲಕ ಮೇಲು ಜಾತಿಯ ಸೇವೆ ಮಾಡಿಕೊಂಡು ಬಂದಿರುವ ವ್ಯಕ್ತಿ. ಟೈಮ್ಸ್ ಆಫ್ ಇಂಡಿಯಾ ವರದಿಯೊಂದರ ಪ್ರಕಾರ ಈತನನ್ನು ಬಿಜೆಪಿ ಉತ್ತರ ಪ್ರದೇಶದ ಘಟಂಪುರ್ ಎಂಬ ಕ್ಷೇತ್ರದಿಂದ (ಅದು ವಿಧಾನಸಭಾ ಕ್ಷೇತ್ರವೋ, ಲೋಕಸಭಾ ಕ್ಷೇತ್ರವೋ ಎಂಬುದು ಸ್ಪಷ್ಟವಿಲ್ಲ) ಚುನಾವಣಾ ಕಣಕ್ಕೆ ಇಳಿಸಿತ್ತು. ಆದರೆ ಈತ ಸೋತ. ಅನಂತರ 2007ರಲ್ಲಿ ಕೋವಿಂದ್‌ನನ್ನು ಬಿಜೆಪಿ ಮತ್ತೊಮ್ಮೆ ಭೋಗ್ನಿಪುರ್ ಎಂಬ ವಿಧಾನಸಭಾ ಕ್ಷೇತ್ರದಿಂದ ತನ್ನ ಅಭ್ಯರ್ಥಿಯಾಗಿಸಿತ್ತು. ಆಗಲೂ ಆತ ಸೋತ. ಹೀಗೆ ಸಾಮಾನ್ಯ ಜನರ ಬೆಂಬಲವನ್ನೂ ಪಡೆಯಲಾಗದ ಕೋವಿಂದ್‌ನನ್ನು ಬಿಜೆಪಿ ಎರಡು ಬಾರಿ ರಾಜ್ಯಸಭೆಗೆ ಕಳುಹಿಸಿತ್ತು. ಅದೇ ಈ ವ್ಯಕ್ತಿಯ ಸಾಧನೆ. ಆದರೂ ಮೋದಿ ಈತನ ಬಗ್ಗೆ ಹೀಗೆ ಮೊನ್ನೆ ಟ್ವೀಟ್ ಮಾಡಿದ್ದ: "ಶ್ರೀ ರಾಮ್‌ನಾಥ್ ಕೋವಿಂದ್ ಅವರು ಓರ್ವ ಅಸಾಧಾರಣ ರಾಷ್ಟ್ರಪತಿ ಆಗುತ್ತಾರೆ ಮತ್ತು ಬಡವರ, ದಮನಿತರ ಹಾಗೂ ಸಮಾಜದ ಅಂಚಿಗೆ ದೂಡಲ್ಪಟ್ಟವರ ಪರವಾದ ಗಟ್ಟಿ ದನಿಯಾಗಿರುತ್ತಾರೆ ಎಂಬ ಭರವಸೆ ನನಗಿದೆ."

ಅಂದಹಾಗೆ, ಈ ಕೋವಿಂದ್ ಅದೆಷ್ಟು ದಲಿತರ ಪರ ದನಿ ಎತ್ತುವ ವ್ಯಕ್ತಿ ಎಂದರೆ ರೋಹಿತ್ ವೇಮುಲ ಎಂಬ ಪ್ರತಿಭಾವಂತ ವಿದ್ಯಾರ್ಥಿಯನ್ನು ಸಾಂಸ್ಥಿಕ ಕೊಲೆಗೆ ದೂಡಿದರೂ, ಊನಾದಲ್ಲಿ ಸತ್ತ ದನದ ಚರ್ಮ ಸುಲಿದಿದ್ದಕ್ಕೆ ದಲಿತರನ್ನು ಬಡಿದರೂ ಚೆಡ್ಡಿ ಘೋಷಿತ ದಲಿತರ ನಾಯಕ ಕೋವಿಂದ್ ತುಟಿಪಿಟಿಕ್ ಎನ್ನುವುದಿಲ್ಲ. ರಾಜಸ್ಥಾನದಲ್ಲಿ ಮೋದಿ ಸರ್ಕಾರ ಕಟ್ಟಿಸಿದ ಶೌಚಾಲಯದಲ್ಲಿ ನೀರು ಇಲ್ಲದ್ದರಿಂದ ಅದು ಗಲೀಜಾಗಿದ್ದಕ್ಕೆ ಮಹಿಳೆಯರು ಹೊಲದಲ್ಲಿ ಮೂತ್ರ ಮಾಡಲು ಹೊರಟಾಗ ಅದರ ಫೋಟೊ ತೆಗೆಯಲು ಅಧಿಕಾರಿಗಳು ಸಜ್ಜಾದಾಗ ಅದನ್ನು ವಿರೋಧಿಸಿದ ಜಾಫರ್ ಖಾನ್ ಎಂಬ ಮುಸಲ್ಮಾನನನ್ನು ಬಡಿದು ಸಾಯಿಸಿದರೂ ಈ ದಮನಿತರ ನಾಯಕ ಮಾತನಾಡುವುದಿಲ್ಲ.

ಇಂತಹ ಚೆಡ್ಡಿ ದಲಿತನಿಂದ ಈ ದೇಶದ ದಮನಿತರಿಗೆ, ಬಡವರಿಗೆ, ಶೋಷಿತರಿಗೆ, ಅಂಚಿಗೆ ದೂಡಲ್ಪಟ್ಟವರಿಗೆ, ಬಡ ಅಲ್ಪಸಂಖ್ಯಾತರಿಗೆ ಆಗುವ ಉಪಯೋಗವಾದರೂ ಎಂಥದ್ದು! ■



ಆಪರೇಷನ್ ಬಸವಣ್ಣ



ಕಲ್ಲು ಚಿಕ್ಕದೇ. ಆದರೆ ಬಿದ್ದ ಪೆಟ್ಟು ಚಿಕ್ಕದಲ್ಲ. ಯಾವ ಲಿಂಗಾಯತರನ್ನು ಹರಕೆಯ ಕುರಿಗಳೋಪಾದಿಯಲ್ಲಿ ಬಿಜೆಪಿ ತನ್ನ ಪಿತ್ರಾರ್ಜಿತ ಪಾಲೆಂಬಂತೆ ಮೆರೆಯುತ್ತಿತ್ತೋ, ಯಡಿಯೂರಪ್ಪನನ್ನು ಲಿಂಗಾಯತರೆಲ್ಲ ಸೇರಿ ಇನ್ನೇನು ಮುಖ್ಯಮಂತ್ರಿ ಪಟ್ಟಕ್ಕೇರಿಸೇಬಿಟ್ಟರೋ ಎಂಬಂತೆ ಲಿಂಗವಂತ ಭ್ರಷ್ಟ ಅಧಿಕಾರಿ ಕೂಟವೊಂದು ಬೊಬ್ಬೆ ಹಾಕುತ್ತಿತ್ತೋ, ಅದಕ್ಕೆ ಸಿಎಂ ಸಿದ್ದು ಕೊಟ್ಟ ಪೆಟ್ಟು ಸಣ್ಣದೇನಲ್ಲ!

ಇಷ್ಟೆಲ್ಲಕ್ಕೂ ಕಾರಣವಾಗಿದ್ದು ಜೂನ್ 14ರಂದು ಬೆಂಗಳೂರಿನ ಅರಮನೆ ಮೈದಾನದಲ್ಲಿ ನಡೆದ ಅಖಿಲ ಭಾರತ ವೀರಶೈವ ಮಹಾಸಭಾದ ವಿಶೇಷ ಸಮ್ಮೇಳನ. ಮುಖ್ಯಮಂತ್ರಿ ಸಿದ್ದರಾಮಯ್ಯನವರ ಅಭಿನಂದನೆಗೆಂದೇ ಕರ್ನಾಟಕದ ಸಮಸ್ತ ವೀರಶೈವ ಲಿಂಗಾಯತರ ಪ್ರಾತಿನಿಧಿಕ ಸಂಘಟನೆಯಾದ ವೀರಶೈವ ಮಹಾಸಭಾ ಹೆಚ್ಚೂಕಮ್ಮಿ 40 ಸಾವಿರಕ್ಕೂ ಅಧಿಕ ಮಂದಿ ಲಿಂಗಾಯತರನ್ನು ಅರಮನೆ ಮೈದಾನದಲ್ಲಿ ಕಲೆ ಹಾಕಿತ್ತು. ಹಾಗೆ ಮುಖ್ಯಮಂತ್ರಿ ಸಿದ್ದರಾಮಯ್ಯನವರನ್ನು ಅಷ್ಟೊಂದು ಮಂದಿ ಲಿಂಗಾಯತರನ್ನು ಜಮಾಯಿಸಿ ಹಿಂದ್ಯಾವತ್ತೂ ಇಲ್ಲದಂತೆ ರಾಜ್ಯದ ಮುಖ್ಯಮಂತ್ರಿಯೊಬ್ಬರನ್ನು ವಿಶೇಷವಾಗಿ ಅಭಿನಂದಿಸಲು ಇದ್ದ ಕಾರಣಗಳೇನೂ ಮಾಮೂಲಿಯದ್ದಾಗಿರಲಿಲ್ಲ.

ಈ ಪೈಕಿ ಮೊದಲನೆಯದ್ದು ಬಿಜಾಪುರದ ಮಹಿಳಾ ವಿಶ್ವವಿದ್ಯಾಲಯಕ್ಕೆ ಅಕ್ಕಮಹಾದೇವಿ ವಿಶ್ವವಿದ್ಯಾಲಯವೆಂದು ಪುನರ್‌ನಾಮಕರಣ ಮಾಡಿದ್ದಾದರೆ ಅದಕ್ಕಿಂತಲೂ ಮಹತ್ವದ ಸರ್ಕಾರಿ ಕೊಡುಗೆಯೆಂದರೆ ರಾಜ್ಯದ ಎಲ್ಲಾ ಸರ್ಕಾರಿ ಕಚೇರಿಗಳಲ್ಲಿ ಕ್ರಾಂತಿಯೋಗಿ ಬಸವಣ್ಣನವರ ಭಾವಚಿತ್ರ ಹಾಕುವಂತೆ ಆದೇಶ ಹೊರಡಿಸಿದ್ದು!

ಇವೆರಡೂ ಕರ್ನಾಟಕದ ಬೇರೆ ಬೇರೆ ಸಮುದಾಯಗಳ ಪಾಲಿಗೆ ಅಂಥಾ ವಿಶೇಷವೇನೂ ಅಲ್ಲವೆನಿಸಬಹುದು ಅಥವಾ ಅಕ್ಕ ಮಹಾದೇವಿ, ಬಸವಣ್ಣನಂಥ ಶಿವಶರಣರಿಗೂ ಚಾತುರ್ವರ್ಣದ ಜಾತಿಯ ವಿಷಗಾಳಿ ಸೋಕಿದ ಫಲವಿರಲೂಬಹುದು. ಆದರೆ ಕರ್ನಾಟಕದ ಲಿಂಗಾಯತರ ಮಟ್ಟಿಗೆ ಹೇಳುವುದಾದರೆ ಮುಖ್ಯಮಂತ್ರಿ ಸಿದ್ದು ಮಾಡಿದ ಇವೆರಡೂ ಸಾಧನೆಗಳ ಹಿಂದೆ ದಶಕಗಟ್ಟಲೇ ಹೋರಾಟವಿತ್ತು. ಬಿಜಾಪುರದ ಮಹಿಳಾ ವಿಶ್ವವಿದ್ಯಾಲಯಕ್ಕೆ ಅಕ್ಕಮಹಾದೇವಿಯ ಹೆಸರಿಡುವಂತೆ ಕಳೆದೆರಡು ದಶಕಗಳಿಂದ ಹೋರಾಟ ನಡೆಯುತ್ತಲೇ ಇದೆ. ಲಿಂಗಾಯತ ಮುಖ್ಯಮಂತ್ರಿಗಳೆನಿಸಿಕೊಂಡ ಜೆ.ಹೆಚ್. ಪಟೇಲ್, ಯಡಿಯೂರಪ್ಪ, ಜಗದೀಶ್ ಶೆಟ್ಟರ್ ಇತ್ಯಾದಿ ಯಾರೊಬ್ಬರಿಂದಲೂ ಅಕ್ಕಮಹಾದೇವಿಯ ಹೆಸರಿಡಲಾಗಲಿಲ್ಲ ಅಥವಾ ಸಾಧ್ಯವಿದ್ದರೂ ಮನಸ್ಸು ಮಾಡಲಿಲ್ಲ. ಇನ್ನು ಕೃಷ್ಣ, ಧರ್ಮಸಿಂಗ್, ಕುಮಾರಸ್ವಾಮಿ, ಸದಾನಂದಗೌಡರಂಥ ಲಿಂಗಾಯತೇತರಾದರೂ ತಾವು ಮುಖ್ಯಮಂತ್ರಿಗಳಾದ ಮೇಲೆ ಅಕ್ಕನ ಹೆಸರಿಡಬೇಕಿತ್ತಲ್ಲವೆ?

ಖುದ್ದು ಲಿಂಗಾಯತರೇ ಮುಖ್ಯಮಂತ್ರಿಗಳಾಗಿ ಮಾಡದೇ ಬಿಟ್ಟಿದ್ದನ್ನು ಇನ್ನು ಲಿಂಗಾಯತರಲ್ಲದ ಮುಖ್ಯಮಂತ್ರಿಗಳಾದರೂ ಏಕೆ ಮಾಡುತ್ತಾರೆ?


ಶಾಮನೂರು ಕಿಡಿ


ಆದರೆ ಸಿದ್ದು ವೈಶಿಷ್ಟ್ಯವೇ ಬೇರೆ ಅವರ ಕಾರ್ಯತಂತ್ರವೇ ನಿಗೂಢ. ಲಿಂಗವಂತ ಪುಂಗವ, ವೀರಶೈವ ವೀರ, ಮಧ್ಯಾಹ್ನ ಬ್ರಾಹ್ಮಣ, ಹಗಲು ಶರಣ, ರಾತ್ರಿ ವೈದಿಕ ಯಡಿಯೂರಪ್ಪ ರಾಜ್ಯ ಬಿಜೆಪಿಗೆ ಅಧ್ಯಕ್ಷರಾದ ನಂತರ ಕರ್ನಾಟಕದ ಜಾತಿವರ್ತುಲದಲ್ಲಿ ನಡೆಯುತ್ತಿರುವ ಕಾರಸ್ಥಾನಗಳಾದರೂ ಎಂಥಾದ್ದು?


ಸಿದ್ದರಾಮಯ್ಯ ಸರ್ಕಾರದಲ್ಲಿ ಲಿಂಗಾಯತರಿಗೆ ಯಾವುದೇ ಬೆಲೆಯಿಲ್ಲ. ಈ ಸರ್ಕಾರ ಲಿಂಗಾಯತರನ್ನು ಇನ್ನಿಲ್ಲದಂತೆ ದಮನಗೈಯುತ್ತಿದೆ. ಇದು ಹೀಗೇ ಮುಂದುವರಿದರೆ ವೀರಶೈವ ಮಹಾಸಭಾ ಬೀದಿಗಿಳಿಯಬೇಕಾಗುತ್ತದೆ.

ಇದು ಯಾರೇ ಲಿಂಗವಂತ ಪುಢಾರಿ ಅಥವಾ ವೀರಶೈವ ಜಾತಿವಾದಿಯೊಬ್ಬನ ಹೇಳಿಕೆಯಾಗಿದ್ದರೆ ಮಾತೇ ಬೇರೆಯಿತ್ತು. ಆದರೆ ಖುದ್ದು ಅಖಿಲ ಭಾರತ ವೀರಶೈವ ಮಹಾಸಭಾದ ಅಧ್ಯಕ್ಷ ಶಾಮನೂರು ಶಿವಶಂಕರಪ್ಪನವರೇ ಹೀಗೆಂದ ಮೇಲೆ ಅದರ ತೂಕವೇ ಬೇರೆ ಲೆಕ್ಕಾಚಾರವೇ ಬೇರೆ. ಶಾಮನೂರು ಕೇವಲ ವೀರಶೈವ ಮಹಾಸಭಾದ ಅಧ್ಯಕ್ಷ ಮಾತ್ರವೇ ಅಲ್ಲ, ಅಧಿಕಾರಸ್ಥ ಕಾಂಗ್ರೆಸ್ಸಿನ ಹಿರಿಯ ನಾಯಕ ಮತ್ತು ಮಾಜಿ ಮಂತ್ರಿ. ಶಾಮನೂರು ಮಾತಿಗೆ ಕರ್ನಾಟಕದ ಲಿಂಗಾಯತರಲ್ಲಿ ಬೇರೆಯದೇ ಗಂಭೀರತೆಯಿದೆ. ರಾಜ್ಯದ ಸಮಸ್ತ ಲಿಂಗಾಯತರ ಪ್ರಾತಿನಿಧಿಕ ಸಂಸ್ಥೆಯಾದ ವೀರಶೈವ ಮಹಾಸಭಾದ ಅಧ್ಯಕ್ಷನಾಗಿ ಸರ್ಕಾರದ ಸೂತ್ರ ಹಿಡಿದ ಪಕ್ಷದ ಓರ್ವ ನಾಯಕರಾಗಿ ತನ್ನದೇ ಸರ್ಕಾರದ ವಿರುದ್ಧ ತನ್ನ ಜನಾಂಗದ ಪರವಾಗಿ ಶಾಮನೂರು ಕಿಡಿಕಾರಿದರೆಂದರೆ ಅದನ್ನು ರಾಜ್ಯದ ಲಿಂಗಾಯತರು ಪರಿಗಣಿಸುವ ರೀತಿಯೇ ಬೇರೆ.


ಅವತ್ತು ಶಾಮನೂರು ಹಾಗೆ ಹೇಳಿದ್ದು ರಾಜ್ಯದ ಲಿಂಗಾಯತ ಸಮೂಹಗಳಲ್ಲಿ ಬೇರೆಯದೇ ಪರಿಣಾಮ ಹುಟ್ಟು ಹಾಕಿತ್ತು. ಶಾಮನೂರರೇ ಹಾಗೆಂದ ಮೇಲೆ ಅದು ಯಡ್ಡಿ ಪಾಲಿಗೆ ರೊಟ್ಟಿ ಜಾರಿ ತುಪ್ಪಕ್ಕೆ ಬಿದ್ದಂತಾಯ್ತು. ಸಿದ್ದು ಸರ್ಕಾರದ ವಿರುದ್ಧ ಲಿಂಗಾಯತರನ್ನು ಎತ್ತಿಕಟ್ಟುವ ರಹಸ್ಯ ಕಾರ್ಯಸೂಚಿಯನ್ನೇ ಬಿಜೆಪಿ ಎಲಿಮೆಂಟುಗಳು ಕೈಗೆತ್ತಿಕೊಂಡವು. ಇದರ ಕಾಲಾಳುಗಳಂತೆ ಯಡ್ಡಿ ಪಟಾಲಮ್ಮಿನ ನೇತೃತ್ವ ವಹಿಸಿದ್ದು ನಿವೃತ್ತ ಐಪಿಎಸ್ ಜ್ಯೋತಿ ಪ್ರಕಾಶ್ ಮಿರ್ಜಿ. ತನ್ನ ಸರ್ವೀಸಿನುದ್ದಕ್ಕೂ ಜಾತಿವೈಷಮ್ಯವನ್ನೇ ಉಸಿರಾಡಿಕೊಂಡು ಬಂದಿದ್ದ ಹುಟ್ಟಾ ಜಾತಿವಾದಿ ಮಿರ್ಜಿ ಜೊತೆಗೆ ನಿವೃತ್ತ ಐಎಎಸ್‌ಗಳಾದ ವಿ.ಪಿ. ಬಳಿಗಾರ್, ಸೋಮಶೇಖರ್, ದ್ಯಾಬೇರಿ ಇತ್ಯಾದಿ ನಿವೃತ್ತ ಲಿಂಗಾಯತ ಅಧಿಕಾರಿಗಳ ಹಿಂಡೇ ಕೈಜೋಡಿಸಿತು.







ಮಿರ್ಜಿ ಪಟಾಲಂ



ಮೇಲುನೋಟಕ್ಕೆ ನೇರವಾಗಿ ಅಲ್ಲದಿದ್ದರೂ ಒಳಗಿಂದೊಳಗೇ ಶಂಕರ್ ಬಿದರಿಯಂಥವರು ಕೂಡ ಇಂಥ ಲಿಂಗಾಯತ ನಿವೃತ್ತರೊಂದಿಗೆ ಸಿದ್ದು ಸರ್ಕಾರದ ವಿರುದ್ಧ ಕೈಜೋಡಿಸಿದ್ದೇನೂ ಗುಟ್ಟಾಗುಳಿಯಲಿಲ್ಲ. ಗುಜರಾತ್‌ನಲ್ಲಿ ಪಟೇಲ್ ಸಮೂಹ, ಹರಿಯಾಣ ಮತ್ತು ಮಧ್ಯಪ್ರದೇಶಗಳಲ್ಲಿ ಜಾಟರು ಬೀದಿಗಿಳಿದ ಹಾಗೆ ಕರ್ನಾಟಕದಲ್ಲಿ ಲಿಂಗಾಯತರನ್ನು ಸಿದ್ದು ಸರ್ಕಾರದ ವಿರುದ್ಧ ಎತ್ತಿಕಟ್ಟುವುದು ಈ ಯಡ್ಡಿ ಪಟಾಲಮ್ಮಿನ ಹುನ್ನಾರವಾಗಿತ್ತು. ಅಂದರೆ ಕಾಂಗ್ರೆಸ್ ಸರ್ಕಾರ ಲಿಂಗಾಯತರನ್ನು ದಮನ ಮಾಡುತ್ತಿದೆ ಎಂದು ಬೊಬ್ಬೆ ಹಾಕುವುದು ಮತ್ತು ಲಿಂಗಾಯತರ ಸೋಗಿನಲ್ಲಿ ಬಿಜೆಪಿಯವರೇ ಬೀದಿಗಿಳಿದು ಬೆಂಕಿ ಹಚ್ಚುವುದು ಇದರ ತಂತ್ರವಾಗಿತ್ತು. ಶುರುವಿನಲ್ಲಿ ಶಾಮನೂರರನ್ನು ಮುಂದಿಟ್ಟುಕೊಂಡೇ ಅಧಿಕೃತ ವೀರಶೈವ ಮಹಾಸಭಾದ ಮೂಲಕವೇ ಕಾಂಗ್ರೆಸ್ ಸರ್ಕಾರದ ವಿರುದ್ಧ ಲಿಂಗಾಯತರ ಪ್ರತಿಭಟನೆ ಎಂಬಂತೆ ಬೀದಿಗಿಳಿಯುವ ಲೆಕ್ಕಾಚಾರ ಈ ಪಟಾಲಮ್ಮಿಗಿತ್ತು. ಹಿರಿಯ ಸಂಘ ಪ್ರಚಾರಕರೊಬ್ಬರು ಈ ನಿಟ್ಟಿನಲ್ಲಿ 'ಸುತ್ತೂರು ಮಠಾಧೀಶರೊಡನೆ ಒಂದು ಸುತ್ತಿನ ಮಾತುಕತೆ ಮಾಡಿದ್ದಾರೆಂಬ ಇಂಟಲಿಜೆನ್ಸ್ ಮಾಹಿತಿಯೂ ಸರ್ಕಾರಕ್ಕಿತ್ತು. ಉತ್ತರ ಕರ್ನಾಟಕದ ಮತ್ತೊಬ್ಬ ಆರ್‌ಎಸ್‌ಎಸ್ ಮುಖಂಡ ಪಂಚಮಶಾಲಿ ಪೀಠದ ಜಯಮೃತ್ಯುಂಜಯ ಸ್ವಾಮಿ ಸೇರಿದಂತೆ ಹಲವು ಲಿಂಗಾಯತ ಮಠಾಧೀಶರನ್ನು ಎತ್ತಿಕಟ್ಟುವ ಪ್ರಯತ್ನಕ್ಕೆ ಮುಂದಾದರು. ಆದರೆ ವೀರಶೈವ ಮಹಾಸಭಾ ಇದಕ್ಕೆ ಸಮ್ಮತಿಸಲಿಲ್ಲ. ಏಕೆಂದರೆ ಮಹಾಸಭಾದ ಹಾಲೀ ಅಧ್ಯಕ್ಷ ಶಾಮನೂರು ಹುಟ್ಟಾ ಕಾಂಗ್ರೆಸ್ಸಿಗ ಮತ್ತು ಏಕಾಏಕಿ ಆರ್‌ಎಸ್‌ಎಸ್ ಹಳ್ಳಕ್ಕೆ ಬೀಳುವಷ್ಟು ಪೆದ್ದರೇನಲ್ಲ. ಮತ್ತೊಂದೆಡೆ ಮಹಾಸಭಾದ ಉಪಾಧ್ಯಕ್ಷ ಈಶ್ವರ್ ಖಂಡ್ರೆ ಕೂಡ ಕಾಂಗ್ರೆಸ್ಸು ಮತ್ತು ಹಾಲೀ ಪೌರಾಡಳಿತ ಸಚಿವರು.

ಹೀಗಾಗಿ ವೀರಶೈವ ಮಹಾಸಭಾ ಪೂರ್ತಿ ಸದ್ಯ ಕಾಂಗ್ರೆಸ್ ಹಿಡಿತದಿಂದಾಚೆಗೆ ಬರುವುದು ಕಷ್ಟವೆ. ಜೊತೆಗೆ ಬಿಜೆಪಿಯ ದಾಳಕ್ಕೆ ತಲೆಕೊಡುವಂಥ ಕ್ಷುಲ್ಲಕರ್ಯಾರೂ ಮಹಾಸಭಾದ ಆಡಳಿತ ಮಂಡಳಿಯಲ್ಲಿರಲಿಲ್ಲ. ಯಾವತ್ತು ಮಹಾಸಭಾದ ಮೂಲಕ ಲಿಂಗಾಯತರನ್ನು ಬೀದಿಗಿಳಿಸಲು ಸಾಧ್ಯವಾಗಲಿಲ್ಲವೋ ಅದಕ್ಕೆ ಯಡ್ಡಿ ಪಟಾಲಂ ಬೇರೆಯದೇ ತಂತ್ರವೊಂದನ್ನು ರೂಪಿಸಿತು. ಅದೂ ನಿವೃತ್ತ ಐಪಿಎಸ್ ಜ್ಯೋತಿಪ್ರಕಾಶ್ ಮಿರ್ಜಿಯ ವಿಶ್ವ ವೀರಶೈವ ಲಿಂಗಾಯತರ ಒಕ್ಕೂಟ.

ಠುಸ್ಸೆಂದ ಹಬ್ಬ

ಮೇ 21ರಂದು ಬಸವ ಜಯಂತಿ ಪ್ರಯುಕ್ತ ಬೆಂಗಳೂರಿನ ಅರಮನೆ ಮೈದಾನದಲ್ಲಿ ಬೃಹತ್ ಲಿಂಗಾಯತರ ಸಮಾವೇಶವನ್ನೇ ಮಿರ್ಜಿ ಮುಂದಾಳತ್ವದಲ್ಲಿ ಯಡ್ಡಿ ಪಟಾಲಂ ಹಮ್ಮಿಕೊಂಡಿತು. ಅದಕ್ಕೆ ವಿಶ್ವವೀರಶೈವ ಲಿಂಗಾಯತ ಒಕ್ಕೂಟದ ಹೆಸರಲ್ಲಿ 'ವೀರಶೈವ ಲಿಂಗಾಯತರ ಹಬ್ಬ' ಎಂಬ ವಿಲಕ್ಷಣ ಹೆಸರಿಟ್ಟು ಆವತ್ತೇ ಬಸವ ಜಯಂತಿ, ಅದೇ ವೇದಿಕೆಯಲ್ಲಿ ಆದಿ ಜಗದ್ಗುರು ರೇಣುಕಾಚಾರ್ಯರ ಯುಗಮಾನೋತ್ಸವವನ್ನೂ ಜೊತೆಗೆ ಸಿದ್ದಗಂಗಾ ಶ್ರೀಗಳಿಗೆ ವಿಶ್ವವಂದ್ಯದ ಗುರುವಂದನೆಯ 'ತರ... ಐಟಮ್ಮುಗಳನ್ನು ಒಂದೇ ವೇದಿಕೆಯಲ್ಲಿ ಪೋ... ಸರ್ಕಾರದ ವಿರುದ್ಧ ಲಿಂಗಾಯತರನ್ನು ಬೀದಿಗಿ... ಯಡ್ಡಿಯ ಹುನ್ನಾರವಾಗಿತ್ತು. ಮೇ 21ರಂದು ... ಲಿಂಗಾಯತರು ಬಸವ ಜಯಂತಿ ಪ್ರಯುಕ್ತ ... ಮೈದಾನಕ್ಕೆ ಬರುತ್ತಾರೆಂದು ಬಿಜೆಪಿಗಳೆಲ್ಲ ಹಗ್ಗ ... ಹೊಸೆದದ್ದು. ನಿವೃತ್ತ ಪೊಲೀಸ್ ಮಿರ್ಜಿ, ಅ... ಪದ್ದೆ ಮಿರ್ಜಿಯ ಫೋಟೋಗಳು ಫ್ಲೆಕ್ಸು ಬ್ಯಾ... ರಾರಾಜಿಸಿದವು. ಸಿದ್ದಗಂಗಾಸ್ವಾಮಿ, ಸುತ್ತೂರು... ಯಡಿಯೂರಪ್ಪ ಇತ್ಯಾದಿ ಫೋಟೋಗಳ ಜೊತೆಗೆ... ಫೋಟೋ ಹಾಕಿಬಿಟ್ಟರೆ ಲಿಂಗಾಯತರೆಲ್ಲ ... ಸರ್ಕಾರದ ವಿರುದ್ಧ ದಂಗೆ ಏಳುತ್ತಾರೆಂಬುದು... ಯಡ್ಡಿ, ಬಳಿಗಾರ್ ಇತ್ಯಾದಿಗಳ ಲೆಕ್ಕಾಚಾರವಾ...

ಆದರೆ ಮೇ 21 ರ ಬಸವಜಯಂತಿಯ... ಲೆಕ್ಕಾಚಾರವೆಲ್ಲ ರಾತ್ರೋರಾತ್ರಿ ತಲೆಕೆಳಗಾಗಿ ... ಕೇವಲ ಹತ್ತು ಸಾವಿರದಷ್ಟು ಜನ ಸೇರುವುದೂ... ಮಿರ್ಜಿ ಗ್ಯಾಂಗ್ ರಣೋತ್ಸಾಹವೆಲ್ಲ ಇಳಿದು... ಎಲ್ಲೆಲ್ಲಿಂದಲೋ ಲಾರಿ ಬಸ್ಸುಗಳಲ್ಲಿ ದುಡ್ಡಿಗೆ ಬ... ಪೈಕಿ ಬಹುತೇಕರು ಬಿಜೆಪಿ ಕಾರ್ಯಕರ್ತರು. ಮಠಾಧೀಶರ ಪೈಕಿ ಆವತ್ತು ಬೆಂಗಳೂರಿನಲ್ಲೇ ಇದ್ದ... ಸ್ವಾಮಿಗಳಾಗಲಿ, ಸಿದ್ಧಗಂಗೆಯ ಕಿರಿಯಶ್ರೀ ... ಸ್ವಾಮಿಗಳಾಗಲಿ, ಶ್ರೀಶೈಲ ಜಗದ್ಗುರುಗಳಾಗ... ಬರಲೇ ಇಲ್ಲ. ವೀರಶೈವ ರಾಜಕಾರಣಿಗಳ ಪೈ... ವರ್ಚಸ್ವಿ ಮತ್ತು ಕಾರ್ಯಸಮರ್ಥರೆಂದೇ ಬಾ... ವಿ. ಸೋಮಣ್ಣ ಕಾಟಾಚಾರಕ್ಕೂ 'ಹಬ್ಬ'ದತ್ತ ತಲೆ ... ವೇದಿಕೆಯೇರಿದ್ದು ಶಿವಗಂಗೆಯ ಮಲೆಯ ಸ್ವಾ... ವಿಭೂತಿಪುರ ಮಠದ ಮಹಾಂತಲಿಂಗ ಶಿವಾಚಾ... ಹೇಳಹೆಸರಿಲ್ಲದವರೇ. ಮಿಕ್ಕಂತೆ ಕೆಲ ಅಲೆಮಾ... ಸ್ವಾಮಿಗಳನ್ನು ವೇದಿಕೆಗೇರಿಸಿ ಇಡೀ ವೇದಿಕೆಯ... ವಾಸನೆ ಹೊಡೆಯುವಂತೆ ನಡೆದ 'ವೀರಶೈವ ಲಿಂ... ಹಬ್ಬ'ಕ್ಕೆ ಭಾರೀ ಲೆಕ್ಕಾಚಾರ ಹಾಕಿ ಬಂದಿದ್ದ ... ಮುಖವೇ ಕಪ್ಪಿಟ್ಟಿತ್ತು. ಅರ್ಧ ಗಂಟೆಯೂ ನಿಲ್ಲದೆ... ಸರ್ಕಾರದ ವಿರುದ್ಧ ಲಿಂಗಾಯತರ ದಮನದ ಕಿ... ಯಡ್ಡಿ ಪರಾರಿಯಾದರು.

ಆದರೆ ಹೋಗುವ ಮುನ್ನ ಸಿದ್ದು ಸ... ಜಾತಿಗಣತಿಯ ವಿರುದ್ಧ, ಲಿಂಗಾಯತರ... ಕಮ್ಮಿಯೆಂಬಂತೆ ಬಿಂಬಿಸುವ ಸರ್ಕಾರದ ಪಿತೂ... ವಿರುದ್ಧ ಬೊಬ್ಬೆ ಹಾಕಿಯೇ ಯಡ್ಡಿ ಜಾಗ ಖಾಲಿ ಮಾ... ಅದು ಮಾರನೇ ದಿನದ ಪತ್ರಿಕೆಗಳಲ್ಲಿ ಸುದ್ದಿ... ಹೀಗೆ ಬಸವಣ್ಣ, ವೀರಶೈವ, ಲಿಂಗಾಯತ, ... ಸ್ವಾಮಿ, ರೇಣುಕಾಚಾರ್ಯರು ಇತ್ಯಾದಿ ಸಂಕೇ... ಬಳಸಿಕೊಂಡು ಸರ್ಕಾರದ ವಿರುದ್ಧ ಲಿಂಗಾ... ಎತ್ತಿಕಟ್ಟುವ ಯಡ್ಡಿ ಹುನ್ನಾರ ಫಲ ಕೊಡುವ ... ಸಿದ್ದು ಬಾಣ ಬಿಟ್ಟಾಗಿತ್ತು. ಕರ್ನಾಟಕದ ಎಲ್ಲಾ... ಕಚೇರಿಗಳಲ್ಲಿ ಕ್ರಾಂತಿಯೋಗಿ ಬಸವಣ್ಣನವರ ಭಾವ... ಕಡ್ಡಾಯಗೊಳಿಸಿ ಸರ್ಕಾರಿ ಆದೇಶ ಹೊರಬಿದ್ದಿ...


ಬಿಜೆಪಿ ಷಡ್ಯಂತ್ರಕ್ಕೆ ತಿರುಗೇಟು


ಇದು ಇಡೀ ಲಿಂಗಾಯತ ಸಮೂಹವನ್ನೇ ... ಮೆಚ್ಚುಗೆಗೆ ಬೀಳಿಸಿತ್ತು. ಮಾತ್ರವಲ್ಲದೆ ಕನ್ನಡ ಪರ... ಪ್ರಗತಿಪರ ಸಂಘಟನೆಗಳೆಲ್ಲ ತಲೆದೂಗುವಂತ... ಇದಾಗಿ ವಾರಕ್ಕೇ ಸಿದ್ದು ಮತ್ತೊಂದು ಅಸ್ತ್ರ ಪ್ರಯೋ... ಬಿಜಾಪುರದ ಮಹಿಳಾ ವಿಶ್ವವಿದ್ಯಾಲಯಕ್ಕೆ ಶಿವಶ... ಮಹಾದೇವಿಯ ಹೆಸರಿಡುವ ಮೂಲಕ. ದಶ... ಹೊಡೆದಾಟ ಮಾಡಿಯೂ ಮಹಿಳಾ ವಿವಿಗ... ಹೆಸರಿಡಲಾಗದ ಉತ್ತರ ಕರ್ನಾಟಕದ ಲಿಂಗಾ... ಹತಾಶೆಯನ್ನು ಸಿದ್ದು ಒಂದೇ ಒಂದು ಆದೇಶದ ... ಪರಿಹರಿಸಿದ್ದರು. ರಾಜಕೀಯವಾಗಿ ಮಾತ್... ಸಾಮಾಜಿಕವಾಗಿಯೂ ಇದು ಎಂಥಾ ಪ... ಬೀರಿತೆಂದರೆ, ಯಾವ ಶಾಮನೂರು ಲಿಂಗಾ... ಕಡೆಗಣನೆಗೆ ರೋಸತ್ತು ಸಿದ್ದು ವಿರುದ್ಧ ಕಿಡಿಕಾ... ಅವರೇ ಉಲ್ಟಾ ಹೊಡೆದು ಸಿದ್ದು ಪ... ನಿಲ್ಲಬೇಕಾಯಿತು!



ಶ್ರೀರಂಗಪಟ್ಟಣ: ರೈತನಾಯಕ ನಂಜುಂಡೇಗೌಡ ಜೆಡಿಎಸ್ ಸೇರ್ತಾರಾ?

ರಾಜ್ಯ ವಿಧಾನಸಭೆ ಚುನಾವಣೆಗೆ ವರ್ಷವಷ್ಟೇ ಬಾಕಿ ಇದೆ. ರಾಜ್ಯಸಭೆ ಚುನಾವಣೆಯಲ್ಲಿ ಅಡ್ಡ ಮತದಾನ ದ ಕಾರಣಕ್ಕೆ ಜೆಡಿಎಸ್‌ನಿಂದ ಅಮಾನತ್ತಾಗಿರುವ ರಮೇಶ್‌ಬಾಬು ...ದ್ದೇಗೌಡ ಕಾಂಗ್ರೆಸ್ ಬಾಗಿಲು ...ಯುತ್ತಿರುವ ಸಂದರ್ಭದಲ್ಲಿ ...ರಂಗಪಟ್ಟಣದ ಜೆಡಿಎಸ್ ಅಭ್ಯರ್ಥಿ ...ಗುವರೋ ಎಂಬ ಮಿಲಿಯನ್ ...ರ್ ಪ್ರಶ್ನೆ ಜಿಲ್ಲೆಯ ರಾಜಕೀಯದಲ್ಲಿ ...ಡಿದೆ. ದಶಕಗಳ ಕಾಲ ರಾಜಕೀಯ ...ರ ಕೊಟ್ಟ ಜೆಡಿಎಸ್ ಪಕ್ಷಕ್ಕೆ ...ಟ್ಟು ದ್ರೋಹ ಬಗೆದಿರುವ ಶಾಸಕ ...ೇಶ್‌ಬಾಬುಗೆ ಚುನಾವಣಾ ...ಣದಲ್ಲಿ ಮಣ್ಣುಮುಕ್ಕಿಸಿ ಸೇಡು ...ಸಿಕೊಳ್ಳಲು ಹಾತೊರೆಯುತ್ತಿರುವ ...ವೇಗೌಡ- ಕುಮಾರಸ್ವಾಮಿ ...ಕ್ಕಾಗಿ ಸಮರ್ಥ ಅಭ್ಯರ್ಥಿಯ ...ಹುಕಾಟದಲ್ಲಿ ನಿರತರಾಗಿದ್ದಾರೆ.


ದೇವೇಗೌಡ


ಕುಮಾರಸ್ವಾಮಿ

...ಕಾಂಗ್ರೆಸ್ ಪಕ್ಷದಲ್ಲಿನ ಆಂತರಿಕ ...ಟವನ್ನೇ ಲಾಭ ಮಾಡಿಕೊಂಡು ...ದ ಎರಡು ಅವಧಿಯಿಂದ ...ರಂಗ ಪಟ್ಟಣ ಶಾಸಕನಾಗಿ ...ಬ್ಬಿರುವ ರಮೇಶ್‌ಬಾಬುವನ್ನು ...ವಲು ಜನನಾಯಕ, ರೈತಸಂಘದ ...ಎಸ್.ನಂಜುಂಡೇ ಗೌಡರೇ ಸರಿ ...ದು ಅವರ ಹೆಗಲ ಮೇಲೆ ಕೈ ...ಕಿರುವ ದೇವೇಗೌಡ-ಕುಮಾರಸ್ವಾಮಿ ...ಗಲೇ 3-4 ಬಾರಿ ಚರ್ಚೆ ನಡೆಸಿದ್ದಾರೆ. ಕಳೆದ ...ವು ದಶಕಗಳಿಂದ ರೈತ ಚಳವಳಿಯಲ್ಲಿ ಗುರುತಿಸಿಕೊಂಡ ...ಜುಂಡೇಗೌಡ ಜೆಡಿಎಸ್ ಅಭ್ಯರ್ಥಿಯಾದರೆ ...ೇಶ್‌ಬಾಬು ಮಕಾಡೆ ಮಲಗುವುದು ಗ್ಯಾರಂಟಿ.

...ಂಜುಂಡೇಗೌಡ ಜೆಡಿಎಸ್ ಸೇರ್ತಾರ?

...ಜೆಡಿಎಸ್ ಶಾಸಕನಾಗಿ ಕೋಟ್ಯಾಂತರ ಹಣ ಗುಡ್ಡೆ ...ಡಿಕೊಂಡಿರುವ ರಮೇಶ್‌ಬಾಬು ಮುಂದಿನ ಚುನಾವಣೆ ...ಲ್ಲಿ ಹಣದ ಹೊಳೆ ಹರಿಸುವ ಸಾಧ್ಯತೆ ಕಂಡಿರುವ ...ವೇಗೌಡ-ಕುಮಾರಸ್ವಾಮಿ ಈ ನಿಟ್ಟಿನಲ್ಲಿ ಚಾಣಾಕ್ಷ ನಡೆ ...ಯುತ್ತಿದ್ದಾರೆ. ನಂಜುಂಡೇಗೌಡರು ಸತತ ಆರು ಚುನಾವಣೆ ...ಲ್ಲಿ ರೈತಸಂಘದ ಅಭ್ಯರ್ಥಿಯಾಗಿ ಸೋಲುತ್ತಾ ಬಂದರೂ ...ನೀಯ ಮತಸಮೂಹವನ್ನು ಸೃಷ್ಟಿಸಿಕೊಳ್ಳುತ್ತಲೇ ...ದಿದ್ದಾರೆ. ಏನಿಲ್ಲವೆಂದರೂ 20 ಸಾವಿರಕ್ಕೂ ಹೆಚ್ಚು ...ತಗಳು ಅವರ ತೆಕ್ಕೆಯಲ್ಲಿವೆ. ಸತತ ಸೋಲಿನ ಸಿಂಪಥಿಯ ...ತೆಗೆ ಜೆಡಿಎಸ್ ಪಕ್ಷದ ಸಂಪ್ರದಾಯಿಕ ಮತಗಳೂ ...ದರೆ ಜಯ ಶತಃಸಿದ್ಧ ಅನ್ನೋದು ದೇವೇಗೌಡ ಹಾಗೂ ...ಮಾರಸ್ವಾಮಿಯ ಲೆಕ್ಕಾಚಾರ.


...ಪ್ರತಿ ಚುನಾವಣೆಯಲ್ಲಿ 20-25 ಸಾವಿರ ಮತಗಳು ...ಜುಂಡೇಗೌಡರ ಪರ ಬಿದ್ದರೂ ಗೆಲ್ಲಲು ಸಾಧ್ಯವಾಗಿಲ್ಲ. ...ಣ, ಜಾತಿ, ಪಕ್ಷ ಪ್ರಾಬಲ್ಯವೇ ಮಾನದಂಡವಾಗಿರುವ ...ನಾವಣೆಯಲ್ಲಿ ಇವೇನೂ ಇಲ್ಲದ ನಂಜುಂಡೇಗೌಡರು ...ರಿಂದ 25 ಸಾವಿರ ಮತ ಪಡೆಯುವುದೆಂದರೆ ಸುಮ್ಮನೆ ...ತಲ್ಲ. ಪಿಎಸ್‌ಎಸ್‌ಕೆ, ಮೈಷುಗರ್, ಕಾವೇರಿ ವಿಚಾರದಲ್ಲಿ ...ದಿಗಿಳಿದು ಹೋರಾಡಿದ್ದ ನಂಜುಂಡೇಗೌಡ ಅಕ್ರಮ ...ಗಾರಿಕೆ, ಅಕ್ರಮ ಭೂಕಬಳಿಕೆ ವಿರುದ್ಧವೂ ತೊಡೆ ತಟ್ಟಿದ್ದುಂಟು. ಇವೆಲ್ಲವನ್ನು ಲೆಕ್ಕ ಹಾಕಿಯೇ ಜೆಡಿಎಸ್ ದಂಡನಾಯಕರು ಇಂತಹದ್ದೊಂದು ತೀರ್ಮಾನಕ್ಕೆ ಬಂದಿದ್ದಾರೆ.

ಈ ಮಧ್ಯೆ ಮಾಜಿ ಶಾಸಕಿ ಪಾರ್ವತಮ್ಮ ಶ್ರೀಕಂಠಯ್ಯನವರ ಪುತ್ರ ರವೀಂದ್ರ ಶ್ರೀಕಂಠಯ್ಯ ಕೂಡ ಜೆಡಿಎಸ್ ಸೇರುವ ಬಗ್ಗೆ ದೇವೇಗೌಡರೊಂದಿಗೆ ಮಾತುಕತೆ ನಡೆಸಿದ್ದಾರೆಂಬ ಗುಸುಗುಸು ಕೇಳಿಬರುತ್ತಿದೆ. ಎಸ್.ಎಂ. ಕೃಷ್ಣ ಶಿಷ್ಯೋತ್ತಮನಾದ ರವೀಂದ್ರ ಗುರುವನ್ನೇ ಅನುಸರಿಸಿ ಕಾಂಗ್ರೆಸ್‌ಗೆ ರಾಜೀನಾಮೆ ಕೊಟ್ಟಿದ್ದನಾದರು ಎಸ್.ಎಂ. ಕೃಷ್ಣರಂತೆ ಕೂಡಲೇ ಬಿಜೆಪಿ ಸೇರದೆ ದಿನಕ್ಕೊಂದು ರೂಮರ್ ಹಬ್ಬಿಸುತ್ತಿದ್ದಾನೆ. ಶ್ರೀರಂಗಪಟ್ಟಣದಲ್ಲಿ ತನ್ನದೇ ಮತಬ್ಯಾಂಕ್ ಹೊಂದಿರುವ, ಚುನಾವಣೆಯಲ್ಲಿ ಸಾಕಷ್ಟು ದುಡ್ಡು ಖರ್ಚು ಮಾಡುವ ಸಾಮರ್ಥ್ಯವೂ ಇರುವ ರವೀಂದ್ರ ಜೆಡಿಎಸ್‌ಗೆ ಹೋದರೆ ಆತನೂ ಕೂಡ ಗೆಲ್ಲುವ ಅಭ್ಯರ್ಥಿಯೇ. ಹಾಗಾಗಿ ದೇವೇಗೌಡ-ಕುಮಾರಸ್ವಾಮಿ, ನಂಜುಂಡೇಗೌಡರನ್ನು ಜೆಡಿಎಸ್ ಪಕ್ಷಕ್ಕೆ ಸೇರಿಸಿಕೊಂಡು ಕೊನೆಕ್ಷಣದಲ್ಲಿ ಹಣವಿಲ್ಲವೆಂಬ ಕಾರಣಕ್ಕೆ ರವೀಂದ್ರ ಶ್ರೀಕಂಠಯ್ಯನಂತಹ ದುಡ್ಡಿರುವ ಕುಳಕ್ಕೆ ಮಣೆ ಹಾಕಿದರೆ ಗತಿಯೇನು? ಎಂಬ ಪ್ರಶ್ನೆ ನಂಜುಂಡೇಗೌಡರ ಬೆಂಬಲಿಗರಲ್ಲಿ ಮೊಳೆತಿದೆ. ಈ ಕಾರಣದಿಂದಲೇ ನಂಜುಂಡೇಗೌಡರ ಜೆಡಿಎಸ್ ಸೇರ್ಪಡೆ ಸ್ಪಷ್ಟತೆ ಪಡೆದುಕೊಂಡಿಲ್ಲ. ನಂಜುಂಡೇಗೌಡರು ಆದಿಚುಂಚನಗಿರಿ ಪೀಠಾಧ್ಯಕ್ಷ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿಯವರನ್ನು 2 ಬಾರಿ ಭೇಟಿ ಮಾಡಿ ಚರ್ಚೆ ನಡೆಸಿರೋದು ರಾಜಕೀಯ ಸಂಚಲನ ಉಂಟುಮಾಡಿದೆ.

ಹೈಟೆಕ್ ರವೀಂದ್ರ, ಕೈಕೊಟ್ಟ ರಮೇಶ್


ತನ್ನ ರಾಜಕೀಯ ಗುರು ಎಸ್.ಎಂ.ಕೃಷ್ಣರಂತೆ ಹೈಟೆಕ್ ರಾಜಕಾರಣ ಮಾಡುವ ರವೀಂದ್ರ ಶ್ರೀಕಂಠಯ್ಯನದ್ದು ಸರ್ವಾಧಿಕಾರಿ ಮನೋಭಾವ. ಹಾಗಾಗಿ ರವೀಂದ್ರ ಶ್ರೀಕಂಠಯ್ಯ ಜೆಡಿಎಸ್ ಸೇರಲು ಕಾರ್ಯಕರ್ತರು ದೊಡ್ಡ ವಿರೋಧ ವ್ಯಕ್ತಪಡಿಸುತ್ತಿದ್ದಾರೆ. ಇಷ್ಟುದಿನ ಜೆಡಿಎಸ್ ಕಾರ್ಯಕರ್ತರಿಗೆ ಇನ್ನಿಲ್ಲದಂತೆ ಕಾಟ ಕೊಟ್ಟ ರವೀಂದ್ರ ಜೆಡಿಎಸ್ ಸೇರುವುದು ಮುಖಂಡರಿಗಾಗಲೀ, ಕಾರ್ಯಕರ್ತರಿಗಾಗಲೀ ಸುತರಾಂ ಇಷ್ಟವಿಲ್ಲ. ರವೀಂದ್ರ ಜೆಡಿಎಸ್‌ಗೆ ಬಂದರೆ ಆತನ ಪುಂಡಪಟಾಲಂ ಬಾಲ ಬಿಚ್ಚಿ ಜೆಡಿಎಸ್ ಮೂಲೆಗುಂಪಾಗುತ್ತೆ ಎನ್ನುವ ಆತಂಕವನ್ನು ತಿಂಗಳ ಹಿಂದಷ್ಟೇ ಕುಮಾರಸ್ವಾಮಿ ಮೈಸೂರಿನಲ್ಲಿ ಕರೆದಿದ್ದ ಸಭೆಯಲ್ಲಿ ಕಾರ್ಯಕರ್ತರೇ ಸ್ಪಷ್ಟವಾಗಿ ಹೇಳಿದ್ದಾರೆ. ಹಾಗಾಗಿ ದೇವೇಗೌಡ-ಕುಮಾರಸ್ವಾಮಿ ಒಲವು ನಂಜುಂಡೇಗೌಡರತ್ತ ನೆಟ್ಟಿದೆ ಎನ್ನಲಾಗುತ್ತಿದೆ.


ರಾಜ್ಯಸಭೆ ಚುನಾವಣೆಯಲ್ಲಿ ಜೆಡಿಎಸ್ ಅಭ್ಯರ್ಥಿ ಫಾರೂಕ್‌ಗೆ ಕೈಕೊಟ್ಟು ಕಾಂಗ್ರೆಸ್ ಅಭ್ಯರ್ಥಿ ರಾಮಮೂರ್ತಿಯ ಕೋಟಿಕೋಟಿ ಹಣಕ್ಕೆ ಬಿಕರಿಗೊಂಡು ದೇವೇಗೌಡ-ಕುಮಾರಸ್ವಾಮಿಯ ಕೆಂಗಣ್ಣಿಗೆ ಗುರಿಯಾಗಿ ಜೆಡಿಎಸ್ ಪಕ್ಷದಿಂದಲೇ ಅಮಾನತುಗೊಂಡಿರುವ ರಮೇಶ್‌ಬಾಬು ಹೇಗಾದರೂ ಮಾಡಿ ಮತ್ತೆ ಜೆಡಿಎಸ್ ಪಕ್ಷದಿಂದಲೇ ಸ್ಪರ್ಧಿಸಲು ಬಯಸಿದ್ದ, ಆದರೆ ಆತನ ಪ್ರಯತ್ನಗಳೆಲ್ಲ ವಿಫಲವಾಗಿವೆ. ನಾಗಮಂಗಲದ ಚಲುವರಾಯಸ್ವಾಮಿಯ ಪಕ್ಕ ಶಿಷ್ಯನಾಗಿರುವ ರಮೇಶ್‌ಬಾಬು ಈ ಬಾರಿ ಶ್ರೀರಂಗಪಟ್ಟಣದಲ್ಲಿ ಮಕಾಡೆ ಮಲಗುವುದು ಖಾತ್ರಿ. 2 ಬಾರಿ ಶಾಸಕನಾದರೂ ಪರ್ಸೆಂಟೇಜ್ ಬಾಬು ಎಂಬ ಬಿರುದಿನ ಹೊರತಾಗಿ ಕ್ಷೇತ್ರಕ್ಕೆ ನಯಾ ಪೈಸೆಯ ಉಪಕಾರ ಮಾಡಲಿಲ್ಲ. ಚಲುವರಾಯಸ್ವಾಮಿಯನ್ನೇ ಅನುಸರಿಸಿ ಕಾಂಗ್ರೆಸ್ ಪಕ್ಷ ಸೇರಿ ದೋಚಿರುವ ದುಡ್ಡನ್ನು ನೀರಿನಂತೆ ಹರಿಸಿ ಗೆದ್ದು ಬರಲು ಹವಣಿಸುತ್ತಿದ್ದಾನೆ.


ನಂಜುಂಡೇಗೌಡ

ಆದರೆ ರಮೇಶ್‌ಬಾಬು ಕಾಂಗ್ರೆಸ್ ಸೇರಲು ಕೆಪಿಸಿಸಿ ಸದಸ್ಯ ಇಂಡುವಾಳು ಸಚ್ಚಿದಾನಂದ ತೀವ್ರ ವಿರೋಧ ವ್ಯಕ್ತಪಡಿಸಿದ್ದಾನೆ. ಅಂಬರೀಶ್ ಶಿಷ್ಯ ಅಶೋಕ್ ಖೇಣಿ ಬೆಂಬಲಿಗನಾಗಿರುವ ಸಚ್ಚಿದಾನಂದ ಕೂಡ ಕಾಂಗ್ರೆಸ್ ಟಿಕೆಟ್ ಮೇಲೆ ಕಣ್ಣಿಟ್ಟಿದ್ದಾನೆ. ಕಳೆದ 15 ದಿನಗಳ ಹಿಂದಷ್ಟೇ ಶ್ರೀರಂಗಪಟ್ಟಣದಲ್ಲಿ ಸಾವಿರಾರು ಸಂಖ್ಯೆಯಲ್ಲಿ ತನ್ನ ಬೆಂಬಲಿಗರನ್ನು ಸೇರಿಸಿ ಬೃಹತ್ ಸಭೆ ನಡೆಸಿದ ಸಚ್ಚಿದಾನಂದ, ರಮೇಶ್‌ಬಾಬು ಕಾಂಗ್ರೆಸ್ ಸೇರ್ಪಡೆಯನ್ನು ಪ್ರಬಲವಾಗಿ ವಿರೋಧಿಸಿದ್ದ ಕಾಂಗ್ರೆಸ್ ಕಾರ್ಯಕರ್ತರಿಗೆ ಕಿರುಕುಳ ನೀಡಿದ್ದ ನಯವಂಚಕ ಶಾಸಕನಿಗೆ ಮಣೆಹಾಕದೆ ತನಗೆ ಟಿಕೆಟ್ ನೀಡಬೇಕೆಂದು ಅಬ್ಬರಿಸಿದ್ದಾನೆ. ಸುಮಾರು 3 ದಶಕಗಳಿಗೂ ಹೆಚ್ಚು ಕಾಲ ರಮೇಶ್‌ಬಾಬು ಕುಟುಂಬ ಕಾಂಗ್ರೆಸ್ ವಿರೋಧಿ ರಾಜಕಾರಣ ಮಾಡಿಕೊಂಡು ಬಂದಿದೆ. ಕಾಂಗ್ರೆಸ್ ಕಾರ್ಯಕರ್ತರು ಜೆಡಿಎಸ್‌ನವರ ಕಿರುಕುಳ ಮರೆತಿಲ್ಲ. ಹೀಗಾಗಿ ರಮೇಶ್‌ಬಾಬು ಕಾಂಗ್ರೆಸ್ ಸೇರ್ಪಡೆಯನ್ನು ಕಾಂಗ್ರೆಸ್ ಕಾರ್ಯಕರ್ತರೂ ವಿರೋಧಿಸುತ್ತಿದ್ದಾರೆ.


ರಮೇಶ್‌ಬಾಬು


ಸಚ್ಚಿದಾನಂದ



ರವೀಂದ್ರ ಶ್ರೀಕಂಠಯ್ಯ

ಈ ಮಧ್ಯೆ ಕಾಂಗ್ರೆಸ್ ಮುಖಂಡ ಲಾಯರ್ ಪುಟ್ಟೇಗೌಡ ಕೂಡಾ ಕಾಂಗ್ರೆಸ್ ಟಿಕೆಟ್‌ಗೆ ಯತ್ನ ನಡೆಸಿದ್ದಾನೆ. ಇಂತಹ ಪರಿಸ್ಥಿತಿಯಲ್ಲಿ ರಮೇಶ್‌ಬಾಬು ಕೂಡ ಕಾಂಗ್ರೆಸ್ ಪಕ್ಷ ತನಗೆ ಟಿಕೆಟ್ ಕೊಡುತ್ತದೆಂದು ಬಲವಾಗಿ ನಂಬಿದ್ದಾನೆ. ಇತ್ತೀಚೆಗಷ್ಟೇ 50ನೇ ವರ್ಷದ ಹುಟ್ಟುಹಬ್ಬ ಆಚರಿಸಿಕೊಂಡ ರಮೇಶ್‌ಬಾಬು ತನ್ನ ಹುಟ್ಟುಹಬ್ಬದ ಫ್ಲೆಕ್ಸ್‌ಗಳಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಫೋಟೋ ಮಿಂಚುವಂತೆ ನೋಡಿಕೊಂಡಿದ್ದ. ಇದನ್ನು ನೋಡಿ ಕೆರಳಿದ ಸಚ್ಚಿದಾನಂದ ಸಾವಿರಾರು ಸಂಖ್ಯೆಯಲ್ಲಿ ತನ್ನ ಬೆಂಬಲಿಗರನ್ನು ಸೇರಿಸಿ ರಾಜ್ಯ ಕಾಂಗ್ರೆಸ್ ನಾಯಕರಿಗೆ ಗಂಭೀರ ಎಚ್ಚರಿಕೆ ರವಾನಿಸಿದ್ದಾನೆ.

ಜಿಲ್ಲಾ ಪಂಚಾಯತಿಗೆ ಆರಿಸಿ ಬಂದಿರುವ ಸದಸ್ಯರಲ್ಲಿ ಬಹುತೇಕರು ಜೆಡಿಎಸ್ ಪಕ್ಷನಿಷ್ಠೆ ತೋರಿದ್ದಾರೆಯೇ ಹೊರತು ಶಾಸಕ ರಮೇಶ್‌ಬಾಬುವನ್ನು ಅನುಸರಿಸಿಲ್ಲ. ಜಿ.ಪಂ. ಸದಸ್ಯರಾದ ಪ್ರಭಾವತಿ ಪ್ರಕಾಶ್, ಮರಿಯಪ್ಪ ಮಂಜುನಾಥ್ ಸೇರಿದಂತೆ ಪ್ರಭಾವಿ ಜೆಡಿಎಸ್ ಮುಖಂಡರಿಗೆ ತನ್ನೊಂದಿಗೆ ನಿಲ್ಲುವಂತೆ ಬಗೆಬಗೆಯ ಆಮಿಷಗಳನ್ನು ಒಡ್ಡಿದರೂ ಅವರೆಲ್ಲ ಬಣ್ಣದ ಮಾತಿಗೆ ಮರುಳಾಗದೆ ಕುಮಾರಸ್ವಾಮಿಗೆ ನಿಷ್ಠೆ ವ್ಯಕ್ತಪಡಿಸಿದ್ದಾರೆ.

ಒಟ್ಟಿನಲ್ಲಿ ಜೆಡಿಎಸ್ ಪಕ್ಷದಿಂದ ನಂಜುಂಡೇಗೌಡರನ್ನು ಅಭ್ಯರ್ಥಿಯಾಗಿಸುವಂತೆ ಜೆಡಿಎಸ್ ಕಾರ್ಯಕರ್ತರು, ಮುಖಂಡರು ಒತ್ತಾಯಿಸಿದ್ದು, ಅಪ್ಪ-ಮಗ ಕಾದು ನೋಡುವ ತಂತ್ರಕ್ಕೆ ಮುಂದಾಗಿದ್ದಾರೆ. ಎಂದೋ ಕಣ್ಮುಚ್ಚಬೇಕಾಗಿದ್ದ ಪಿಎಸ್‌ಎಸ್‌ಕೆ ಸಕ್ಕರೆ ಕಾರ್ಖಾನೆ ನಂಜುಂಡೇಗೌಡರ ಶ್ರಮದಿಂದಲೇ ಇನ್ನು ಉಸಿರಾಡುತ್ತಿದೆ. ಕಾರ್ಖಾನೆಯ ಅಧ್ಯಕ್ಷರಾಗಿ ಇವರು ಮಾಡಿದ ಸೇವೆಯನ್ನು ಕ್ಷೇತ್ರದ ರೈತಾಪಿ ಜನರು ಮರೆತಿಲ್ಲ. ನಂಜುಂಡೇಗೌಡರು ಜೆಡಿಎಸ್ ಸೇರುತ್ತಾರೋ ಬಿಡುತ್ತಾರೋ ಗೊತ್ತಿಲ್ಲ. ಚರ್ಚೆಯಾಗುತ್ತಿರುವಂತೆ ಎಲ್ಲವೂ ನಡೆದರೆ ನಂಜುಂಡೇಗೌಡರಿಗೆ ಈ ಬಾರಿ ಎಂಎಲ್‌ಎ ಆಗುವ ಛಾನ್ಸ್ ಹೆಚ್ಚಿದೆ. ಹಣ-ಅಧಿಕಾರ ಪಡೆದಿರುವ ಎರಡು ಕುಟುಂಬಗಳ ರಾಜಕಾರಣವನ್ನು ಕಂಡಿರುವ ಶ್ರೀರಂಗಪಟ್ಟಣದ ಜನತೆ ಈ ಬಾರಿ ಅವೆರಡೂ ಕುಟುಂಬಗಳನ್ನು ತಿರಸ್ಕರಿಸಿ ರೈತ ನಾಯಕ ನಂಜುಂಡೇಗೌಡರ ಕೈಹಿಡಿಯುತ್ತಾರೋ, ಇಲ್ಲವೋ ಎಂಬುದನ್ನು ಕಾದು ನೋಡಬೇಕಿದೆ.


■ ವರದಿಗಾರ


---


04 ⏮

ಇದರ ಫಲವೇ ಜೂನ್ 14 ರಂದು ಅರಮನೆ ...ದಾನದಲ್ಲಿ ನಡೆದ ವೀರಶೈವ ಮಹಾಸಭಾದ ...ಭಿನಂದನಾ ಸಮಾವೇಶ. ಇದಕ್ಕೂ ಮುನ್ನ ಸಿದ್ದು ...ತ್ತೊಂದು ಕೆಲಸ ಮುಗಿಸಿದರು. ಅದು ಸರ್ಕಾರದ ...ಯಿಂದಲೇ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮನ ...ಯಂತಿಯ ಆಚರಣೆ. ಆ ಮೂಲಕ ರೆಡ್ಡಿ ...ಂಗಾಯತರನ್ನೂ ಸಿದ್ದು ಬುಟ್ಟಿಗೆ ಹಾಕಿಕೊಂಡಾಗಿತ್ತು ...ದೆಲ್ಲವೂ ವೀರಶೈವ ಅಥವಾ ಲಿಂಗಾಯತ ಸಮೂಹದ ...ವಿಧ ಪಂಗಡಗಳು, ಪ್ರದೇಶವಾರು ಆಶೋತ್ತರಗಳ ...ವಿಚಾರವಷ್ಟೇ ಆಗಿರಲಿಲ್ಲ, ಯಡ್ಡಿಗೆ ರಾಜ್ಯ ಬಿಜೆಪಿಯ ...ಟ್ಟಿ ಕಟ್ಟುವ ಮೂಲಕ ಲಿಂಗಾಯತ ಓಟ್‌ಬ್ಯಾಂಕ್‌ನ್ನೇ ...ಟ್ಟಿ ಹಾಕಿ ಆ ಮೂಲಕ ತನ್ನ ಬೇಳೆ ಬೇಯಿಸಿಕೊಳ್ಳುವ ...ದಿಕ ಷಡ್ಯಂತ್ರವನ್ನು ನಿಷ್ಕ್ರಿಯಗೊಳಿಸುವ ...ತಂತ್ರವಾಗಿತ್ತು, ಯಾವ ವೀರಶೈವ ಮಹಾಸಭಾದ ...ಧ್ಯಕ್ಷ ಸ್ಥಾನದಿಂದ ಶಾಮನೂರು ಸಿದ್ದು ವಿರುದ್ಧ ...ಹಾರಿದ್ದರೋ ಅವರೇ ಮೇಲೆ ಬಿದ್ದು ಮುಖ್ಯಮಂತ್ರಿಗೆ ...ಭಿನಂದನಾ ಸಮಾವೇಶ ಹಮ್ಮಿಕೊಳ್ಳಬೇಕಾಯಿತು!

...ಜೂನ್ 14ರಂದು ವೀರಶೈವ ಮಹಾಸಭಾ ವತಿಯಿಂದ ...ದಿನ ಮುಖ್ಯಮಂತ್ರಿಯ ಅಭಿನಂದನಾ ಸಮಾವೇಶಕ್ಕೆ ...ಸಿದ್ದು ಬರೋಬ್ಬರಿ ಸಲವತ್ತು ಸಾವಿರಕ್ಕೂ ಅಧಿಕ ಲಿಂಗಾಯುತರು! ಬಹುಶಃ ಬಿಜೆಪಿ, ಆರ್‌ಎಸ್‌ಎಸ್, ಸಂಘಪರಿವಾರಕ್ಕೆ ತಮ್ಮ ಬಾಣವನ್ನೇ ತಮಗೆ ತಿರುಗಿಸುವ ಬ್ರಹ್ಮಾಸ್ತ್ರವೊಂದನ್ನು ಸಿದ್ದು ರೆಡಿಯಾಗಿಸಿಕೊಂಡಿದ್ದಾರೆಂಬ ಮರ್ಮ ತಾನೇ ಎಲ್ಲಿ ಗೊತ್ತಿತ್ತು? ಅದು ಪ್ರತ್ಯೇಕ ಧರ್ಮದ ಕ್ರಾಂತಿಯೋಗಿ ಬಸವಣ್ಣನವರು ವೈದಿಕರ ವಿರುದ್ಧ ಪ್ರಯೋಗಿಸಿದ ಬಾಣವಾಗಿತ್ತು, ಅದನ್ನೆ ಸಂಘ ಪರಿವಾರದ ಮನುವಾದಿಗಳ ವಿರುದ್ಧ ಸಿದ್ದು ಅದೆಷ್ಟು ಚಾಣಾಕ್ಷತನದಿಂದ ಪ್ರಯೋಗಿಸಿದರೆಂದರೆ, ಅಭಿನಂದನೆ ಸ್ವೀಕರಿಸಿ ಮಾತಿಗೆ ನಿಂತಿದ್ದೇ 'ವೀರಶೈವ ಲಿಂಗಾಯತ ಧರ್ಮವನ್ನು ಸ್ವತಂತ್ರ ಧರ್ಮವೆಂದು ಘೋಷಿಸುವಂತೆ ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡುತ್ತೇನೆ....!' ಎಂದು ಬಿಟ್ಟರು.







ಅಂದರೆ ಯಾವ ಬಸವಣ್ಣನನ್ನು ವೈದಿಕರು ಕೊಂದಿದ್ದರೋ ಅವರ ತಂತ್ರವನ್ನು ಸಿದ್ದು ಬಲವಾಗೇ ಇರಿದಿದ್ದರು. ಸಂಘ ಪರಿವಾರದ ಮನುವಾದಿಗಳು ಪ್ರತಿಪಾದಿಸುವ ವೈದಿಕ ಧರ್ಮ ಅರ್ಥಾತ್ ಹಿಂದುತ್ವಕ್ಕೆ ಪ್ರತ್ಯೇಕ ಲಿಂಗಾಯತ ಧರ್ಮದ ಅಸ್ತಿತ್ವ ಪ್ರತಿಪಾದಿಸುವ ಮೂಲಕ ಸಿದ್ದು ಮರ್ಮಾಘಾತ ನೀಡಿದ್ದರು. ಸರ್ಕಾರವೊಂದು ಲಿಂಗಾಯತರನ್ನು ಪ್ರತ್ಯೇಕ ಧರ್ಮವೆಂದು ಘೋಷಿಸುವಂತೆ ನಿರ್ಣಯ ಮಂಡಿಸುತ್ತದೆಯೆಂದರೆ ಅದು ತಾತ್ವಿಕವಾಗಿ ಮತ್ತು ತಾರ್ಕಿಕವಾಗಿ ಮತ್ತೆ ಬಸವಣ್ಣ ಅವತರಿಸಿ ಬಂದಂತೆಯೇ. ದೈಹಿಕವಾಗಿ ಬಸವಣ್ಣನಿಲ್ಲದೇ ಹೋದರೂ ಆತನ ಚೇತನ ತನ್ನ ಅಂತಃಸತ್ವ ಮತ್ತು ಸಂವೇದನೆಯಿಂದಾಗಿ ಅದೇ ವೈದಿಕ ವ್ಯವಸ್ಥೆಯ ವಿರುದ್ಧ ಚಾಲ್ತಿಗೆ ಬಂದಂತಾಯಿತು.

ಹಿಂದುತ್ವದ ಸೋಗಿನಲ್ಲಿ ಬಸವಣ್ಣನ ಅನುಯಾಯಿಗಳನ್ನೇ ಅಸ್ತ್ರವಾಗಿಸಿಕೊಂಡು ಮತ್ತೆ ವೈದಿಕ ಯುಗವನ್ನು ಸಂಸ್ಥಾಪನೆಗೈಯುವ ಬಿಜೆಪಿಯ ಮರ್ಮಕ್ಕೆ ಪ್ರತ್ಯೇಕ ಧರ್ಮದ ಪ್ರತಿಪಾದನೆಯ ಮೂಲಕ ಸಿದ್ದುಕೊಟ್ಟ ಪೆಟ್ಟಿದೆಯಲ್ಲ- ಅದು ಕೇವಲ ಯಡ್ಡಿಯ ಮುಖ್ಯಮಂತ್ರಿ ದುರಾಸೆಗಷ್ಟೇ ಅಲ್ಲ, ಲಿಂಗಾಯತ ಓಟ್‌ಬ್ಯಾಂಕ್‌ನ ಬಿಜೆಪಿಯ ಹುನ್ನಾರಕ್ಕೂ ಹಾಕಿದ ಏಟಾಗಿತ್ತು.

ಖುದ್ದು ಲಿಂಗಾಯತರೇ ತಮ್ಮದು ಪ್ರತ್ಯೇಕ ಧರ್ಮವೆಂದು ಹಠಕ್ಕೆ ಬೀಳಲು ಹಿಂಜರಿಯುತ್ತಿದ್ದ ಈ ಮೋದಿಯ ಮಾಯಾಜಾಲದಲ್ಲಿ ಚೂರುಪಾರು ಸ್ವಾಭಿಮಾನವುಳ್ಳ, ಬಸವಣ್ಣನ ಬಗ್ಗೆ ಕಿಂಚಿತ್ತಾದರೂ ಗೌರವವುಳ್ಳ ಯಾರೇ ಓರ್ವ ಪ್ರಾಮಾಣಿಕ ಲಿಂಗಾಯತನಾದರೂ ತಮ್ಮದು ಪ್ರತ್ಯೇಕ ಧರ್ಮವೆಂದ ಮುಖ್ಯಮಂತ್ರಿಯ ಪ್ರತಿಪಾದನೆಯನ್ನೂ ಗೌರವಿಸಬೇಕು ಮತ್ತು ಬಿಜೆಪಿ, ಸಂಘಪರಿವಾರದ ಮನುವಾದಿ ತಂತ್ರದ ವಿರುದ್ಧ ಯೋಚಿಸಲೇಬೇಕು. ಸದ್ಯಕ್ಕೆ ಬಿಜೆಪಿಯ ಲಿಂಗಾಯತ ಓಟ್‌ಬ್ಯಾಂಕ್ ಹುನ್ನಾರಕ್ಕೆ ಸಿದ್ದು ಕೊಟ್ಟ ಪೆಟ್ಟಂತೂ ಸಣ್ಣದೇನಲ್ಲ ಮತ್ತು ಯಡ್ಡಿ ಗ್ಯಾಂಗ್ ಮುಟ್ಟಿ ನೋಡಿಕೊಳ್ಳದಿರಲು ಸಾಧ್ಯವೇ ಇಲ್ಲ!

■ ಡಾ. ಸೋಮನಾಥ್



ಮೈಸೂರಿನ ಹೋಟೆಲ್ ಒಂದರಲ್ಲಿ ವಿಶ್ವನಾಥ್ ನಡೆಸಿದ ಸಭೆಯಲ್ಲಿ ಭಾಗವಹಿಸಿದ್ದ ಅಳಿದುಳಿದ ಹಣ್ಣು ಹುಟ್ಟು ಮುಖಂಡರು



ವಿಶ್ವನಾಥ್ ಸಭೆಯಲ್ಲಿ ಭಾಗವಹಿಸಿದ್ದ ಬೆಂಬಲಿಗರೆನಿಸಿಕೊಂಡ ಹತ್ತಿಪ್ಪತ್ತು ಜನ.

ಮೈಸೂರು: ಹಳ್ಳಿಹಕ್ಕಿಯ ಹಳೇ ರಾಗ

ಮಾಜಿ ಸಂಸದ ಎಚ್.ವಿಶ್ವನಾಥ್‌ರ ರಾಜಕೀಯ ಬದುಕು 'ಹುಲಿ ಬಂತು ಹುಲಿ' ಎಂಬ ಕತೆಯಂತಾಗಿದೆ. 'ಕಾಂಗ್ರೆಸ್ ಬಿಡುತ್ತೇನೆ' ಎನ್ನುವ ಅದೇ ರಾಗ ಮತ್ತೆಮತ್ತೆ ಕೇಳಿಬರುತ್ತಿದೆಯೇ ವಿನಾಃ ಅದರಾಚೆಗೆ ಒಂದಿಂಚೂ ಬೆಳವಣಿಗೆಗಳು ನಡೆದಿಲ್ಲ. ಕಳೆದ ಆರು ತಿಂಗಳಿಂದ ಇಂಥಾ ರೂಮರ್‌ನಿಂದಲೇ ಸುದ್ದಿಯಲ್ಲಿರುವ ವಿಶ್ವನಾಥ್ ಮೊನ್ನೆ ಕರೆದಿದ್ದ ಬೆಂಬಲಿಗರ ಸಭೆಯಲ್ಲೂ ಅದೇ ಹಾಡು ಹಾಡಿದರೇ ವಿನಾಃ ಯಾವಾಗ ಪಕ್ಷ ಬಿಡ್ತಾರೆ, ಬಿಟ್ಟ ನಂತರ ಯಾವ ಪಕ್ಷ ಸೇರಿಕೊಳ್ತಾರೆ, ಮುಂದಿನ ಹಾದಿಯೇನು ಎಂಬ ಬಗ್ಗೆ ಯಾವ ಸ್ಪಷ್ಟತೆಯನ್ನೂ ಹೇಳಿಕೊಳ್ಳಲಿಲ್ಲ.

ಮೈಸೂರಿನ ಹೋಟೆಲ್ ಒಂದರಲ್ಲಿ ವಿಶ್ವನಾಥ್ ಇತ್ತೀಚೆಗೆ ಒಂದು ಸಭೆ ಕರೆದಿದ್ದರು. ಹಿತೈಷಿಗಳು, ಅಭಿಮಾನಿಗಳು ಮತ್ತು ಬೆಂಬಲಿಗರ ಸಭೆ ಎಂಬ ನಾಮಕರಣ ಅದಕ್ಕಿದ್ದರೂ ಅಲ್ಲಿದ್ದದ್ದು ಮೂರು ಮತ್ತೊಂದು ಬೆರಳೆಣಿಕೆಯ ಮಂದಿಯಷ್ಟೆ. ಮಾಜಿ ಶಾಸಕ ಎಚ್.ಸಿ.ಬಸವರಾಜು, ಎಚ್.ಡಿ.ಬಸವರಾಜು, ಚಾಮುಂಡೇಶ್ವರಿ ಬ್ಲಾಕ್ ಕಾಂಗ್ರೆಸ್ ಮಾಜಿ ಅಧ್ಯಕ್ಷ ಅರ್ಕೇಶ್ವರ್, ಚಾಮರಾಜ ಬ್ಲಾಕ್ ಮಾಜಿ ಅಧ್ಯಕ್ಷ ರಾಜೇಂದ್ರ, ನಗರ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ರೇವಣ್ಣ ಮಾಜಿ ಮೇಯರ್ ಹಾಲಿ ಸದಸ್ಯ ಜೆಡಿಎಸ್ ಮುಖಂಡ ಬಿ.ಎಲ್.ಭೈರಪ್ಪ ಸೈಯದ್ ಅಕ್ರಂ, ನಗರ ಕಾಂಗ್ರೆಸ್ ಪರಿಶಿಷ್ಟ ಜಾತಿ, ಪಂಗಡ ವಿಭಾಗದ ಅಧ್ಯಕ್ಷ ಆರ್.ಸೋಮಸುಂದರ್, ಮುಖಂಡ ರಮೇಶ್ ಎಂಬಿತ್ಯಾದಿ ಸವಕಲು ಮುಖಗಳಷ್ಟೆ ಅಲ್ಲಿದ್ದದ್ದು.

ಯಥಾಪ್ರಕಾರ ಸಿದ್ದರಾಮಯ್ಯ ವಿರುದ್ಧ ನಿರರ್ಗಳವಾಗಿ ಹರಿಹಾಯ್ದ ಹಳ್ಳಿಹಕ್ಕಿ "ಕಾಂಗ್ರೆಸ್ ಪಕ್ಷವನ್ನು ನನ್ನ ತಾಯಿ ಎಂದೇ ಭಾವಿಸಿದ್ದೆ. ಆದರೆ, ಸುಮಾರು ಎರಡು ವರ್ಷಗಳಿಂದ ಪಕ್ಷದ ರಾಜ್ಯ ಮಟ್ಟದ ನಾಯಕರ ನಡವಳಿಕೆಯಿಂದ ಬೇಸತ್ತು ಹೋಗಿದೆ. ಹಾಗಾಗಿ ಕಾಂಗ್ರೆಸ್‌ನಿಂದ ಆಚೆ ಹೋಗಲು ನಿರ್ಧರಿಸಿದ್ದೇನೆ. ಇನ್ನೊಂದು ವಾರದಲ್ಲಿ ಅಂದರೆ ಇದೇ ತಿಂಗಳ 25, 26ರೊಳಗೆ ಕಾಂಗ್ರೆಸ್‌ನಿಂದ ಆಚೆ ಹೋಗುವುದು ಶತಸಿದ್ಧ" ಎಂದರು. ಅಂದಹಾಗೆ, ಪ್ರಸ್ತುತ ಕೆಪಿಸಿಸಿಯಲ್ಲಿ ನೆಹರು, ಇಂದಿರಾ ಗಾಂಧಿ, ರಾಜೀವ್ ಗಾಂಧಿ, ಸೋನಿಯಾ ಗಾಂಧಿ, ರಾಹುಲ್ ಗಾಂಧಿಗಳ ಕಾಂಗ್ರೆಸ್ ಇಲ್ಲವಂತೆ, ಇರುವುದು ಕೇವಲ ಸಿದ್ದರಾಮಯ್ಯ ಅವರ ಕಾಂಗ್ರೆಸ್ ಅಂತೆ.


ಹಾಗಾಗಿ ಹಿರಿಯ ನಿಷ್ಠಾವಂತ ಕಾಂಗೆಸ್ಸಿಗರಿಗೆ ಕನಿಷ್ಠ ಗೌರವವೂ ದಕ್ಕುತ್ತಿಲ್ಲ ಎಂದು ದೂರಿದ ಹಳ್ಳಿಹಕ್ಕಿ ತನ್ನ ಮತ್ತು ಸಿದ್ದು ನಡುವಿನ ಮುನಿಸಿಗೆ ಕಾರಣ ಏನೆನ್ನುವ ಸೂಕ್ಷ್ಮವನ್ನೂ ಹಾಡಿಕೊಂಡಿತು. ಅದು ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು ಎರಡೂವರೆ ವರ್ಷ ತುಂಬಿದ್ದ ಸಂದರ್ಭ. ಆಗ ಈ ಹಳ್ಳಿಹಕ್ಕಿಯನ್ನು ಖಾಸಗಿ ಸುದ್ದಿ ವಾಹಿನಿಗಳು ಸಂದರ್ಶನಕ್ಕೆ ಕರೆದಿದ್ದವಂತೆ. ಆಗ ಸಂದರ್ಶಕರು ಮರಳು ಮಾಫಿಯಾದಲ್ಲಿ ಮುಖ್ಯಮಂತ್ರಿ ಹಾಗೂ ಲೋಕೋಪಯೋಗಿ ಸಚಿವರ ಪುತ್ರರ ಕೈವಾಡ ಇದೆಯೇ ಎಂದು ಪ್ರಶ್ನೆ ಕೇಳಿಬಿಟ್ಟರಂತೆ. ಅದಕ್ಕೆ ಈ ಹಳ್ಳಿ ಹಕ್ಕಿ "ಇದೆ ಎಂದು ಜನರು ಮಾತನಾಡುತ್ತಿದ್ದಾರೆ" ಎಂದು ಅಡ್ಡಗೋಡೆ ಮೇಲೆ ದೀಪ ಇಟ್ಟಂತೆ ಹೇಳಿಬಿಟ್ಟರಂತೆ. ಅಲ್ಲಿಂದ ಶುರುವಾಯಿತಂತೆ ನೋಡಿ ಈ ಹಳ್ಳಿಹಕ್ಕಿ ಮೇಲೆ ಕಾಂಗ್ರೆಸ್ ನಾಯಕರ ದ್ವೇಷ. ಅಂದಿನಿಂದ ಈ ಕಾಂಗ್ರೆಸ್ ನಾಯಕರು ಈ ಹಳ್ಳಿಹಕ್ಕಿಯನ್ನು ಯಾವುದೇ ಸಭೆ, ಕಾರ್ಯಕ್ರಮಗಳಿಗೆ ಕರೆಯುವುದನ್ನು ಬಿಟ್ಟುಬಿಟ್ಟರಂತೆ.

ಅಷ್ಟೇ ಅಲ್ಲ ನಾನು ಲಿಬರಲ್ ಲಿಬರಲ್ ಎನ್ನುತ್ತಲೇ ಮೈಸೂರಿನ ಪ್ರಗತಿಪರರ ಮನಗೆದ್ದಿದ್ದ ಈ ಹಳ್ಳಿಹಕ್ಕಿ ಸಭೆಯಲ್ಲಿ ಇನ್ನೊಂದು ಬಾಂಬ್ ಸಿಡಿಸಿತು. 20 ವರ್ಷಗಳಿಂದ ಸಿದ್ದರಾಮಯ್ಯರನ್ನು ರಾಜಕೀಯವಾಗಿ ಬೆಳೆಸಿದ ಕುರುಬ ಸಮುದಾಯದಿಂದ ಕೇವಲ ಒಬ್ಬನೇ ಒಬ್ಬ ವ್ಯಕ್ತಿಯನ್ನು ಸಚಿವ ಸಂಪುಟಕ್ಕೆ ಸೇರಿಸಿಕೊಳ್ಳಲಿಲ್ಲ ಎಂಬ ಜಾತಿ ಬಾಂಬ್ ಸಿಡಿಸಿದ ವಿಶ್ವನಾಥ್ ತಮ್ಮ ಇಷ್ಟುದಿನದ ಮುತ್ಸದ್ದಿತನಕ್ಕೆ ತಾವೇ ಮಸಿ ಬಳಿದುಕೊಂಡರು. ಸಿದ್ದರಾಮಯ್ಯನ ಮೇಲಿರುವ ಸಿಟ್ಟಿಗೆ ಜಾತಿಯನ್ನು ಎಳೆತಂದದ್ದು ವಿಶ್ವನಾಥ್‌ಗೆ ಶೋಭೆ ತರುವಂತದ್ದಾಗಿರಲಿಲ್ಲ. ಕಳೆದ ಲೋಕಸಭಾ ಚುನಾವಣೆಯಲ್ಲಿ ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿಯಾಗಿ ಸೋತ ನಂತರದಿಂದಲೂ ಸಿದ್ದು ಸರ್ಕಾರವನ್ನು ಒಂದಲ್ಲ ಒಂದು ಕಾರಣಕ್ಕೆ ಕಾಲೆಳೆಯುತ್ತಲೇ ಬಂದಿದ್ದಾರೆ. ಅಧಿಕಾರವಿಲ್ಲದ ಹಳ್ಳಿಹಕ್ಕಿಯ ಆಲಾಪವೋ ... ಸಿದ್ದರಾಮಯ್ಯನನ್ನು ಕಾಂಗ್ರೆಸ್‌ಗೆ ತಂದದ್ದು ತಾನು ... ಯಜಮಾನಿಕೆಯ ಗತ್ತೋ ಒಟ್ಟಿನಲ್ಲಿ ಕೂತ ಕೊ... ಕೊಡಲಿ ಹಾಕುವ 'ಕಸುಬು' ಮಾಡುತ್ತಲೇ ಬಂ...

ಒಂದೊಮ್ಮೆ ಕಾಂಗ್ರೆಸ್ ತೊರೆದರೂ ಬೇರೆ ಪ... ವಿಶ್ವನಾಥ್‌ಗೆ ಭರ್ಜರಿ ಸ್ವಾಗತಗಳೇನೂ ಕಾದಿಲ್ಲ. ಜೆ... ಹೋಗ್ತಾರೆ ಎನ್ನುವ ಗುಲ್ಲು ಏಳುತ್ತಿದ್ದಂತೆಯೇ ಮ... ಭಾಗದ ಪ್ರಭಾವಿ ಜೆಡಿಎಸ್ ಮುಖಂಡ ... ದೇವೇಗೌಡರು ಬಂಡಾಯದ ಬಾವುಟ ಹಾ... ವಿಶ್ವನಾಥ್‌ರ ಹುಮ್ಮಸ್ಸಿಗೆ ತಣ್ಣೀರು ಎರಚಿದ್ದಾಗಿ...

ಬೇಕಾದರೆ ಸಾಮಾನ್ಯ ಕಾರ್ಯಕರ್ತನಾಗಿ ಜೆಡಿಎಸ್‌ಗೆ ಸೇವೆ ಮಾಡಲಿ, ಅದು ಬಿಟ್ಟು ನಾ... ಗೆಟಪ್ಪಿನಲ್ಲಿ ಠಳಾಯಿಸಲು, ಹುಣಸೂರಿನ ಟಿಕೆಟ್ ... ಮಾಡಲು ಬಿಡೋದಿಲ್ಲ ಅಂತ ಗುಟುರು ಹಾಕಿದ... ಬಗ್ಗೆಯೂ ಸಭೆಯಲ್ಲಿ ಸ್ಪಷ್ಟವಾಗಿ ಹೇಳದ ವಿ... "ಮುಂದೆ ಯಾವ ಪಕ್ಷಕ್ಕೆ ಹೋಗುವುದರ ಬಗ್ಗೆ ... ಸ್ಪಷ್ಟ ನಿರ್ಧಾರ ತೆಗೆದುಕೊಂಡಿಲ್ಲ" ಎಂಬ ಹಳೇ ... ಹಾಡಿ ಮಂಗಳ ಹಾಡಿದ್ದಾರೆ.

ದಲಿತ್ರು ಬಗ್ಗೆ ಇವರದು ಕಂಪನಿ ಡ್ರಾಮಾ



• ಬಿ.ಚಂದ್ರೇ...

ಕಟ್ಟೆಪುರಾ...

ಮಳೆಯ ನಿರೀಕ್ಷೆಯಲ್ಲಿದ್ದ ಅವರಿಗೆ ಆಘಾತವಾಗುವಂತೆ ವಾಟಿಸ್ಸೆ,

"ನಮ್ಮ ಕಡಿಕೆ ಮಳಿಯಾಗದಿಲ್ಲ ಬುಡಿ ಅತ್ತಗೆ" ಎಂದ. ಆಗ ಉಗ್ರಿ,

"ನೀನೇನು ಹವಾಮಾನ ಇಲಾಖೆ ಸಿಬ್ಬಂದಿಯೇನೊ" ಎಂದ.

"ಕರಟ್ಟಾಗೆ ಕೇಳಿದೆ ಕೆಸೊ ಉಗ್ರಿ. ಹವಾಮಾನ ಇಲಾಖೆ ಜನ ಈಚೆಗೆ ಸಿಬ್ಬಂದಿಯಾಗಿದ್ದಾರೆ ವರತೂ ತಜ್ಞರಾಗಿಲ್ಲ, ಫಾದ್ನೆ ವರಷ ಅವುರ ಮಾತ ಕೇಳಿಕಂಡು ಆ ಬಸವಣ್ಣನ ಮಗ ಜಮೀನು ಲೆವಲ್ ಮಾಡಿಸಿ ಜೆಸಿಬಿ ಟ್ರಾಕ್ಟ್ರಿಯೋರಿಗೆ ಸಾವುರಾರುಪಾಯಿ ಕೊಟ್ಟು ಮಳೆ ಕಾಯ್ಕಂಡಿದ್ದ, ಈ ಹವಾಮಾನದೋರು ಹಗುರದಿಂದ ಸಾಧಾರಣ ಮಳೆ ಅಂತ್ಲೆ ಹೇಳಿಕಂಡು ಬಂದ್ರು. ಯಾವ ಹಗುರನೂ ಇಲ್ಲ, ಸಾಧಾರಣನೂ ಇಲ್ಲ, ಬರಗಾಲ ಬತ್ತು, ಆದ್ರಿಂದ ಈ ಹವಾಮಾನ ಇಲಾಖೆಲಿರೊರು ಸಿಬ್ಬಂದಿನೆ ಹೊರತು ಹವಾಮಾನ ಹೇಳೊರಲ್ಲ, ಅವುರಿಗೆ ಅವುಮಾನವೇ ಆಗಲ್ಲ, ಆದ್ರಿಂದ ಇನ್ನೂ ತಮ್ಮ ಸುಳ್ಳು ಬುಟ್ಟಿಲ್ಲ, ಆದ್ರೆ ನಾನೇಳ್ತಿನಿ ಕೇಳೊ. ನಮಿಗಷ್ಟೇ ಅಲ್ಲ ಮಲನಾಡಿಗೂ ಮಳಿಯಾಗದಿಲ್ಲ" ಎಂದ ವಾಟಿಸ್ಸೆ.

"ಅದ್ಯಂಗೇಳ್ತಿಯಾ?"

"ನೋಡೊ, ದಡಿ ಮಳಿಗೂ ಆ ಬೀದರ್, ಗುಲಬರ್ಗ, ಬಿಜಾಪುರಕೂ ಯಾವ ಸಮಂಧನೂ ಇಲ್ಲ, ಆದ್ರು ಅಲ್ಲಿ ಮಾಮಾರಿ ಮಳುಯ್ತಾ ಅದೆ ಅಂದ್ರೆ ಅದು ಈ ಕಡೆ ಮಳೆ. ಆದ್ರಿಂದ ನಮಿಗೆ ಮಳಿಯಾಗದಿಲ್ಲ."

"ಈ ಸತಿ ಮಳಿಯಾಗದೆಯಿದ್ರೆ ಲೋಕ ಬದಿಕ್ಯತೇನ್ಲ" ಎಂದ ಕಾಳಮಾವ.

"ಯಂಗೋ ಬದುಕ್ತದೆ ದೊಡಪ್ಪ, ಆಗೊಂದ ಸತಿ ನಾವ್ರ ಸಣ್ಣುಡಗರಾಗಿದ್ದಾಗ, ಇಂತದೇ ಬರಗಾಲ ಬಂದಿತ್ತು, ಇಂದ್ರಾಗಾಂಧಿ ಅಮೆರಿಕದಿಂದ ಹಲ್ಲು ಜ್ವಾಳ ತಂದು ಹಂಚಿದ್ಲು ಅಂತ ನೀನೆ ಹೇಳಿದ್ದೆ. ಈಗಂಗೇನು ಇಲ್ಲ, ನಮ್ಮ ದೇಶದಲ್ಲೇ ಯಾವುದಾದ್ರು ಸ್ಟೇಟಿಂದ ಫುಡ್ ಸಪ್ಲೈ ಆಯ್ತದೆ. ಡೊಂಟ್‌ವರಿ. ಇನ್ನು ಮ್ಯಾಲೆ ಸರಕಾರನೆ ಜನಗಳನ್ನು ಸಾಕ್ತದೆ" ಎಂದ ವಾಟಿಸ್ಸೆ.

"ಸಿದ್ದರಾಮಯ್ಯ ಹೋದ ಮ್ಯಾಲೆ ಅಕ್ಕಿ ಕೊಡದ ನಿಲ್ಲುಸ್ತರೇನ್ಲ?" ಎಂದಳು ಜುಮ್ಮಿ.

"ನಿಲ್ಸಕದೇನು ಸಿದ್ದರಾಮಯ್ಯನ ಜಮೀನಿಂದ ಬರೋ ಅಕ್ಕಿಯೇನಕ್ಕ ಮುಂದೆ ಯಾವುದೇ ಸರಕಾರ ಬಂದ್ರೂ ಅನ್ನಭಾಗ್ಯ ನ್ಯಡಿಸಿಕಂಡೋಗಬೇಕು, ಅಂತ ಕಾರ್ಯಕ್ರಮ ಅದು."

"ಬಿಜೆಪಿಯೋರು ಬಂದ್ರು ನ್ಯಡುಸ್ತರ?"

"ನ್ಯಡಸ್ಲೇಬೇಕು. ನೋಡೀಗಾಗ್ಲೆ ಎಡೂರಪ್ಪನ ಟೀಮು ದಲಿತ್ರ ಮನಿಗೋಗಿ ಅನ್ನಭಾಗ್ಯದ ಅಕ್ಕಿ ಅನ್ನವ ಬಾರುಸ್ತ ಕುಂತವ್ರರೆ."

"ಅವುರ್‍ಯಾಕ್ ದಲಿತ್ರ ಮನಿಗೋಗಿ ಉಣತಾಯಿದ್ದರೂ?"

"ಅದಕೂ ಈ ಸಿದ್ದರಾಮಯ್ಯನೆ ಕಾರಣ ಕಣಕ್ಕ ಇವ್ರನು ಅಲುಪ ಸಂಖ್ಯಾತ್ರ, ಹಿಂದುಳದೊರು, ದಲಿತ್ರ ಅನ್ನೋ ಜನಗಳ ಮುಂದಕ್ಕೆ ತತ್ತಿನಿ ಅಂತ ಅವುರೆಸರಲ್ಲೇ ರಾಜಕಾರಣ ಮಾಡಿ ಅವುದಿ ಮುಗುಸ್ತಾ ಅವ್ರನೆ. ಆದ್ರೆ ಈ ಬಿಜೆಪಿಗಳಿಗೆ ಮೇಲುಜಾತಿ ಜೊತೆಗೆ ಕೆಳಜಾತಿ ಸೇರಿಸಿಗಂಡ್ರೆ ತಿರಗ ಪವರಿಗೆ ಬತ್ತಿವಿ ಅನ್ನೊ ಜ್ಞಾನೋದಯ ಆಗಿ ದಲಿತ್ರ ಮನೆ ಹುಡಿಕ್ಕಂಡು ಊಟಕೋಯ್ತಾ ಅವುರೆ."

"ಓಟಿಗಾಗಿ ಊಟುಕೋಯ್ತಾ ಅವುರೆ ಅನ್ನು."



"ಊ ಕಣಕ್ಕ ಇಷ್ಟು ಸಾವುರ ವರುಸದ ಮ್ಯಾಲೆ ಬ್ರಾಂಬ್ರು ಪಾರ್ಟಿ ಜನ ಹರಿಜನರ ಮನೆ ಊಟಕ್ಕೆ ಹೋಯ್ತರೆ ಅಂದ್ರೆ ಆ ನನಮಕ್ಕಳ ಮ್ಯಾಲೆ ಅಟ್ರಾಸಿಟಿ ಕೇಸಾಕಬೇಕು."

"ಉಣ್ಣಕ್ಕೆ ಅಂತ ಬಂದೋರಿಗೆ ಅಟ್ರಾಸಿಟಿ ಕೇಸಾಕಬೇಕು ಅಂತಿಯಲ್ಲೊ."

"ಮಿಸ್ಟರ್ ಉಗ್ರಿ, ಪಸ್ಟ್‌ಪಾಲ್ ಇದೊಂದು ಡ್ರಾಮ. ನಾನು ನಿನ್ನ ಮನೆಗೆ ಊಟಕ್ಕೆ ಬತ್ತಿನಿ ಅನ್ನದಾದ್ರೆ ಸರಿ. ನೀನೊಬ್ಬ ಹರಿಜನ, ನಾನು ಬ್ರಾಹ್ಮಣ ಅಥವ ಲಿಂಗಾಯತ ಆದ್ರು ನಿನ್ನ ಮನೆಗೆ ಬಂದು ಉಣ್ಣತಿವಿ ಅಂದ ಕೂಡ್ಲೆ ಕೇಸು ಹಿಕ್ಕಾಗಬೇಕು. ಇಷ್ಟು ದಿನ ಏನಾಗಿತ್ತು ಇವುರಿಗೇ? ಇವತ್ತಿನ ಬದಲಾವಣೆಗೆ ಕಾರಣ ಏನು? ಹೋಗ್ಲಿ ಯಲಕ್ಷನ್ನಾದ ಮ್ಯಾಲೂ ಇಂತಹ ಕೆಲಸ ಮುಂದುವರುಸ್ತಾರ? ಹೋಗ್ಲಿ ನಿಮ್ಮೂರಲ್ಲಿರೊ ಹರಿಜನರನ್ನು ನಿಮ್ಮನೆಗೆ ಕರದು ನಡುಮನೆಲಿ ಕೂರಿಸಿ 'ಊಟ ಹಾಕ್ತಿರಾ? ಹಂಗೇ ನೋಡಿದ್ರೆ ಇದ್ರಲ್ಲಿ ನಾಟಕ ಅಲವೆ?"

"ಯಂಗೊ ಹರಿಜನರ ಮನಿಗಂಟ ಹೋದ್ರಲ್ಲ ಬುಡ್ಡ" ಎಂದ ಕಾಳಮಾವ.

"ನಿನ್ನ ಮಾತು ಕೂಡ ಕೇಸಿಗೆ ಲಗತ್ತಾಗ್ಯದೆ ದೊಡಪ್ಪ."

"ನೋಡ್ಕ, ಗಾಂಧಿಮಾತ್ಮ ಒಂದೂರಿಗೋದ್ರೆ ಹರಿಜನರ ಕೇರಿಲಾಸಿ ಹೋಗೋನಂತೆ. ಆಗ ಊರಿನ ಹ್ಯನ್ನಾಳವಂತ್ರು ಗಾಂಧಿಮಾತ್ಮನ ಹಿಂದೆ ಹೋಗೊರಂತೆ. ಅಗೊ ಅಂಗೆ ನಿನ್ನ ಮಾತ ಕಟಿಗಂಡ್ರೆ ಗಾಂಧಿ ಮಾತ್ಮನ ಮ್ಯಾಲೂ ಕೇಸಾಕಬೇಕಾಗಿತ್ತು" ಎಂದ ಕಾಳಮಾವ.

"ದೊಡಪ್ಪ, ಗಾಂಧಿ ಮಾತ್ಮಂದೂ ನಿಜವಾದ ಕಾಳಜಿಯಾಗಿತ್ತು. ಆದ್ರೆ ಇವುರುದು ಕಂಪನಿ ಡ್ರಾಮ. ಅದ್ಕೆ ಇವುರು ಕೇಸಿಗೆ ಹೇಳಿಮಾಡಿಸಿದ ಜನ. ಇದ್ಕು ಮದ್ಲು ಏನು ಮಾಡಿದ್ರು ಗೊತ್ತೆ?"

"ಅದೇನು ಮಾಡಿದ್ರು?"

"ಹೊರಗಡಿಂದ ಊಟ ತರಿಸಿ ದಲಿತ್ರು ಮನೇಲಿ ಉಂಡು ಬಂದಿದ್ರು."

"ಅದು ತಪ್ಪು ಬುಡು. ಅದ್ಯಾರು ಒಪ್ಪಕ್ಯಾಗದಿಲ್ಲ."

"ಕುಮಾರಸ್ವಾಮಿನೂ ಹಳ್ಳಿಲೋಗಿ ಯಾರ್‍ಯಾರು ಮನೇಲೂ ಮನಿಗಿದ್ದು ಬತ್ತಿದ್ನಪ್ಪ, ಜನ ಓಟು ಕೊಟ್ರ. ಅಂಗೆ ಇವುರುದು ಬುಡೊ ಅತ್ತಗೆ" ಎಂದ ಉಗ್ರಿ.

"ಕುಮಾರಣ್ಣಂದೊಂದು ತಮಾಸಿಗೊತ್ತೇನಕ್ಕ?"

"ಇಲ್ಲ ಹೇಳ್ಕ."

"ಅವುನು ಗ್ರಾಮವಾಸ್ತವ್ಯ ಮಾಡುವಾಗ ಶಿವಮೊಗ್ಗ ಜಿಲ್ಲೆ ಒಂದಳ್ಳಿ ಸೆಲೆಕ್ಟ್ ಮಾಡಿದ್ದ. ಆ ಹಳ್ಳಿಲ್ಲೊಬ್ಬಳು ನಿನ್ನಂತ ರಾಜಕಾರಣಿ ಇದ್ಲು, ಸ್ವಜಾತಿ ಬೇರೆ. ಸರಿ ಆ ಹೆಣಮಗಳು ಪಸ್ಟ್‌ನೈಟ್ ತರ ರೂಮನ್ಯಲ್ಲ ಶೃಂಗಾರ ಮಾಡಿ, ಕುಮಾರಣ್ಣ ಬತ್ತನೆ, ಅದೂ ಮುಖ್ಯಮಂತ್ರಿ ನಮ್ಮನಿಗೆ ಬತ್ತನೆ ಅಂತ ಭಾಳ ಖುಷಿಯಾಗಿದ್ಲು, ಸಾರ್ವಜನಿಕರ ಅರ್ಜಿ ತಗಂಡು, ತನ್ನವ್ರೂ ಕೆಲವು ಪರ್ಮಿಟ್ ಅರ್ಜಿ ಜೊತೆಗೆ ತನಗಾಗದ ಅಧಿಕಾರಿಗಳ ಟ್ರಾನ್ಸಫರ್ ಅರ್ಜಿ ತಯಾರಿಸಿಗಂಡು ರೆಡಿಯಾಗಿದ್ಲು, ಆ ಟೈಮಿಗೆ ಯಾರೋ ಜೆಡಿಎಸ್ ಕಾರ್ಯಕರ್ತ 'ಅಣ್ಣಾ, ನಿನ್ನ ಗ್ರಾಮ ವಾಸ್ತವ್ಯ ಬದ್ಲಾಸು ಇಲ್ಲ ಅಂದ್ರೆ ನಿನಿಗೆ ಕೆಟ್ಟೆಸರು ಬತ್ತದೆ' ಅಂದನಂತೆ."

"ಅಂತ ಹೆಂಗಸೇನ್ಲ ಅವುಳು?"

"ಅಂಥೋಳಲ್ಲ ಕಣಕ್ಕ. ಆದ್ರು ಮುಖ್ಯಮಂತ್ರಿ ನನ್ನ ಮನೆಲಿ ಮನಿಗಿದ್ದೋದ ಅನ್ನೊ ಮ್ಯಾಟ್ರ ಮುಂದೆ ಯಾವತ್ತೂ ಹೇಳಿಕೊಂಡು ರಾಧಕ್ಕ, ಅನಿತಕ್ಕನಿಗೆ ಅನುಮಾನ ಬರಂಗೆ ನ್ಯಡಕತಿದ್ಲು, ಅದು ಗೊತ್ತಾಗಿ ಕುಮಾರಣ್ಣ ಆ ಕಡೆ ದಿಕ್ಕಿಗೆ ಹೋಗದಂಗೆ ಪರಾರಿಯಾದ. ಯಾವತ್ತೂ ರಾಜಕಾರಣಿಗಳು ಸಹಜವಾಗಿರಬೇಕು. ಡ್ರಾಮ ಮಾಡಬ್ಯಾರ್ದು."

"ಕುಮಾರಣ್ಣನ್ನೇನೋ ಪೊಲೀಸ್‌ನೋರು ಅರೆಸ್ಟು ಮಾಡಕ್ಕೋಗಿದ್ರಂತೆ. ನಿಜವೇನ್ಲ?"

"ಊ ಕಣಕ್ಕ, ಅದ್ಕೆ ಬೇಲ್ ತಗಂಡವುನೆ. ಇಪ್ಪತ್ತು ತಿಂಗಳಿದ್ದು ಮಾಡಿದ ಕೆಲಸಗಳು ಇನ್ನು ಅವೆ."

"ಅದೇನು ಮಾಡಿದ್ದ?"

"ಅಕ್ರಮವಾಗಿ ಗಣಿ ಅದುರು ತಗಿಯಕ್ಕೆ ಸಯಿನು ಮಾಡಿದ್ನಂತೆ. ಅವೀಗ ಕ್ಯಳ್ಳಿಸಿಗಂಡವೆ."

"ತಿರಗ ಬಂದು ರೈತರ ಸಾಲನ್ಯಲ್ಲ ಮನ್ನ ... ಅಂದ್ರೆ ಅವುನಿಗೆ ಏನೇನೋ ಕಂಟಕ" ಎಂದ ಕಾಳ...

"ನಮ್ಮ ದೊಡಪ್ಪನ ವಾಯ್ನಲ್ಲಿ ದೇವೇಗೌಡ್ರ ... ಬತ್ತಾ ಅದೆ. ಆದ್ರು ದೊಡಪ್ಪ ಈ ಜೆಡಿಎಸ್ ... ಅಂತ ಹೇಳಕ್ಕೆ ಬರದಿಲ್ಲ, ಆರು ದ್ವಾಸೆ ಕೊಟ್ರೆ ... ಮೂರು ದ್ವಾಸೆ ಕೊಟ್ರೆ ಸ್ವಸೆ ಕಡೆ ಅನ್ನೊ ಜನ, ...

"ಅಂತದೇನು ಮಾಡಿದ್ದುರ್ಲ?"

"ನೋಡು ದೊಡಪ್ಪ, ವಿಧಾನಪರಿಷತ್ ಶಂಕರಮೂರ್ತಿ ಅಂತ ಅವುರೆ, ಶೆಟ್ರು ಪೈಕಿ."

"ಕ್ಯಾಮಟಿಗ ಶೆಟ್ಟನೆ?"

"ವ್ಯಾಪಾರಿ. ಅವುನು ಆರ್‌ಎಸ್‌ಎಸ್ ಮನ್ಸ ... ಬುಟ್ರೆ ಪರವಾಗಿಲವಂತೆ. ಆದ್ರು ಸಾಬರ ಕಂಡ... ದಲಿತ್ರ ಕಂಡ್ರೆ ಹೆದ್ರಿ ಕಂಡು ಗೌರವ ಕೊ... ಆರ್‌ಎಸ್‌ಎಸ್ ಅಂದ್ರೆ ಮುಗಿತು ದೊಡಪ್ಪ ಸಾಮಾ... ಕಾಯಿಲೆಯಿರೊ ಮನ್ಸ. ಅಂಥೋನು ವಿಧಾನ... ಅಧ್ಯಕ್ಷಾಗಿರದು ಬ್ಯಾಡ ಅಂತ ಅವುನು ಮಾಡಿರೊ ... ಪಟ್ಟಿ ಮಾಡಿದ ಉಗ್ರಪ್ಪ ಅವುನ್ನ ಇಳಸಕ್ಕೆ ಅಂತ ... ತಂದನಂತೆ. ಆಗ ಜೆಡಿಎಸ್‌ನೋರು ಯಾರ... ಇರಬೇಕು?"

"ಯಾರು ದುಡ್ಡು ಕೊಡ್ತರೊ ಅವುರ ಕಡೆ" ... ಉಗ್ರಿ.

"ಮಿಸ್ಟರ್ ಉಗ್ರಿ, ಮಾಹಿತಿ ಇಲ್ದೆ ಮಾತಾಡಬ್ಯಾ...

"ಕುಮಾರಣ್ಣನ ಜೊತೆಲಿದ್ದೊರ ವ್ಯವ... ಆದಲವೇನೊ. ಆಗ ಸ್ವಜಾತಿ ನಮ್ಮ ವಿಮಲಾಗ... ಕೈಕೊಟ್ರು. ಪಾಪ ಯಂಥಾ ಹೆಂಗಸವ್ರಳು. ಅ... ಒಂದನೇ ಕ್ಲಾಸಿನಿಂದ ಎಸ್‌ಎಸ್‌ಎಲ್‌ಸಿವರಿಗೂ ... ಊಟ ಕೊಡತಿದ್ಲು, ಶಂಕರಮೂರ್ತಿ ಏನು ಕೊ... ಅವುನ ಜೀವನದಲ್ಲಿ ಯಾರಿಗಾರ ಕಾಫಿ ಕೊಡಿಸಿದ್ದನ ...

"ಅದ್ಕೆ ಕಣೊ ಉಗ್ರಿ ನಾನೇಳಕೊಂಟಿದ್ದು. ಭ... ಈ ಜೆಡಿಎಸ್ ಜನವುರಲ್ಲಾ ಇವುರು ಮೋಸ್ಟು ದೇ... ಜನ. ಮ್ಯಾಂಡ್ ಇಟ್ ಅಂಡ್ ಮೇಕ್ ನೋಟ...

"!?"

ೊಡಗು: 'ಕೈ' ಕೆಸರಾಟದ ನಡುವೆ ಸಿಮ್ಮನ ಎಂಎಲ್‌ಎ ಕನಸು!



ರ್ನಾಟಕದ ಕಾಶ್ಮೀರ ಕೊಡಗಿನಲ್ಲಿ ಎಲೆಕ್ಷನ್ ಎಗರಾಟಗಳು ಾಗಿವೆ. ಕೊಡವನಾಡಿನ ಮೇಲೆ ತನ್ನ ಹಿಡಿತವನ್ನು ಳಿಸಲು ಬಿಜೆಪಿ ಲೆಕ್ಕಾಚಾರದಲ್ಲಿ ನಿರತವಾಗಿದ್ದರೆ, ಗೆ ಹಿತಶತ್ರುಗಳದ್ದೇ ಕಾಟ. ಇನ್ನು ಜೆಡಿಎಸ್ ತನ್ನ ತರಿಸಲು ಮುಸ್ಲಿಂ ಮತಗಳ ಮೇಲೆ ಕಣ್ಣಿಟ್ಟು ಓಲೈಕೆ ರುಕ್ಕಿಳಿದಿದೆ. ದಿಡ್ಡಳ್ಳಿ ದುರಂತದ ಮೂಲಕ ರಾಜ್ಯಕ್ಕೆ ಕ ಜೀತಗಾರಿಕೆಯನ್ನು ಮತ್ತು ಪ್ಲಾಂಟರ್ ಮಾಫಿಯಾದ ರವನ್ನೂ ಪರಿಚಯ ಮಾಡಿಸಿದ್ದ ಕೊಡಗಿನಲ್ಲಿ ಈಗ ುದ್ದೇ ಕಾರುಬಾರು!


ಂಗ್ರೆಸ್ ಪಕ್ಷಕ್ಕೆ ಇಲ್ಲಿ ಎರಡೆರಡು ತಲೆನೋವು. ಇಡೀ ಲ್ಲಿ ಇರುವ ಎರಡು ವಿಧಾನಸಭಾ ಕ್ಷೇತ್ರಗಳಿಗೆ ಮುಂದಿನ ನ್‌ಗೆ ಯಾರ್ಯಾರನ್ನು ಅಭ್ಯರ್ಥಿಗಳನ್ನಾಗಿಸ ಬೇಕು ಪ್ರದಕ್ಕಿಂತ ಅದಕ್ಕಿಂತ ಮುನ್ನ ಜಿಲ್ಲಾಧ್ಯಕ್ಷ ಚುಕ್ಕಾಣಿಯನ್ನು ಕೈಗೆ ಕೊಡಬೇಕೆನ್ನುವುದೇ ದೊಡ್ಡ ಸಂಕಟವಾಗಿದೆ. ಬ್ಬರ ಪ್ರವೇಶ, ಜಿಲ್ಲಾ ಕಾಂಗ್ರೆಸಿನ ನಾಯಕರುಗಳ ಇಬ್ಬಗೆಯ ತ್ರ, ಜಾತಿ ಲೆಕ್ಕಾಚಾರಗಳು ಕಾಯಂ ಅಧ್ಯಕ್ಷರ ನೇಮಕಾತಿಗೆ ಾಗಿವೆ. ಕೊಡಗು ಕಾಂಗ್ರೆಸ್‌ನ ಸರ್ವಾಧಿಕಾರಿಣಿ ವೀಣಾ ್ಯ ಭವಿಷ್ಯದ ಮಂತ್ರಿಗಿರಿ ಮೇಲೆ ಕಣ್ಣಿಟ್ಟು ಕಾರ್ಯಾಚರಣೆಗೆ ರುವುದರಿಂದ ಆವರ ಹಠ ಜಿಲ್ಲಾಧ್ಯಕ್ಷ ಆಯ್ಕೆಯನ್ನು ್ಟ ಕಗ್ಗಂಟಾಗಿಸಿದೆ. ಹಿರಿಯ ನಾಯಕ ಮಲ್ಲಿಕಾರ್ಜುನ್ ಯವರ ಕೃಪಾಕಟಾಕ್ಷವಿರುವ ವೀಣಾ ಅಚ್ಚಯ್ಯನಿಗೆ ನಿಂದ ಯಾವ್ಯೊಬ್ಬ ಕಾಂಗ್ರೆಸ್ ಅಭ್ಯರ್ಥಿಯೂ ಗೆಲ್ಲುವುದು ಲ್ಲ. ಯಾಕೆಂದರೆ ಹಾಲಿ ವಿಧಾನ ಪರಿಷತ್ ಸದಸ್ಯೆ ಿರುವ ಆಕೆ ಮುಂದಿನ ಸರ್ಕಾರ ರಚನೆಯಲ್ಲಿ ಯಾಗಬೇಕೆನ್ನುವ ಆಸೆಯಲ್ಲಿದ್ದಾರೆ. ಹಾಗೊಮ್ಮೆ ಯಾರಾದರು ್ ಹುರಿಯಾಳು ಗೆದ್ದು ಶಾಸಕನಾದರೆ ತನ್ನ ಮಂತ್ರಿ ಿ ಪ್ರತಿಸ್ಪರ್ಧಿಯಾಗಬಹುದೆನ್ನುವ ಅಳುಕು ಆಕೆಯದ್ದು. ಅದೇ ಕಾರಣಕ್ಕೆ ಜಿಲ್ಲಾಧ್ಯಕ್ಷರ ಆಯ್ಕೆಯಿಂದ ಮೊದ ದು ಅಭ್ಯರ್ಥಿಗಳ ಆಯ್ಕೆವರೆಗೆ ವೀಕ್ ಕ್ಯಾಂಡಿಡೇಟ್ ನೇಮಿಸುವುದು ವೀಣಾ ಅಚ್ಚಯ್ಯರ ಸದ್ಯದ ಲೆಕ್ಕಾಚಾರ. ಜಾತಿವಾದಿಯೂ ಆಗಿರುವ ವೀಣಾ ಅಚ್ಚಯ್ಯ ಕೊಡಗಿನ ಸ್ಥಾನಗಳು ಕೊಡವ ಜನಾಂಗಕ್ಕೇ ಸಿಗಬೇಕು ಎನ್ನುವ ದಿಯವರು. ಹಾಗೆ ನೋಡಿದರೆ, ಆಕೆ ಕಾಂಗ್ರೆಸ್‌ಗಿಂತ ಗೆ ಹೆಚ್ಚು ಸೂಕ್ತವಾದ ಫ್ಯೂಡಲ್ ಹೆಂಗಸು. ಇಷ್ಟೆಲ್ಲ ಧ ಲೆಕ್ಕಾಚಾರಗಳನ್ನಿಟ್ಟು ಕೊಂಡೇ ಕೊಡಗಿನಲ್ಲಿ ಕಾಂಗ್ರೆಸ್ ಹೀನಾಯಸ್ಥಿತಿಗೆ ಕಾರಣಕರ್ತ ರಲ್ಲಿ ಒಬ್ಬನಾದ ಕರ್ನಾಟಕ ವ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ ಬಿದ್ದಾಟಂಡ ಯ್ಯನನ್ನು ಜಿಲ್ಲಾಧ್ಯಕ್ಷ ಸ್ಥಾನಕ್ಕೆ ವೀಣಾ ಅಚ್ಚಯ್ಯ ಲಿಸುತ್ತಿದ್ದಾರೆ. ಕೊಡವ ಸಾಹಿತ್ಯ ಅಕಾಡೆಮಿಯಲ್ಲಿ ಆತನ ಿ ಆರೋಪಗಳ ಸುರಿಮಳೆಯೇ ಇದೆ. ಈ ಹಿಂದೆ ೂರು-ಕೊಡಗು ಸಂಸದರಾಗಿದ್ದ ಎಚ್.ವಿಶ್ವನಾಥ್‌ಗೆ ದಲೋಕ ತೋರಿಸಿ, ಅಧ್ಯಕ್ಷ ಸ್ಥಾನ ಗಿಟ್ಟಿಸಿಕೊಂಡಿದ್ದ ಆತ ಧ್ಯಕ್ಷನಾದರೆ ಅರ್ಧಕ್ಕರ್ಧ ಕಾಂಗ್ರೆಸ್ಸಿಗರು ಪಕ್ಷ ತೊರೆಯಲು ಿದ್ದಾರೆ. ಕಳೆದ ವಾರ ರಾಜಕೀಯ ಕವಲುದಾರಿಯಲ್ಲಿರುವ ಾಥ್ ಕರೆದಿದ್ದ ಹಿತೈಷಿಗಳ ಸಭೆಯಲ್ಲಿ ಸುಮಾರಷ್ಟು ಕೈ ರು ತಮ್ಮಯ್ಯ ಅಧ್ಯಕ್ಷನಾಗುವುದಾದರೆ ತಾವೂ ಕಾಂಗ್ರೆಸ್ ಿಮ್ಮ ಜೊತೆ ಬರುತ್ತೇವೆ ಎಂದು ದನಿಗೂಡಿಸಿದ್ದು ಸಾಕ್ಷಿ.

ಜಿಲ್ಲಾ ಉಸ್ತುವಾರಿ ಸಚಿವ ಎಂ.ಆರ್. ಸೀತಾರಾಂ ಕೂಡಾ ವ ಜನಾಂಗದವರೇ ಅಧ್ಯಕ್ಷರಾಗಬೇಕು ಎಂದು ಕೆಪಿಸಿಸಿಗೆ ಸೋದು ವೀಣಾ ಅಚ್ಚಯ್ಯರ ಹಾದಿ ಸುಗಮಗೊಳಿಸಿದೆ. ರ್ವಾಸವೆಂದರೆ ಕೊಡವ ಜನಾಂಗದವರಲ್ಲಿ ಶೇ. 90ರಷ್ಟು ಬಿಜೆಪಿಯೊಂದಿಗೆ ಗುರುತಿಸಿಕೊಂಡಿದ್ದಾರೆ. ಇನ್ನು ಾಷೆ ಗೌಡ ಜನಾಂಗದವರೂ ಬಿಜೆಪಿ ಮತ್ತು ಜೆಡಿಎಸ್ ಹಂಚಿಹೋಗಿದ್ದಾರೆ. ಹಾಗಿರುವಾಗ ಕಾಂಗ್ರೆಸ್ ಬೆಂಬಲಿಸು ಸಮುದಾಯದ ಪಕ್ಷಗೆ ಮಣೆ ಹಾಕುವುದರತ್ತ ಕಾಂಗ್ರೆಸ್ ಯೋಚಿಸುವುದು ಕ್ಷೇಮ.


ದಸದ ಕೈ ಸೇನಾನಿಗಳು ಯಾರು?

ಕ್ಷ ಜಿಲ್ಲಾಧ್ಯಕ್ಷರ ಆಯ್ಕೆಗೆ ಸ್ಥಳೀಯ ನಾಯಕರ ಲೆಕ್ಕಾಚಾರಗಳು ಗರಿಗೆದರಿದ್ದರೆ, ಇರುವ ಎರಡು ಕ್ಷೇತ್ರಗಳಲ್ಲಿ ಅಭ್ಯರ್ಥಿಗಳು ಯಾರಾಗಬೇಕೆನ್ನುವ ಚರ್ಚೆಯೂ ಕೈ ಪಾಳಯದಲ್ಲಿ ಸದ್ದು ಮಾಡುತ್ತಿದೆ. ಮಡಿಕೇರಿ ಕ್ಷೇತ್ರದ ಕೈ ಅಭ್ಯರ್ಥಿಯಾಗಲು ಎ.ಐ.ಸಿ.ಯು.ಸಿ.ಯ ರಾಜ್ಯ ಘಟಕದ ಉಪಾಧ್ಯಕ್ಷ ನಾಪಂಡ ಮುತ್ತಪ್ಪ ಶತ ಪ್ರಯತ್ನ ನಡೆಸುತ್ತಿದ್ದು ಜಿಲ್ಲಾಧ್ಯಕ್ಷ ರೇಸ್‌ನಲ್ಲೂ ತನ್ನ ಹೆಸರು ತೇಲಿ ಬಿಟ್ಟಿದ್ದಾರೆ. ಇತ್ತೀಚೆಗಷ್ಟೇ ಸರಕಾರದ ನಾಲ್ಕು ವರ್ಷದ ಸಾಧನೆಯನ್ನು ಪ್ರಚಾರಪಡಿಸಲು ಅವರು ನಡೆಸಿದ ಬೈಕ್ ಜಾಥಾ ಜಿಲ್ಲೆಯಲ್ಲಿ ಗಮನ ಸೆಳೆದಿತ್ತು.


ಇನ್ನು ಕಳೆದ ಚುನಾವಣೆಯಲ್ಲಿ ಸೋತ ಕೆ.ಎಂ. ಲೋಕೇಶ್ ಕುಮಾರ್ ಕೂಡ ಮತ್ತೊಂದು ಚಾನ್ಸ್‌ನ ಕನವರಿಕೆಯಲ್ಲಿದ್ದಾರೆ. ಇತ್ತೀಚೆಗಷ್ಟೆ ಅವರನ್ನು ಅಧ್ಯಕ್ಷ ಸ್ಥಾನದಿಂದ ಅಮಾನತ್ತು ಮಾಡಲಾಗಿತ್ತು, ಆದರೆ ಅವರ ಬಂಡವಾಳ ಶಕ್ತಿಯ ಮುಂದೆ ತಲೆಬಾಗಿದ ಪಾರ್ಟಿ ಮತ್ತೆ ಸೇರಿಸಿಕೊಂಡಿದೆ. ಹಾಗೆಯೇ ಕಳೆದ ಸ್ಥಳೀಯ ಸಂಸ್ಥೆಯ ಎಂಎಲ್‌ಸಿ ಎಲೆಕ್ಷನ್‌ನಲ್ಲಿ ಸೋತ ವಕೀಲ ಚಂದ್ರಮೌಳಿ ಕೂಡ ಟಿಕೆಟ್‌ಗಾಗಿ ಪ್ರಯತ್ನ ನಡೆಸುತ್ತಿದ್ದಾರೆ. ಆದರೆ ಆತನಿಗೆ ಆತ ಯಡ್ಡಿ ಸಭೆಯಲ್ಲಿ ತಟ್ಟಿದ ಚಪ್ಪಾಳೆಯೇ ಮುಳುವಾಗುವ ಸಾಧ್ಯತೆ ಇದೆ. ಮೊನ್ನೆ ಯಡ್ಡಿ ಕೊಡಗಿನಲ್ಲಿ ಕರೆದಿದ್ದ ವೀರಶೈವರ ಸಭೆಯಲ್ಲಿ ಚಂದ್ರಮೌಳಿಯೂ ಭಾಗವಹಿಸಿದ್ದರು. ಆಗ ವೀರಾವೇಶದಲ್ಲಿ ಮಾತನಾಡುತ್ತ ಯಡ್ಡಿ ತಮ್ಮ ಸರಕಾರ ಅಧಿಕಾರಕ್ಕೆ ಬಂದರೆ ಟಿಪ್ಪು ಜಯಂತಿಯನ್ನು ರದ್ದು ಮಾಡುವುದಾಗಿ ಹೇಳುತ್ತಿದ್ದಂತೆಯೇ ಚಂದ್ರಮೌಳಿ ಚಪ್ಪಾಳೆ ಹಾಕಿ ಸಂಭ್ರಮಿಸಿದ್ದರು. ಆ ದೃಶ್ಯವನ್ನು ಮೊಬೈಲ್‌ನಲ್ಲಿ ಸೆರೆಹಿಡಿದ ಆತನ ವಿರೋಧಿಗಳು ಕೆಪಿಸಿಸಿಗೆ ರವಾನಿಸಿ ಟಿಕೆಟ್ ತಪ್ಪಿಸುವ ಯತ್ನಕ್ಕೆ ಮುಂದಾಗಿದ್ದಾರೆ.




ಮನು ಮುತ್ತಪ್ಪ




ತಮ್ಮಯ್ಯ




ಮಾ




ಅಪ್ಪಚ್ಚು ರಂಜನ್




ಕೆ.ಜಿ.




ಬಿ.ಬಿ. ಭಾರತೀಶ್



ವಿಶ್ವನಾಥ್



ನಾಣಯ್ಯ



ಬಿ.ಎ. ಜೀವಿಜಯ

ಇತ್ತ ವಿರಾಜಪೇಟೆ ಕ್ಷೇತ್ರದಲ್ಲಿ ಕೊಡವ ಜನಾಂಗದ ಅಭ್ಯರ್ಥಿಯನ್ನೇ ಕಣಕ್ಕಿಳಿಸಬೇಕೆನ್ನುವ ವಾದ ಜೋರಾಗಿದ್ದು, ವಿಧಾನ ಪರಿಷತ್ತಿನ ಸದಸ್ಯರಾಗಿದ್ದ ಅರುಣ್ ಮಾಚಯ್ಯ ಟಿಕೆಟ್‌ಗಾಗಿ ತುದಿಗಾಲಲ್ಲಿ ನಿಂತಿದ್ದಾರೆ. ಈ ಹಿಂದೆ ಸಂಸದರಾಗಿದ್ದ ವಿಶ್ವನಾಥ್‌ಗೆ ಅರುಣ್ ಮಾಚಯ್ಯನನ್ನು ಕಂಡರೆ ಆಗುತ್ತಿರಲಿಲ್ಲ. ಆತ ಶಾಸಕನಾಗಲು ತಾನು ಅವಕಾಶ ಮಾಡಿಕೊಡುವುದಿಲ್ಲ ಅಂತ ವಿಶ್ವನಾಥ್ ಬಹಿರಂಗವಾಗೇ ಸಾರಿದ್ದರು. ಹಾಗಾಗಿ ಕಳೆದ 5 ವರ್ಷಗಳ ಕಾಲ ನೇಪಥ್ಯಕ್ಕೆ ಸರಿದಿದ್ದ ಮಾಚಯ್ಯ ಈಗ ವಿಶ್ವನಾಥ್ ಕಾಂಗ್ರೆಸ್ ತ್ಯಜಿಸುತ್ತಾರೆ ಎಂಬ ಸುದ್ದಿ ಬರುತ್ತಿದ್ದಂತೆಯೇ ಟಿಕೆಟನ್ನು ಗಿಟ್ಟಿಸಿಕೊಳ್ಳಲು ಯತ್ನ ಆರಂಭಿಸಿದ್ದಾರೆ.

ಆದರೆ ಭವಿಷ್ಯದ ಕಾಂಗ್ರೆಸ್ ಸರ್ಕಾರದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವ ಕುರ್ಚಿಯ ಮೇಲೆ ಕರ್ಚೀಫು ಹಾಕಿಕೊಂಡಿರುವ ವೀಣಾ ಅಚ್ಚಯ್ಯ, ಸೋಲಬಹುದಾದ ತನ್ನದೇ ಅಭ್ಯರ್ಥಿಯೊಬ್ಬರನ್ನು ಮುಂದಿಟ್ಟಿದ್ದಾರೆ. ಬಿಜೆಪಿಯು ವಿರಾಜಪೇಟೆಯಿಂದ ಅರೆಭಾಷೆ ಗೌಡ ಜನಾಂಗಕ್ಕೆ ಸೇರಿದ ಕೆ.ಜಿ.ಬೋಪಯ್ಯನಿಗೆ ಮತ್ತೆ ಅವಕಾಶ ನೀಡಿದರೆ, ಅದೇ ಜನಾಂಗದ ಕೊಲ್ಯದ ಗಿರೀಶ್‌ನನ್ನು, ಇಲ್ಲದಿದ್ದರೆ ಬಿ.ಎಸ್. ತಮ್ಮಯ್ಯನನ್ನು ಇಲ್ಲವೇ ಜಿಲ್ಲಾ ಪಂಚಾಯತ್ ಸದಸ್ಯ ಶಿವು ಮಾದಪ್ಪನನ್ನು ಅಭ್ಯರ್ಥಿಯಾಗಿಸಬೇಕು ಎಂಬುದು ಆಕೆಯ ವಾದ. ಅಪ್ಪಿತಪ್ಪಿಯೂ ವೀಣಾ ಮೇಡಂ ಅರುಣ್ ಮಾಚಯ್ಯನನ್ನು ಬೆಂಬಲಿಸುತ್ತಿಲ್ಲ.


ಬಿಜೆಪಿಯ ಅಭ್ಯರ್ಥಿಯಾಗುವ ಎಲ್ಲಾ ಸಾಧ್ಯತೆಗಳಿರುವ ಕೆ.ಜಿ. ಬೋಪಯ್ಯನನ್ನು ಕೊಡವ ಜನಾಂಗ ಕಂಡಾಪಟ್ಟೆ ವಿರೋಧಿಸುತ್ತದೆ. ಯಾಕೆಂದರೆ ಆತ ಅರೆಭಾಷೆ ಗೌಡ. ಅದೇ ಕಾರಣಕ್ಕೆ ಕಳೆದ ಸಲ ಕೊಡವ ಜನಾಂಗಕ್ಕೆ ಸೇರಿದ ಬಿ.ಟಿ.ಪ್ರದೀಪ್‌ನ್ನು ಕಾಂಗ್ರೆಸ್ ಅಭ್ಯರ್ಥಿಯಾಗಿಸಿತ್ತು ವಿವಾದಗಳಿಂದ ಹೊರಗಿದ್ದ ವ್ಯಕ್ತಿಯಾಗಿದ್ದ ಪ್ರದೀಪ್‌ಗೆ ಕೊಡವ ಮತಗಳು ಸಾರಾಸಗಟಾಗಿ ಹರಿದುಹೋಗು ವುದರಿಂದ ಆತನೇ ಗೆಲ್ಲುತ್ತಾನೆ ಎಂದು ಅಂದಾಜಿಸಲಾಗಿತ್ತು, ಆದರೆ ಆದದ್ದು ಬೇರೆ. ಬೋಪಯ್ಯನೇ ಜಯಭೇರಿ ಬಾರಿಸಿದ್ದ. ಕೊಡವರು ಬೋಪಯ್ಯನನ್ನು ವಿರೋಧಿಸು ತ್ತಾರೆಯೇ ಹೊರತು ಬಿಜೆಪಿಯನ್ನಲ್ಲ ಎಂಬ ಸತ್ಯವನ್ನು ಕಾಂಗ್ರೆಸ್ ಮರೆತದ್ದೇ ಆ ಸೋಲಿಗೆ ಕಾರಣ. ಈಗಲೂ ಪರಿಸ್ಥಿತಿ ಭಿನ್ನವಾಗಿಲ್ಲ.

ಬಿಜೆಪಿ ಸಿಮ್ಮನ ಎಂಎಲ್ಲೆ ಕನವರಿಕೆ

ಕೊಡಗು ಬಿಜೆಪಿಯಲ್ಲಿ ಕಾಂಗ್ರೆಸ್‌ಗಿಂತಲೂ ಹೆಚ್ಚು ತಿಕ್ಕಾಟಗಳಿವೆ. ಆದರೆ ಅವ್ಯಾವುವೂ ಬಹಿರಂಗಗೊಳ್ಳುತ್ತಿಲ್ಲ. ಜಿಲ್ಲಾ ಬಿಜೆಪಿಯ ಅಧ್ಯಕ್ಷರಾಗಿದ್ದ ಮನು ಮುತ್ತಪ್ಪನನ್ನು ಹಠಾತ್ ಬದಲಿಸಿ ಆ ಜಾಗಕ್ಕೆ ಬಿ.ಬಿ. ಭಾರತೀಶ್‌ನನ್ನು ನೇಮಿಸಿದ ತರುವಾಯ ಸಂಘ ಪರಿವಾರ ಮೇಲುಗೈ ಸಾಧಿಸಿದೆ ಅಂತಲೇ ಹೇಳಲಾಗುತ್ತಿದೆ. ಭಾರತೀಶ್ ಅಧ್ಯಕ್ಷನಾದ ನಂತರ ಜಿಲ್ಲೆಯ ಇಬ್ಬರು ಶಾಸಕರಾದ ಕೆ.ಜಿ. ಬೋಪಯ್ಯ ಹಾಗೂ ಅಪ್ಪಚ್ಚು ರಂಜನ್ ಜಿಲ್ಲಾ ಬಿಜೆಪಿ ಯೊಂದಿಗೆ ಅಂತರ ಕಾಯ್ದುಕೊಳ್ಳುತ್ತಿದ್ದಾರೆ. ಕಾಟಾಚಾರಕ್ಕೆ ಬಿಜೆಪಿ ಸಭೆಗಳಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆಯೇ ಹೊರತು ಜಿಲ್ಲಾಧ್ಯಕ್ಷನಿಗೆ ಕಿಂಚಿತ್ತೂ ಸಹಕಾರ ನೀಡುತ್ತಿಲ್ಲ. ಇವರೀರ್ವರು ತನ್ನ ಕೈಯಳತೆಗೆ ಸಿಗೋದಿಲ್ಲ ಎಂಬ ಕಾರಣಕ್ಕೆ ಸಂಘ ಪರಿವಾರ ಇವರನ್ನು ವಿರೋಧಿಸುತ್ತಿದೆ.

ಇದೇ ಕಾರಣಕ್ಕೆ ಭಾರತೀಶ್‌ಗೆ ಪಕ್ಷವನ್ನು ಸುಲಲಿತವಾಗಿ ನಡೆಸಿಕೊಂಡು ಹೋಗಲು ಸಾಧ್ಯವಾಗುತ್ತಿಲ್ಲ. ಕಳೆದ ಎರಡು ಸಭೆಗಳಲ್ಲಿ ಶಾಸಕರು ವೇದಿಕೆಯಲ್ಲಿ ಕುಳಿತುಕೊಳ್ಳಲು ಸಿದ್ಧರಿರಲಿಲ್ಲ. ವಿರಾಜಪೇಟೆ ಹಾಗೂ ಮಡಿಕೇರಿ ವಿಧಾನಸಭಾ ಕ್ಷೇತ್ರಕ್ಕೆ ಇವರಿಬ್ಬರಿಗೆ ಪ್ರಬಲವಾಗಿ ಪೈಪೋಟಿ ನೀಡುತ್ತಿರುವ ಜಿಲ್ಲಾ ಪಂಚಾಯತಿಯ ಮಾಜಿ ಅಧ್ಯಕ್ಷ ಶಾಂತೆಯಂಡ ರವಿಕುಶಾಲಪ್ಪ ವೇದಿಕೆಯಲ್ಲಿ ಇದ್ದರೆ, ತಾವು ವೇದಿಕೆಗೆ ಬರುವುದಿಲ್ಲ ಎಂದು ಬಹಿರಂಗವಾಗಿ ಹೇಳಿಕೊಂಡು ಸಭೆಯಲ್ಲಿ ಗೊಂದಲವನ್ನು ಉಂಟುಮಾಡಿದ್ದರು. ಹಾಗಾಗಿ ಜಿಲ್ಲೆಯಲ್ಲಿ ಬಿಜೆಪಿ ಶಾಸಕರು ಮತ್ತು ಸಂಘ ಪರಿವಾರದ ನಡುವೆಯೇ ಮುಸುಕಿನ ಗುದ್ದಾಟ ನಡೆಯುತ್ತಿದೆ. ಭಾರತೀಶ್ ಅಧ್ಯಕ್ಷನಾಗುತ್ತಿದ್ದಂತೆಯೇ ಅಲ್ಲಿಯವರೆಗೆ ಶಾಸಕದ್ವಯರ ಮೇಲೆ ಮುನಿಸಿಕೊಂಡು ಮನೆ ಸೇರಿದ್ದ ನಾಯಕರೆಲ್ಲ ಪಕ್ಷದ ಕಾರ್ಯಕ್ರಮಗಳಲ್ಲಿ ಕಾಣಿಸಿಕೊಳ್ಳಲು ಶುರು ಮಾಡಿದ್ದಾರೆ.

ಇತ್ತ ಸಂಘ ಪರಿವಾರದ ಕಟ್ಟಾಳು ಸಂಸದ ಪ್ರತಾಪ



ಪ್ರತಾಪ್ ಸಿಂಹ

ಸಿಂಹನಿಗೂ ಈ ಇಬ್ಬರು ಶಾಸಕರಿಗೂ ಇದೇ ವಿಚಾರವಾಗಿ ಮುನಿಸು ಶುರುವಾಗಿದೆ. ಹಾಗಾಗಿ ಇವರಿಗೆ ಮತ್ತೆ ಟಿಕೆಟ್ ಸಿಗುವುದು ಡೌಟು ಎಂಬ ಮಾತುಗಳಿವೆ. ಆದರೆ ಈ ಹಿಂದೆ ಸ್ಪೀಕರ್ ಆಗಿದ್ದ ಕೆ.ಜಿ. ಬೋಪಯ್ಯ ಯಡಿಯೂರಪ್ಪ ಸರಕಾರವನ್ನು ಉಳಿಸಿದ ಕಾರಣಕ್ಕಾಗಿ ರಾಜ್ಯಾಧ್ಯಕ್ಷನ ಸ್ಥಾನದಲ್ಲಿರುವ ಯಡ್ಡಿ ಬೋಪಯ್ಯನ ಕೈಬಿಡಲಿಕ್ಕಿಲ್ಲ. ಆದರೆ ಅಪ್ಪಚ್ಚು ರಂಜನ್ ವಿಚಾರದಲ್ಲಿ ಈ ಗ್ಯಾರಂಟಿಯಿಲ್ಲ. ಅತ್ತ ಸಂಘ ಪರಿವಾರದ ದುಶ್ಮನಿಯನ್ನೂ ಕಟ್ಟಿಕೊಂಡಿರುವ ಅಪ್ಪಚ್ಚು ಇತ್ತ ಶೋಭಾ ಕರಂದ್ಲಾಜೆ ವಿರುದ್ಧವೂ ಸಿಡಿದೆದ್ದಿದ್ದರಿಂದ ಯಡ್ಡಿ ಕೈಯಲ್ಲಿ ಅಪ್ಪಚ್ಚಿಯಾಗೋದು ಗ್ಯಾರಂಟಿ. ಹಾಗಾಗಿ ಮಡಿಕೇರಿಗೆ ಬಿಜೆಪಿ ಹೊಸ ಮುಖ ಪರಿಚಯಿಸುವ ಸಾಧ್ಯತೆ ಇದೆ.

ಬಿಜೆಪಿಯಲ್ಲಿ ಇರುವಂತಹ ಕಟ್ಟರ್ ಮೂಲಭೂತವಾದಿಗಳು ವಿರಾಜಪೇಟೆ ಕ್ಷೇತ್ರವನ್ನು ಕೊಡವ ಜನಾಂಗದವರಿಗೇ ನೀಡಬೇಕು ಎಂದು ಪಟ್ಟು ಹಿಡಿದರೆ ಮಾತ್ರ ಬೋಪಯ್ಯನವರಿಗೆ ಅವಕಾಶಗಳು ಕಡಿಮೆಯಾಗುತ್ತದೆ. ಇಲ್ಲದಿದ್ದರೆ ಬೋಪಯ್ಯನವರೇ ಅಭ್ಯರ್ಥಿಯಾಗುವುದರಲ್ಲಿ ಸಂಶಯವಿಲ್ಲ. ಮಡಿಕೇರಿ ಕ್ಷೇತ್ರಕ್ಕೆ ಮಾತ್ರ ಬದಲಾವಣೆಗಳನ್ನು ಅಲ್ಲಗಳೆಯುವಂತೆ ಇಲ್ಲ. ಈ ಮಧ್ಯೆ ಅಪ್ಪಚ್ಚು ರಂಜನ್ ವಿರಾಜಪೇಟೆಯಿಂದಲೂ, ಬೋಪಯ್ಯ ಮಡಿಕೇರಿ ಯಿಂದಲೂ ಸ್ಪರ್ಧಿಸುವ ಮಾತುಗಳು ಕೇಳಿಬಂದಿದೆ. ಆದರೆ ಕಾಂಗ್ರೆಸಿನ ಅಭ್ಯರ್ಥಿಗಳು ಯಾರು ಮತ್ತು ಮಡಿಕೇರಿಯಲ್ಲಿ ಜೆಡಿಎಸ್‌ನ ಅಭ್ಯರ್ಥಿ ಯಾರು ಎನ್ನುವುದರ ಮೇಲೆ ಇದು ಅಂತಿಮವಾಗಲಿದೆ. ಈ ಮಧ್ಯೆ ಬಿಜೆಪಿಯಲ್ಲಿ ಮತ್ತೊಂದು ಮಾತು ಕೇಳಿಬಂದಿದೆ. ರಾಜ್ಯ ರಾಜಕಾಣದತ್ತ ಆಕರ್ಷಿತನಾಗಿರುವ ಸಂಸದ ಪೇಪರ್ ಸಿಮ್ಮ ವಿರಾಜಪೇಟೆ ಅಥವಾ ಪಿರಿಯಾಪಟ್ಟಣ ಕ್ಷೇತ್ರದಿಂದ ಸ್ಪರ್ಧಿಸುವ ಇಂಗಿತವನ್ನು ವ್ಯಕ್ತಪಡಿಸಿದ್ದಾನಂತೆ. ಉತ್ತರಪ್ರದೇಶದಲ್ಲಿ ಸಂಘ ಪರಿವಾರದ ಆದಿತ್ಯನಾಥ್‌ನನ್ನು ಮುಖ್ಯಮಂತ್ರಿಯಾಗಿಸಿದ ರೀತಿಯಲ್ಲಿಯೇ, ಕರ್ನಾಟಕ ದಲ್ಲಿಯೂ ಪ್ರಯೋಗಗಳು ನಡೆದರೆ ಬೆಂಕಿಯುಗುಳುವ ಪ್ರತಾಪ ಸಿಂಹನನ್ನು ಬಿಜೆಪಿ ಮುಖ್ಯಮಂತ್ರಿಯಾಗಿಸಬಹುದು ಎಂದು ಅದ್ಯಾರೋ ಫೇಸ್‌ಬುಕ್‌ನಲ್ಲಿ ಹಾಕಿದ ಪೋಸ್ಟ್ ನಂಬಿ ಪಾಪ ಸಿಮ್ಮ ಇಂಥ ಕನವರಿಕೆಗೆ ಬಿದ್ದಿದ್ದಾನಂತೆ.

ಜೆಡಿಎಸ್‌ನ ಮುಸ್ಲಿಂ ತಂತ್ರಗಾರಿಕೆ

ಅಪ್ಪ-ಮಕ್ಕಳ ಪಕ್ಷ ಎಂಬ ಹೊಂಡದಲ್ಲಿ ಒಂದು ಕಾಲನ್ನೂ, ಒಕ್ಕಲಿಗರ ಜಾತಿ ಪಾರ್ಟಿ ಎಂಬ ಇನ್ನೊಂದು ಹೊಂಡದಲ್ಲಿ ಮತ್ತೊಂದು ಕಾಲನ್ನೂ ಸಿಕ್ಕಿಸಿಕೊಂಡು ಕೂತಿರುವ ಜೆಡಿಎಸ್ ಕೂಡಾ ಕೊಡಗಿನಲ್ಲಿ ತನ್ನ ರಾಜಕೀಯ ತಂತ್ರಗಾರಿಕೆಯನ್ನು ಹರಿಬಿಟ್ಟಿದೆ. ಕೊಡಗಿನ ಅರೆಗೌಡರ ಜನಾಂಗವನ್ನೇ ಆಧರಿಸಿ ಚುನಾವಣೆಗೆ ಸಜ್ಜಾಗುತ್ತಿರುವ ಆ ಪಕ್ಷಕ್ಕೆ ಕೊಡವ ಜನಾಂಗದ ಎಂ.ಸಿ.ನಾಣಯ್ಯ ಬೇಕಾಗದಿರುವುದು ದುರಂತ. ಬದಲಿಗೆ ಗೌಡ ಜನಾಂಗದ ಜೀವಿಜಯಗೆ ಮಣೆಹಾಕಿ ರಾಜ್ಯಾಧ್ಯಕ್ಷ ಕುಮಾರಸ್ವಾಮಿ ಕೊಡಗು ಜಿಲ್ಲೆಯ ಅಖಾಡಕ್ಕೆ ಧುಮುಕಿದ್ದಾರೆ.

ಈ ನಡುವೆ ಕೊಡವ ಮತ್ತು ಅರೆಗೌಡ ಜನಂಗದ ತಿಕ್ಕಾಟದ ನಡುವೆ ಮುಸ್ಲಿಂ ಅಭ್ಯರ್ಥಿಯನ್ನು ಕಣಕ್ಕಿಳಿಸಿ ಲಾಭ ಮಾಡಿಕೊಳ್ಳುವ ಸಾಹಸಕ್ಕೂ ಜೆಡಿಎಸ್ ಮುಂದಾಗಿದೆ. ಅದರ ಹಿಂದೆಯೂ ಹಲವಾರು ಜಾತಿ ಲೆಕ್ಕಾಚಾರಗಳಿವೆ. ಕೆಲವು ಸಮಯದ ಹಿಂದೆ ಕುಮಾರಸ್ವಾಮಿ ಮಡಿಕೇರಿ ಸಮೀಪದ ನಾಪೋಕ್ಲುವಿನ ರೆಸಾರ್ಟ್‌ವೊಂದರಲ್ಲಿ ಅಲ್ಪಸಂಖ್ಯಾತರ ಸಭೆಯನ್ನು ನಡೆಸಿದ್ದರು. ಇದಕ್ಕೂ ಮುನ್ನ ಅವರು ನಾಪೋಕ್ಲು ಭಾಗದಲ್ಲಿ ಕಾಂಗ್ರೆಸಿನಲ್ಲಿ ಗುರುತಿಸಿ ಕೊಂಡಿರುವ ಹಲವು ಅಲ್ಪಸಂಖ್ಯಾತ ನಾಯಕರುಗಳ ಮನೆಗೆ ತೆರಳಿ, ಅವರೊಂದಿಗೆ ಚರ್ಚೆಯನ್ನು ನಡೆಸಿದ್ದರು. ವಿರಾಜಪೇಟೆ ಕ್ಷೇತ್ರಕ್ಕೆ ಮುಸ್ಲಿಂ ಅಭ್ಯರ್ಥಿಯೊಬ್ಬರನ್ನು ಜಾತ್ಯತೀತ ಜನತಾದಳದಿಂದ ಕಣಕ್ಕೆ ಇಳಿಸುವ ವಿಚಾರವನ್ನು ತೇಲಿಬಿಟ್ಟಿದ್ದರು.

ಮಂಗಳೂರಿನ ಉದ್ಯಮಿ ಖರೂಶ್‌ರನ್ನು ವಿರಾಜಪೇಟೆಯ ಅಭ್ಯರ್ಥಿಯಾಗುವುದಾಗಿ ಆ ಸಭೆಯಲ್ಲಿ ಕುಮಾರ ಸ್ವಾಮಿ ಆಶ್ವಾಸನೆ ನೀಡಿದ್ದರು. ಮುಸ್ಲಿ ಸಮುದಾಯ ಟಿಕೆಟ್ ಸಿಗುವ ಖುಷಿಯಲ್ಲಿದ್ದರೆ ಇದರ ಹಿಂದೆ ಕುಮಾರ ಸ್ವಾಮಿ

▶▶ 15


ರಮಾನಾಥ ರೈ


ಸಂಘಿ ಸೈತಾನ ಭಟ್ಟ


ಕಲ್ಲಡ್ಕ ಪ್ರಭಾಕರ

ಕರಾವಳಿಯ ಬಂಟ್ವಾಳದ ಕಲ್ಲಡ್ಕ ನಿಗಿನಿಗಿಸುವ ಕೆಂಡದಂತಾಗಿದೆ! ಮತಾಂಧ ಆಪನಂಬಿಕೆ, ಅನುಮಾನ, ಅಡ್ನಾಡಿ ವದಂತಿಯ ಸಣ್ಣದೊಂದು ಗಾಳಿ ಬೀಸಿದರೂ ಸಾಕು, ಬಂಟ್ವಾಳಕ್ಕೆ ಬಂಟ್ವಾಳವೇ ದಿಗ್ಗನೆ ಹೊತ್ತಿ ಉರಿಯುವ ಗಂಡಾಂತರಕಾರಿ ಪರಿಸ್ಥಿತಿ ನಿರ್ಮಾಣವಾಗಿದೆ. ಮುಸ್ಲಿಮರು ಹೆಚ್ಚಿರುವ ಕಲ್ಲಡ್ಕವನ್ನು ಹಲವು ದಶಕಗಳಿಂದ ಕೋಮು ಸೂಕ್ಷ್ಮವಲಯ ಮಾಡಿರುವ ಪಾತಕದ ಪರಮ ಪುಣ್ಯವೇನಿದ್ದರೂ ಸಂಘ ಪರಿವಾರಕ್ಕೇ ಸಲ್ಲಬೇಕು. ಕಲ್ಲಡ್ಕ ಸದಾ ಕೋಮು ಉದ್ವಿಗ್ನ ಸ್ಥಿತಿ-ಗತಿಯಲ್ಲಿದ್ದರೆ ಇಡೀ ದಕ್ಷಿಣ ಕನ್ನಡದಲ್ಲಿ ಬಿಜೆಪಿಗೆ ರಾಜಕೀಯ ಮೈಲೇಜು ಪಡೆಯಲು ಅನುಕೂಲ ಎಂಬುದು ಆರ್‌ಎಸ್‌ಎಸ್ ಡಾನ್ ಕಲ್ಲಡ್ಕ ಭಟ್ಟನ ಲಾಗಾಯ್ತಿನ ಲೆಕ್ಕಾಚಾರ.

ಈ ಕಲ್ಲಡ್ಕ ಕರಾವಳಿ ಸಂಘಿ ಸಾಮ್ರಾಜ್ಯದ ಸರ್ವಶಕ್ತ ದೊರೆ ಪ್ರಭಾಕರ ಭಟ್ಟನ ಹೆಡ್‌ಕ್ವಾಟ್ರರ್ಸ್; ಮಂತ್ರಿ ರಮಾನಾಥ ರೈ ಕಲ್ಲಡ್ಕ ಒಳಗೊಂಡಿರುವ ಬಂಟ್ವಾಳದ ಶಾಸಕ ಸಾಹೇಬ. ಕಲ್ಲಡ್ಕವನ್ನು ತನ್ನ ರಾಜಕೀಯ ತೆವಲಿನ ಆಡುಂಬೋಲ ಮಾಡಿಕೊಂಡಿರುವ ಭಟ್ಟನ ಮತಾಂಧ ಮಸಲತ್ತೀಗ ನಿರ್ಣಾಯಕ ಹಂತಕ್ಕೆ ಬಂದು ನಿಂತಿದೆ. ಹೀಗಾಗಿಯೇ ಕಲ್ಲಡ್ಕದಲ್ಲಿ ಕಳೆದೆರಡು ವಾರದಿಂದ ಮೇಲಿಂದ ಮೇಲೆ ಹಿಂದೂ-ಮುಸ್ಲಿಮ್ ತರುಣರ ನಡುವೆ ಗುರಾಯಿಸುವಿಕೆ, ಗುದುಮುರಿಗೆ, ಕಲ್ಲು ತೂರಾಟ, ಮಸೀದಿ ಮೇಲೆ ದಾಳಿ, ಹಿಂದೂತ್ವದ ಹರಾಮಿತನ... ಅಂತಿಮವಾಗಿ ಚೂರಿ ಇರಿತ ಬೆನ್ನುಬೆನ್ನಿಗೆ ನಡೆಯಲಾರಂಭಿಸಿದೆ. ಅಸೆಂಬ್ಲಿ ಎಲೆಕ್ಷನ್ ಹತ್ತಿರತ್ತಿರ ಬರುತ್ತಿರುವುದರಿಂದ ಇಂಥ ಘಾತುಕ ತಾಲೀಮು ಭಟ್ಟನಿಗೆ ಅತ್ಯಗತ್ಯವಾಗಿದೆ. ಇದನ್ನೆಲ್ಲ ಮಂತ್ರಿಯಾಗಿ ನಿಯಂತ್ರಿಸಿ ಜನರಿಗೆ ನೆಮ್ಮದಿ ನೀಡಬೇಕಿದ್ದ ರಮಾನಾಥ ರೈಜೀ ಭಟ್ಟನ ವಿರುದ್ಧ ಅದ್ಯಾಕೋ ಗಟ್ಟಿತನ ತೋರದಿರುವುದು ಬಂಟ್ವಾಳದ ಅಷ್ಟೂ ಅನಿಷ್ಟಕ್ಕೆ ಮೂಲಕಾರಣ!!

ಜಿಲ್ಲೆಯ ಯಾವ ಮೂಲೆಯಲ್ಲಿ ನಿಂತು ಎತ್ತಿಂದೆತ್ತ ತಾಳೆ ಹಾಕಿ ನೋಡಿದರೂ ಪಕ್ಕಾ ಆಗುವುದು, ರಮಾನಾಥ ರೈ ಹೆಸರಿಗಷ್ಟೇ ಮಂತ್ರಿ ಎಂಬುದು; ಆಡಳಿತದ 'ಧರ್ಮ ದಂಡ' ಚಲಾಯಿಸುವುದು ಕರಾರುವಾಕ್ ಕಮ್ಯುನಲ್ ಜನಿವಾರಿ ಕಲ್ಲಡ್ಕ ಪ್ರಭಾಕರ್ ಭಟ್ಟ. ಬಿಜೆಪಿಯ ಪರ್ವದಲ್ಲಿ ಕೇಸರೀಕರಣ ದೀಕ್ಷೆಗೆ ಒಳಪಡಿಸಲಾಗಿದ್ದ ಪೊಲೀಸ್ ಪಡೆ ಇವತ್ತಿಗೂ ಕಲ್ಲಡ್ಕ ಭಟ್ಟನ ಪರಿವಾರದ ಹಿಡನ್ ಅಜೆಂಡಾಕ್ಕೆ ಪೂರಕವಾಗೇ ಡ್ಯೂಟಿ ಮಾಡುತ್ತಿದೆ. ಕಲ್ಲಡ್ಕದಲ್ಲಿ ನಟ್ಟ ನಡುರಾತ್ರಿ ಪೊಲೀಸ್ ಪುಂಡರು ಮುಸ್ಲಿಮರ ಮನೆ-ಮನೆಗೆ ನುಗ್ಗಿ ಅಸಹಾಯಕ ಹೆಂಗುಸು-ಮಕ್ಕಳು-ಮುದುಕರ ಮೇಲೆ ಹಿಂದೂತ್ವದ ಪ್ರವರ ತೋರಿಸುತ್ತಿರುವುದು ಬಂಟ್ವಾಳದ ಸರ್ಕಾರಿ ಸಂಸ್ಥೆಗಳ ಮೇಲೆ ಮಂತ್ರಿ ರೈಗಿಂತ ಕಲ್ಲಡ್ಕ ಭಟ್ಟನಿಗೇ ಹಿಡಿತ ಹೆಚ್ಚೆಂಬುದನ್ನು ಸಾಬೀತುಪಡಿಸುವಂತಿದೆ. ಭಟ್ಟ ಹಾಡುಹಗಲೇ ನಡುಬೀದಿಯಲ್ಲಿ ನಿಂತು



ಕೋಮು ದಾದಾಗಿರಿಗೆ ಹಿಂದೂ ಹುಂಬರ ಪ್ರಚೋದಿಸಿದರೂ, ಬಹಿರಂಗವಾಗೇ ಐಪಿಎಸ್ ಅಧಿಕಾರಿಗಳ ಜತೆ ಜಗಳಕ್ಕೆ ಇಳಿದರೂ ಕಾನೂನಿನ ಭಯವಿಲ್ಲದೆ ಓಡಾಡಿಕೊಂಡಿದ್ದಾನೆ.

ತಮಾಷೆಯೆಂದರೆ, ದಕ್ಷಿಣ ಕನ್ನಡದ ಎಸ್‌ಪಿ ಭೂಷಣ ಬೊರಸೆ ಎಂಬ ಪೊಲೀಸಪ್ಪ ಕಲ್ಲಡ್ಕ ಭಟ್ಟನ ಕಂಡರೆ ಹೆದರುತ್ತಾನೆ. ಸಂಘ ಪರಿವಾರದ ಗಲಭೆಕೋರರ ಹೆಡೆಮುರಿ ಕಟ್ಟಿ ಲಾಕಪ್ಪಿಗೆ ಹಾಕಲು ಆತನಿಗೆ ಅದೆಂಥದೋ ಭಯ. ರೈಗಳು ಕಳೆದ ವಿಧಾನಸಭಾ ಚುನಾವಣೆ ಹೊತ್ತಲ್ಲಿ "ನಾನು ಸ್ಪರ್ಧಿಸುತ್ತಿರುವುದು ಆರ್‌ಎಸ್‌ಎಸ್ ಲೀಡರ್ ಕಲ್ಲಡ್ಕ ಪ್ರಭಾಕರ ಭಟ್ಟನ ವಿರುದ್ಧ.... ನಾನು ಗೆದ್ದು ಬಂದರೆ ಭಟ್ಟನನ್ನು ಕೃಷ್ಣ ಜನ್ಮಸ್ಥಾನಕ್ಕೆ ಕಳಿಸದೇ ಬಿಡೋದಿಲ್ಲ..." ಎಂದು ಹಾರಾಡಿದ್ದರು. ರೈ ಶಾಸಕರಷ್ಟೇ ಅಲ್ಲ, ಜಿಲ್ಲಾ ಉಸ್ತುವಾರಿ ಮಂತ್ರಿಯೂ ಆದರು. ಆದರೆ ಬಂಟ್ವಾಳಕ್ಕೆ ಕೋಮು ವಿಷ ಉಣಿಸುವ, ಮತಾಂಧ ಬೀದಿ ನಾಟಕಗಳ ಮಾಡುತ್ತ ಸಮಾಜದ ಸ್ವಾಸ್ಥ್ಯ ಕೆಡಿಸುವ ಕಲ್ಲಡ್ಕ ಭಟ್ಟನ ಮುಟ್ಟಲು 'ಶಕ್ತಿವಾನ್' ಮಂತ್ರಿ ರೈಜಿಯಿಂದಾಗಲೇ ಇಲ್ಲ, ಕಲ್ಲಡ್ಕ, ಬಂಟ್ವಾಳ ಸೇರಿದಂತೆ ದಕ್ಷಿಣ ಕನ್ನಡದ ಇತರೆಡೆಯ ನಿಷ್ಪಾಪಿ ಸಾಬಿಗಳ ಸಂಕಟ ಕಡಿಮೆ ಆಗಲಿಲ್ಲ. ಕಲ್ಲಡ್ಕವಂತೂ ಭಟ್ಟನ ಪಾತಕಿ ಪಡೆಯಿಂದ ರೌರವ ನರಕದಂತಾಗಿ ಹೋಯಿತು!

ಒಂದೆಡೆ ಭಟ್ಟನ ಮನೆ ಹಾಳು ಭಾಷಣ ಪಾಷಾಣ ಎರಚುವಿಕೆ; ಮತ್ತೊಂದೆಡೆ ಪೊಲೀಸರ ಹಿಂದೂತ್ವದ ಅಟ್ಟಹಾಸ. ಈ ತೊಂದರೆಯಲ್ಲಿ ಸಿಕ್ಕಿಬಿದ್ದಿರುವ ಬಂಟ್ವಾಳದಲ್ಲಿ ಸಾಬಿಗಳಷ್ಟೇ ಅಲ್ಲ, ಪ್ರಜ್ಞಾವಂತ-ಜಾತ್ಯತೀತ ಮನಃಸ್ಥಿತಿಯ ಮಂದಿಯೂ ಬದುಕಲಾಗದಂಥ ಪರಿಸ್ಥಿತಿ ಮಡುಗಟ್ಟಿದೆ. ಕಳೆದ ಹದಿನೈದು-ಇಪ್ಪತ್ತು ದಿನಗಳಿಂದ ಕ್ಷುಲ್ಲಕ ನೆಪಗಳಿಂದ ಹಿಂದೂ-ಮುಸ್ಲಿಮ್ ಯುವಕರ ಮಧ್ಯೆ ಕಾದಾಟ ನಡೆಯುತ್ತಿದೆ. ಮುಸ್ಲಿಮನೊಬ್ಬ ದೊಡ್ಡ ಕಣ್ಣು ಬಿಟ್ಟು ಹಿಂದೂವನ್ನು ಕಿಚಾಯಿಸಿದನೆಂದೋ, ಹಿಂದೂ ಸಾಬಿ ಕಂಡಾಗ ಗುರ್ರಾಯಿಸದನೆಂದೋ, ಮತ್ಯಾವನೋ ಸಾರ್ವಜನಿಕವಾಗಿ ಸಿಗರೇಟು ಸೇದಿದನೆಂದೋ ಕಲ್ಲು ತೂರಾಟ, ಚೂರಿ ಇರಿತ ನಡೆಯುವುದು ಕಲ್ಲಡ್ಕದ ನಿತ್ಯ ಕರ್ಮದಂತಾಗಿ ಹೋಗಿದೆ.

ಕಲ್ಲಡ್ಕದಲ್ಲಿ ಕೇವಲ ಹದಿನೆಂಟು ದಿನದ ಅಂತರದಲ್ಲಿ ಎರಡು ಚೂರಿ ಇರಿತದ ಭೀಭತ್ಸ, ಭಂಡಾಟ ನಡೆದುಹೋಗಿದೆ. ಕಳೆದ ಮೇ 26ರ ಮಧ್ಯಾಹ್ನ ಜುಮ್ಮಾ ಮುಗಿಸಿ ಬರುತ್ತಿದ್ದ ಸಾಬರ ಹುಡುಗರ ಮೇಲೆ ಕಲ್ಲಡ್ಕ ಭಟ್ಟನ ಅಚ್ಚುಮೆಚ್ಚಿನ ಶಿಷ್ಯರೇ ಮುಗಿಬಿದ್ದು ಚೂರಿ ಝಳಪಿಸಿದ್ದಾರೆ. ಇಬ್ಬರು ಮುಸ್ಲಿಮ್ ತರುಣರಿಗೆ ಚೂರಿ ಇರಿತದ ಗಾಯವಾಗಿದೆ. ಹರೀಶ್ ಪೂಜಾರಿ ಎಂಬ ಪಾಪದ ಹಿಂದೂ ಹುಡುಗನನ್ನೇ ಆಹುತಿ ಪಡೆದ ಭುವಿತ್ ಮತ್ತು ಮಿಥುನ್ ಕೋಳಿ ಚೂರಿ ಹಾಕಿದ್ದಾರೆಂಬುದು ಸಾಬರ ಕಡೆಯವರ ವಾದವಾದರೆ ಹಿಂದೂತ್ವದ ಗ್ಯಾಂಗ್ ಹೇಳೋದೆ ಬೇರೆ. ಇದು ಸಾಬ-ಸಾಬರ ವೈಯಕ್ತಿಕ ಜಗಳ; ಇದರಲ್ಲಿ ಮಿಥುನ್ ಇಲ್ಲವೆಂದು ಖುದ್ದು ಕಲ್ಲಡ್ಕ ಭಟ್ಟನೇ ತಾರಕ ಸ್ವರದಲ್ಲಿ ಹಾರಾಡುತ್ತಾನೆ. ಮಿಥುನ್‌ನ ಬಂಧಿಸಲು ಪೊಲೀಸರು ಮುಂದಾದಾಗ ತಡೆಗಟ್ಟಿದ್ದೇ ಈ ಭಟ್ಟ.

ಅಲ್ಲಿಗೆ ಆರ್‌ಎಸ್‌ಎಸ್ ದೊರೆಗೆ ಕೊಲೆಗಡುಕರ ಜ... ಅನ್ಯೋನ್ಯ ಸಂಬಂಧ ತಂತಾನೆ ಸಾಬೀತಾಗಿದೆ... ಮಿಥುನ್‌ನ ಬಚಾಯಿಸಲು ಭಟ್ಟ ಪೊಲೀಸ... ಸಾರ್ವಜನಿಕವಾಗೇ ಜಗಳಕ್ಕೆ ನಿಂತಿದ್ದು ಸಂಘಿ ಸ... ತಕ್ಕಂತೆಯೇ ಇತ್ತು.

ಮರುದಿನ ಸಾಬರು ಎಸ್‌ಡಿಪಿಐ ಜ... ಸಂಯಮದ ಪ್ರತಿಭಟನೆಗೆ ಇಳಿದಿದ್ದರು. ಕಲ್ಲಡ್ಕ ... ಕರೆ ಕೊಟ್ಟಿದ್ದರು. ಎಸ್‌ಪಿ ಭೂಷಣ ಬೊರ... ಇದೊಂದು ಸಾಂಕೇತಿಕ ಪ್ರತಿಭಟನೆ ಎಂಬ ... ಸುಮ್ಮನಿದ್ದರು. ಆದರೆ ಅದೆಲ್ಲಿದ್ದನೋ ಮತ... ಭಟ್ಟ! ಬಂದವನೆ ಎಸ್‌ಪಿ ಜತೆ ಜಗಳಕ್ಕೆ ನಿಂತು... ಬಂದ್ ಮಾಡಬಾರದೆಂದು ಬೊಬ್ಬಿರಿದ. ಎಸ್‌ಪಿ ... ಚೆಡ್ಡಿ ಭಟ್ಟನ ನಡುವೆ ಮಾತಿನ ಸಂಘ... ನಡೆದುಹೋಯ್ತು. ಇಷ್ಟಾದರೂ ಪೊಲೀಸರು ಕ... ಕೋಮು ಕ್ರೌರ್ಯದ ಕಾರ್ಯಾಚರಣೆ ವ್ಯವ... ನಡೆಸುವ ಮಿಥುನ್ ಮತ್ತು ಭುವಿತ್‌ರನ್ನು ಬ... ಗೋಜಿಗೆ ಮಾತ್ರ ಹೋಗಲೇ ಇಲ್ಲ. ... ಪೂಜಾರಿಯನ್ನು ಕೊಂದ ಪಾತಕ ಇತಿಹಾಸದ ಈ ... ಆರಂಭದಲ್ಲೇ ಒದ್ದು ಒಳಗೆ ಹಾಕಿದ್ದರೆ ಕಲ್ಲಡ್ಕ ಕ... ದಾವಾ ನೆಲದಂತಾಗುತ್ತಲೇ ಇರಲಿಲ್ಲ; ಭಟ್ಟನಿಗೆ... ಪೇಟೆಯಲ್ಲಿ ಕೇಸರಿ ತಂಡ ಕಟ್ಟಿಕೊಂಡು ಭಯೋತ್ಪಾ... ತಿರುಗಾಡುವ ಧೈರ್ಯವೂ ಬರುತ್ತಿರಲಿಲ್ಲ!

ಚೂರಿ ಇರಿತ, ದೊಂಬಿ, ಜಗಳದಿಂದ ಸಾ... ಕಂಗೆಟ್ಟಿದ್ದರು. ಯಾವ ಘಳಿಗೆಯಲ್ಲಿ ಏನಾಗುವುದೋ... ಆತಂಕ ಮುಸ್ಲಿಮರನ್ನು ಆವರಿಸಿತ್ತು. ಜಿಲ್ಲಾ ಮಂತ್ರಿ... ಲೋಕಲ್ ಎಮ್ಮೆಲ್ಲೆ ರಮಾನಾಥ್ ರೈ ಉದಾಸೀ... ಇದ್ದದ್ದು ಸಾಬರ ಭಯವನ್ನು ಇನ್ನಷ್ಟು ಹೆಚ್ಚಿಸಿತ್ತು. ಪ್ರ... ಯಾವ ಅಡೆ-ತಡೆಯೂ ಹಿಂದೂತ್ವವಾದಿಗಳಿಗೆ ... ಇಲ್ಲ. ಇದರಿಂದ ಪ್ರಭಾವಿತನಾದ ವಿಟ್ಲ ಭಾಗದ ... ಜಾಗರಣಾ ವೇದಿಕೆಯ ಅಧ್ಯಕ್ಷ ರತ್ನಾಕರ ಶೆಟ್ಟಿ ... ಪುಂಡ ಏನಾದರೂ ಒಂದು ಗಲಭೆ ಎಬ್ಬಿಸಿ ... ಆಗುವ ತಯಾರಿಗೆ ಇಳಿದಿದ್ದ. ಕಲ್ಲಡ್ಕ ಭಟ್ಟನ ... ಗಳಿಸಲು ಆತನಿಗೆ ತನ್ನ ನಾಯಕತ್ವದಲ್ಲಿ ಕಮ್ಯುನಲ್... ಮಾಡುವ ದರ್ದು ಎದುರಾಗಿತ್ತು. ಹಿಂಜಾವೇ ವೇ... ವಿಟ್ಲ ಕೋಳಿಯಲ್ಲಿನ ವೈಮನಸ್ಸಿನಿಂದ ಕಲ್ಲಡ್ಕ ... ಕೆಂಗಣ್ಣಿಗೆ ತುತ್ತಾಗಿದ್ದ ರತ್ನಾಕರ ಶೆಟ್ಟಿ ಕಳೆದ ... ಎಲೆಕ್ಷನ್‌ನಲ್ಲಿ ಹೆಂಡತಿಗೆ ಬಿಜೆಪಿ ಟಿಕೆಟ್ ಕೇ... ಭಟ್ಟ ದಯಪಾಲಿಸಿರಲಿಲ್ಲ.

ಭಟ್ಟನ ಕೃಪಾಕಟಾಕ್ಷ ಗಿಟ್ಟಿಸಲು ರತ್ನಾಕರ ... ಕಲ್ಲಡ್ಕದಲ್ಲಿ ಭಾನ್ಗಡಿ ಮಾಡೋದು ಅನಿವಾರ್ಯ... ರಿಯಲ್ ಎಸ್ಟೇಟ್ ಕಳ್ಳ ದಂಧೆಯಿಂದ ರೊಕ್ಕ ಕೂ...

ಸಂಘಿಗಳಿಗೆ ಅಶ್ರಫ್ ಆಹುತಿ!!

ಈ ವರದಿ ಅಚ್ಚಿಗೆ ಹೋಗುವ ಹಂತದಲ್ಲೇ ಕಲ್ಲಡ್ಕದಲ್ಲಿ ಸಂಘ ಪರಿವಾರದ ಪಾಪಿಗಳು ಸಾಬಿಯೊಬ್ಬನ ಬರ್ಬರವಾಗಿ ಕೊಂದು ನೆತ್ತರು ಓಕುಳಿ ನಡೆಸಿದ್ದಾರೆ. ಆತ ಅಶ್ರಫ್ ಎಂಬ ಅಮಾಯಕ ರಿಕ್ಷಾ ಚಾಲಕ. ಆತನ ದುಡಿಮೆಯೇ ಕುಟುಂಬಕ್ಕೆ ಆಸರೆಯಾಗಿತ್ತು, ತನ್ನೂರಿನ ಎಸ್‌ಡಿಪಿಐನ ಮುಂಚೂಣಿ ಕಾರ್ಯಕರ್ತನೂ ಆಗಿದ್ದ. ಇದು ಸಂಘಿ ಸೈತಾನರ ಕಣ್ಣು ಕೆಂಪು ಮಾಡಿತ್ತು, ಸಾಬರ ಬಲಿ ಪಡೆದರೆ ಮುಂಬರುವ ಎಲೆಕ್ಷನ್ ತಯಾರಿಗೆ ಭರ್ಜರಿ ಕಸುವು ಬರುತ್ತದೆಂಬ ಸ್ಕೆಚ್‌ನಲ್ಲಿದ್ದ ಡಾನ್ ಕಲ್ಲಡ್ಕ ಭಟ್ಟನ ಶಿಷ್ಯ ಗಣ ಅದ್ಯಾವಾಗ ಅಶ್ರಫ್‌ನ ಕೊಂದೇ ಹಾಕುವ ಹಿಕಮತ್ತು ಮಾಡಿತ್ತೋ?!



ಮುಂಜಾನೆ ಅಶ್ರಫ್‌ನ ರಿಕ್ಷಾವನ್ನು ಶೀನ ಸಫಲ್ಯ ಎಂಬ ಬೀಡಿ ಕಂಟ್ರಾಕ್ಟರ್ ಬೆಂಜನಪದವು ... ತೆಗೆದುಕೊಂಡು ಹೋಗಿದ್ದರು. ಅದು ಹಿಂದೂಗಳ ಏರಿಯಾ. ಕಳೆದೆರಡು ತಿಂಗಳಿಂದ ಶೀನ ಸಫಲ್ಯಾರ ಬೀಡಿ ಅಶ್ರಫ್‌ನ ರಿಕ್ಷಾದಲ್ಲೇ, ಹೋಗುತ್ತಿತ್ತು, ನಾಗೇಶ್ ಎಂಬವರ ಮನೆಯಿಂದ ಬೀಡಿ ಖರೀದಿಸುತ್ತಿದ್ದಾಗ ಮೂರು ಬೈಕಲ್ಲಿ ಆರು ಹೆಲ್ಮೆಟ್‌ಧಾರಿಗಳು ಕರಾವಳಿ ಸೈಟ್ ಎಂಬ ಆ ಪ್ರದೇಶಕ್ಕೆ ಬಂದಿದ್ದಾರೆ. ಬಂದವರೆ ತಲವಾರಿಂದ ಅಶ್ರಫ್‌ನ ತಲೆ ಕಡಿದಿದ್ದಾರೆ. ನೆತ್ತರ ಕೋಡಿಯಲ್ಲಿ ಬಿದ್ದು ಒದ್ದಾಡಿದ ಅಶ್ರಫ್ ಅಸುನೀಗಿದ್ದಾನೆ. ಹಂತಕರು ನೋಡುನೋಡುತ್ತಿದ್ದಂತೆಯೇ ಪರಾರಿ ಆಗಿದ್ದಾರೆ.

ಅಶ್ರಫ್ ದಿನವೂ ಬೆಂಜನಪದುವಿಗೆ ಬೀಡಿ ಸಂಗ್ರಹಕ್ಕೆಂದು ಬರುವುದು ಕರಾರುವಾಕ್ಕಾಗಿ ಗಮನಿಸಿದ್ದ ಹಿಂದೂತ್ವದ ಹರಾಮಿಗಳೇ ಆತನ ಜೀವ ನುಂಗಿದ್ದಾರೆ. ಅಲ್ಲಿಗೆ ಕಲ್ಲಡ್ಕ ಭಟ್ಟನ ಧರ್ಮಕಾರಣ ಕ್ರೌರ್ಯವೊಂದು ನಡೆದೇಹೋಗಿದೆ. ಕಲ್ಲಡ್ಕ ಭಟ್ಟನ ಜೊತೆ ಹರೀಶ್ ಪೂಜಾರಿ ಕೊಂದ ಬುವಿತ್-ಮಿಥುನ್ ತರಹದವರೇ ಗಿರಕಿ ಹೊಡೆಯುತ್ತಿರುತ್ತಾರೆ. ಕೊಲೆಗಡುಕರ ಆಶ್ರಯದಾತನಾದ ಕಲ್ಲಡ್ಕನ ಒದ್ದು ಒಳಗೆ ಹಾಕಿದರೆ ಅಶ್ರಫ್‌ನಂಥ ಅಮಾಯಕರ ಆಹುತಿಯಾಗೋದು ನಿಲ್ಲುತ್ತದೆ. ಪೊಲೀಸರ ಕೇಸರಿ




ಡ್ಯೂಟಿಯೂ ಈ ಕೊಲೆಗೆ ಕಾರಣ. ನಾಲಾಯಕ್ ಎಸ್ಪಿ ಭೂಷಣ್ ಬೊ... ಹೇತ್ಲಾಂಡಿತನದಿಂದ ಹಿಂದೂತ್ವದ ಹರಾಮಿಗಳು ಮತ್ತವರ ಗುರು ಭಟ್ಟನಂಥ ಪರಮ ಪಾತಕಿಗಳು ಬಂಟ್ವಾಳದಲ್ಲಿ ಮೆರೆಯುತ್ತಿದ್ದಾರೆ.

ಇಷ್ಟಾದರೂ ಗೃಹ ಇಲಾಖೆಯ ಪ್ರಭೃತಿಗಳು ಗೃಹ ಇಲಾಖೆ ಮಂಕಿ... ಆಣಿಯಾಗಿರುವ ಸಿಎಂ ಸಿದ್ದು ಎಚ್ಚೆತ್ತುಕೊಳ್ಳುವರಾ?

ರೈ ರಗಳೆಯೂ ವೀಡಿಯೋ ವೈರಲ್ಲೂ!!

ಬಂಟ್ವಾಳದಲ್ಲಿ ಕೋಮು ಕಿತಾಪತಿಯ ಭೀಷಣ ಭಾಷಣಕೋರ ಕಲ್ಲಡ್ಕ ಪ್ರಭಾಕರ ಭಟ್ಟನ ಮಟ್ಟ ಹಾಕದೆ ಆತನ ಖೆಡ್ಡಾಕ್ಕೆ ಬಿದ್ದಿರುವ ರೈ ಈಗ ವಿಲವಿಲ ಒದ್ದಾಡುತ್ತಿದ್ದಾರೆ. ಇಡೀ ದಕ್ಷಿಣ ಕನ್ನಡದ ಸಾಮರಸ್ಯ-ಸೌಹಾರ್ದಕ್ಕೆ ಕೊಳ್ಳಿಯಿಟ್ಟು ಕೇಕೆ ಹಾಕುತ್ತಿರುವ ಕಲ್ಲಡ್ಕ ಭಟ್ಟನ ಒದ್ದು ಒಳಗೆ ಹಾಕಿಸಲಾಗದ ರೈ ಜಿಲ್ಲೆಯ ಜನರ ಸಂಶಯಕ್ಕೆ ಈಡಾಗಿದ್ದಾರೆ.



ದುರಂತವೆಂದರೆ, ಕಲ್ಲಡ್ಕದಲ್ಲಾಗುತ್ತಿರುವ ಚೆಡ್ಡಿ ಪ್ರಣೀತ ಸರಣಿ ಕೋಮು ಗಲಭೆ- ಚೂರಿ ಇರಿತ ಪ್ರಕರಣದಲ್ಲಿ ಮಂತ್ರಿ ರೈ ಚೆಡ್ಡಿ ದೊರೆ ಭಟ್ಟನ ಹಿತ ಕಾಪಾಡುತ್ತಿದ್ದಾರೆಂಬ ಭಾವನೆ ಸಾರ್ವತ್ರಿಕವಾಗಿದೆ. ಬಂಟ್ವಾಳದ ಪೊಲೀಸ್ ಇಲಾಖೆ ಸಂಘ ಪರಿವಾರದ ಖಾಕಿ ಶಾಖೆಯಂತೆ ಕಾರ್ಯಾಚರಣೆ ನಡೆಸುತ್ತ ಬಂದಿದೆ. ಆಗೆಲ್ಲ ಸುಮ್ಮನಿದ್ದ ರೈ ಈಗ ದಡಬಡಿಸಿ ಎದ್ದು ಕುಂತಿದ್ದಾರೆ. ತಾನು ಆಯೋಜಿಸಿದ್ದ ರಮ್ಜಾನ್ ಇಫ್ತಾರ್ ಕೂಟಕ್ಕೆ ಸಾಬರು ಹೋಗಿರಲಿಲ್ಲ. ಇದರಿಂದ ಕಂಗಾಲು ಬಿದ್ದ ಮಂತ್ರಿಜೀ ಜಿಲ್ಲಾ ಎಸ್‌ಪಿ ಬೋರಸೆಯನ್ನು ಬಂಟ್ವಾಳದ ಐಬಿಗೆ ಕರೆಸಿ ಕಲ್ಲಡ್ಕನ ಬಂಧಿಸುವಂತೆ ತಾಕೀತು ಮಾಡಿದ್ದಾರೆ.

ಗಲಭೆ ಆದಮೇಲೆ ರೈಗೆ ಬುದ್ಧಿ ಬಂದಿದೆ. "ಪ್ರಭಾಕರ ಭಟ್ಟ ಒಬ್ಬ ಪುಕ್ಕಲ. ಅವನನ್ನು ಅರೆಸ್ಟ್ ಮಾಡಿದ್ರೆ ಯಾರು ಏನೂ ಮಾಡೋದಿಲ್ಲ. ನಾನಿದನ್ನು ಪ್ರಮಾಣವಾಗಿ ಹೇಳ್ತೇನೆ. ಅವನು ಕೋಮುವಾದಿ ಭಾಷಣ ಮಾಡಿದ್ರೆ ನೀವು ಅವ್ನ ಮೇಲೆ ಕ್ರಿಮಿನಲ್ ಕೇಸು ಹಾಕ್ರಿ... ಅವ್ನು ಅಷ್ಟು ದೊಡ್ಡ ಜನವೇನೂ ಅಲ್ಲ... ವಯಸ್ಸಾದೋರು ಯಾರೂ ಗಲಾಟೆ ಮಾಡೋದಿಲ್ಲ... ಇದು ಮಂಡ್ಯ ಅಲ್ಲ.... ಇಂಡಿಯಾ.... ನೀವು ಮಂಡ್ಯದವ್ರು... ನಿಮ್ಗೆ ಇಲ್ಲಿಯ ಪರಿಚಯ ಆಗೋದಿಲ್ಲ. ನಂಗೆ ಇಲ್ಲಿಯ ಎಲ್ಲರೂ ಗೊತ್ತುಂಟು... ಹಿಂದೊಮ್ಮೆ ನಾನು ಆ ಭಟ್ಟನ್ನ ಬಿಸಿ ರೋಡಲ್ಲಿ ಓಡಿಸಿದ್ದೆ..." ಹೀಗೆ ರೈಗಳ ಲಹರಿ ಮುಂದುವರಿದಿದೆ. ಸುಮಾರು ಒಂದು ನಿಮಿಷ ಮುವ್ವತ್ತೇಳು ಸೆಕೆಂಡ್‌ಗಳ ಕಾಲ ರೈ ಎಸ್‌ಪಿಗೆ ಪಾಠ ಮಾಡಿದ್ದು ಐಬಿಯಲ್ಲಿದ್ದ ಯಾರೋ ಆತನ ಹಿಂಬಾಲಕರೇ ವಿಡಿಯೋ ಮಾಡಿದ್ದಾರೆ.

ಸದ್ರಿ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ಈಗ ವೈರಲ್ ಆಗಿದೆ. ಯಡ್ಡಿ-ಸದಾನಂದ ಗೌಡರಾದಿಯಾಗಿ ಬಿಜೆಪಿಗರು ಬಾಯ್ಬಾಯಿ ಬಡಿದುಕೊಳ್ಳುತ್ತಿದ್ದಾರೆ. ರೈ ಹೇಳಿರೋದರಲ್ಲಿ ತಪ್ಪೇನೂ ಇಲ್ಲ. ಹಾಗೆ ನೋಡಿದರೆ ಭಟ್ಟನ ಬಂಧನ ಬಿಜೆಪಿಗರೇ ರಾಜ್ಯಭಾರ ಮಾಡುತ್ತಿರುವಾಗಲೇ ಆಗಬೇಕಿತ್ತು. ಇದು ಕಾನೂನಿನ ಅನಿವಾರ್ಯವೂ ಆಗಿತ್ತು. ಭಟ್ಟ ಕಲ್ಲಡ್ಕವೂ ಸೇರಿದಂತೆ ದಕ್ಷಿಣ ಕನ್ನಡ, ಉಡುಪಿ, ಕೊಡಗು ಜಿಲ್ಲೆಗಳ ನೆಮ್ಮದಿಯ ಬದುಕಿಗೆ ಭಂಗ ತರುತ್ತಿರುವ ಭಯೋತ್ಪಾದಕನೆಂಬುದು ಇಡೀ ಜಗತ್ತಿಗೇ ಗೊತ್ತಿರುವ ಸತ್ಯ. ಕಚ್ಚೆ ಹರುಕ ರಾಘು ಸ್ವಾಮಿಯ ಬಚಾಯಿಸಲು ಪುತ್ತೂರಿನ ಪಾಪದ ಶ್ಯಾಮ ಶಾಸ್ತ್ರಿಯ ಬಲಿ ಪಡೆದ ಭಟ್ಟ ಆ ಕೇಸಲ್ಲೂ ಜೈಲು ಸೇರಬೇಕಿತ್ತು. ಆದರೆ ಹಿಂದೂತ್ವದ ಗುಮ್ಮ ತೋರಿಸಿ ಪಾಪಿ ಭಟ್ಟ ಕಾನೂನಿನ ಕೈಯಿಂದ ನುಣುಚಿಕೊಳ್ಳುತ್ತಲೇ ಇದ್ದಾನೆ. ಕಾಂಗ್ರೆಸ್ ಆಡಳಿತದಲ್ಲೂ ಈತ ಭಾನ್ಗಡಿ ಮಾಡಿಯೂ ಆರಾಮವಾಗಿರುವುದೇ ವಿಚಿತ್ರ.

ಆದರೆ ಭಟ್ಟನಿಂದ ಆಗಬಾರದ ಅನಾಹುತಗಳೆಲ್ಲ ಆಗಿಹೋದ ನಂತರ ರೈಗೆ ಜ್ಞಾನೋದಯವಾಗಿದೆ. ಇಲ್ಲಿರುವ ಮತ್ತೊಂದು ಮಜಾ ಎಂದರೆ, ಎಸ್‌ಪಿ ಬೋರಸೆಗ್ಯಾಕೋ ಕಲ್ಲಡ್ಕನ ಬಂಧಿಸುವ ದಮ್ ಇಲ್ಲದಾಗಿದೆ. ಮಂತ್ರಿ ರೈಗೆ ಕೋಮು ಕಲಹದ ಪಿತಾಮಹ ಕಲ್ಲಡ್ಕನಿಗೆ ಬುದ್ಧಿ ಕಲಿಸಲೇಬೇಕೆಂಬ ನೈತಿಕ ಛಲ, ಕಾನೂನು ನಿಷ್ಠೆ-ಮಂತ್ರಿತ್ವದ ಹೊಣೆಗಾರಿಕೆ ಇದ್ದಿದ್ದೇ ಆದರೆ ಎಸ್‌ಪಿಗಿಂತಲೂ ಮೇಲಿನ ಪೊಲೀಸ್ ಅಧಿಕಾರಿಗಳಿಗೆ ಆದೇಶ ಕೊಡಬೇಕು.

ಗೃಹ ಖಾತೆಯ ಹೊಣೆ ಹೊರಲು ರೆಡಿಯಾಗಿರುವ ಸಿಎಂ ಸಿದ್ದು ಬಳಿ ಭಟ್ಟನ ಭಾನ್ಗಡಿ ಬಗ್ಗೆ ಮಾತಾಡಬೇಕು. ಆತ ಕೃಷ್ಣನ ಜನ್ಮಸ್ಥಳ ಸೇರುವಂತೆ ಸರ್ಕಾರ ನೋಡಿಕೊಳ್ಳಬೇಕು.

...ತ ಸದಾ ಚಾಕೂ-ಚೂರಿ ಕಂಕುಳಲ್ಲಿ ಇಟ್ಟುಕೊಂಡೇ ...ತ್ತಾನೆ. ಅಂತೂ ಕಳೆದ ಮಂಗಳವಾರ (13.6.17) ... ಕಲ್ಲಡ್ಕದ ಬೀದಿಯಲ್ಲಿ 'ತನ್ನತನ' ತೋರಿಸಲು ... ಶೆಟ್ಟಿಗೆ ಮುಹೂರ್ತ ಸಿಕ್ಕಿದೆ. ಖಲೀಲ್ ಎಂಬ ...ಪಿಐ ಕಾರ್ಯಕರ್ತನ ಮೇಲೆ ಸುಖಾಸುಮ್ಮನೆ ಮುಗಿ...ನೆ. ಮಾತಿಗೆ ಮಾತು ಬೆಳೆದಿದೆ. ಚಾಕು ...ಕೊಂಡೇ ಕಾಳಗಕ್ಕೆ ನಿಂತಿದ್ದ ರತ್ನಾಕರ ಶೆಟ್ಟಿ ಹಿಂದೆ ... ನೋಡದೆ ಖಲೀಲ್‌ನ ಇರಿದೇ ಬಿಟ್ಟಿದ್ದಾನೆ. ಆ ...ಲ್ಲಿ ರತ್ನಾಕರ ಶೆಟ್ಟಿ ಕೈಗೂ ಗಾಯವಾಗಿದೆ. ...ಗೊಂಡವನು ಆಸ್ಪತ್ರೆ ಪಾಲಾಗುತ್ತಲೇ ಇತ್ತ ಮಸೀದಿ ...ಬರು ಗುಂಪುಗೂಡಿದ್ದಾರೆ. ಇದನ್ನು ಕಂಡ ಹಿಂದೂತ್ವ ... ಜಮೆಯಾಗಿದೆ. ಮುಖಾಮುಖಿ ನಿಂತ ಎರಡೂ ...ರು ಕಲ್ಲು ತೂರಾಟದಲ್ಲಿ ತೊಡಗಿದ್ದಾರೆ. ಮಸೀದಿ ... ಹಿಂದೂ ಪುಣ್ಯಾತ್ಮರು ಜಖಂ ಮಾಡಿ ಕೇಕೆ ...ದ್ದಾರೆ.

...ರಡು ವಾರದಲ್ಲಿ ಆಗಾಗ ಚೂರಿ ಇರಿತದ ಕ್ರಿಮಿನಲ್ ... ನಡೆದರೂ ಕಲ್ಲಡ್ಕದ ಮುಸ್ಲಿಮರು ತಾಳ್ಮೆ ...ಕೊಂಡಿರಲಿಲ್ಲ. ಸಂಯಮದಿಂದಲೇ ಪ್ರತಿಭಟನೆ ...ದ್ದರು. ಚೂರಿ ಇರಿತದ ಆರೋಪಿಗಳನ್ನು ಬೇಕಂತಲೇ



ಡಾ. ಪ್ರಸಾದ್ ಭಂಡಾರಿ

...ಸದ ಪೊಲೀಸರ ಮೇಲೆ ಸಹಜವಾಗೇ ಸಾಬಿಗಳು ...ಶಗೊಂಡಿದ್ದರು. ಸಾಬರ ಸಹನೆ ಪರೀಕ್ಷಿಸುವ ...ಪ್ರಸಂಗ ಸಂಘ ಪರಿವಾರ ಮತ್ತು ಪೊಲೀಸರಿಂದ ... ಇತ್ತು. ಹೀಗಾಗಿ ಪೊಲೀಸರು ಮತ್ತೊಂದು ಚೂರಿ ...ಕ್ಕೆ ಆಸ್ಪದ ಕೊಟ್ಟರು. ಅದೂ ಸ್ಥಳೀಯ ಹಿಂಜಾವೇ ...ರನೂ-ಕಲ್ಲಡ್ಕ ಭಟ್ಟನ ಸಹಚರನೂ ಆದ ರತ್ನಾಕರ ...ಅಖಾಡಕ್ಕೆ ಬರುವ ಅವಕಾಶ ಪೊಲೀಸರಿಂದ ಆಗಿತ್ತು. ... ಸಾಬರು ಸಹನೆಗೆಟ್ಟು ಕಲ್ಲು ತೂರಾಟಕ್ಕೆ ...ಯುವಂತೆ ಮಾಡಿತು.

...ಾಬರು ಕಲ್ಲು ತೂರಾಟದಲ್ಲಿ ತೊಡಗುವಂತೆ ...ಮವುದೇ ಭಟ್ಟ ಮತ್ತವನ ಪೊಲೀಸ್ ಪಡೆಯ ಒಳ ...ಶವಾಗಿತ್ತು. ಕಲ್ಲು ತೂರಾಟದ ಆರೋಪ ಹೊರಿಸಿ ...ಮರ ಮನೆ-ಮನೆಗೆ ನುಗ್ಗಿ ಯುವಕರ ಎತ್ತಾಕಿಕೊಂಡು ... ಜೈಲಿಗೆ ಹಾಕುವ ಪ್ಲಾನು ಬಂಟ್ವಾಳದ ಚೆಡ್ಡಿ ...ೀಸರು ಹಾಕಿಕೊಂಡಿದ್ದರು. ಹಾಗೆ ಪೊಲೀಸರು ಸಾಬರ ...ಗರ ಬಂಧಿಸಿದರೆ ತನ್ನ ಗಲೀಜು ರಾಜಕಾರಣಕ್ಕೆ ...ಯ ಆಗುತ್ತದೆಂದು ಭಟ್ಟ ಸ್ಕೆಚ್ ಹಾಕಿದ್ದ. ಸಾಬರ ...ರ ಮೇಲೆ ಚೂರಿ ದಾಳಿ ಮಾಡಿದವರ ಹಿಡಿಯುವ ...ನ್ನ ನಿಭಾಯಿಸದ ಪಕ್ಷಪಾತಿ ಪೊಲೀಸರು ಕಲ್ಲು ತೂರಾಟ ...ದ್ದಾರೆಂಬ ಕಾರಣಕ್ಕೆ ಅಪರಾತ್ರಿಯಲ್ಲಿ ಮುಸ್ಲಿಮರ ...ಮನೆಗೆ ಹೊಕ್ಕಿದ್ದಾರೆ.

...ಹೆಂಗಸರನ್ನು ಮತಾಂಧ ಮಾತಿಂದ ಮೂದಲಿಸಿದ್ದಾರೆ. ...ರು-ಹೆಂಗಸರೆಂದು ನೋಡದೆ ತಳ್ಳಾಡಿ ಮತಾಂಧ ... 'ತೀರಿಸಿ'ಕೊಂಡಿದ್ದಾರೆ. ಕೈಗೆ ಸಿಕ್ಕ ಮುಸ್ಲಿಮ್ ...ವಕರ ಎಳೆದೊಯ್ದು ಕೇಸು ಜಡಿದು ಕಾರಾಗೃಹಕ್ಕೆ ...ದ್ದಾರೆ. ಪೊಲೀಸರಿಂದ ಘಾಸಿಗೊಂಡ ರುಖಿಯಾ, ...ೀಗಿ ಮರಿಯಮ್ಮ, ಮೈಮೂನಾ, ನಫೀಸಾ ಆಸ್ಪತ್ರೆ



ಸೇರಿದ್ದಾರೆ. ಸಂಘಪರಿವಾರದ ನುರಿತ ರೌಡಿಗಳೇ ನಾಚುವಷ್ಟು ವ್ಯವಸ್ಥಿತವಾಗಿ-ಬರ್ಬರವಾಗಿ ಪೊಲೀಸರು ಸಾಬರ ಹೆಂಗಸರ ಮೇಲೆ ಮಾನಸಿಕ-ದೈಹಿಕ ಹಲ್ಲೆ ಮಾಡಿದ್ದಾರೆ!!

ಇಷ್ಟಾದರೂ ಮಂತ್ರಿ ರೈ ಸಂಘಿ ಸೈತಾನರಿಗಾಗಲಿ, ಪೊಲೀಸರಿಗಾಗಲಿ ಕಡಿವಾಣ ಹಾಕಲು ಯೋಚಿಸಲೇ ಇಲ್ಲ. ಒಂದು ಕಡೆ ಪೊಲೀಸರು ಸಂಘ ಪರಿವಾರಕ್ಕೆ ದುರಾಚಾರ ನಡೆಸಲು ಮುಕ್ತ ಅವಕಾಶ ಕಲ್ಪಿಸುತ್ತಿದ್ದಾರೆ. ಮತ್ತೊಂದು ಕಡೆ ಮಂತ್ರಿ ರೈಗಳೇ ಪೊಲೀಸರಿಗೆ ಕುಮ್ಮಕ್ಕು ಕೊಟ್ಟು ಕಂಗೆಟ್ಟ ಸಾಬರ ಬಂಧಿಸಲು ಬಿಟ್ಟಿದ್ದಾರೆಂಬ ಭಾವನೆ ಈಗ ಇಡೀ ಜಿಲ್ಲೆಗೆ ಬಂದಿದೆ. ಪೊಲೀಸರು ಮಂಗಳವಾರ ರಾತ್ರಿಯೇ ಕಲ್ಲುತೂರಾಟದ ನೆಪದಿಂದ ಸಾಬರ ಮನೆ-ಮನೆ ಶೋಧಕ್ಕೆ ಇಳಿದಾಗಲೇ ಅಂದಿನ ಅನಾಹುತದ ರೂವಾರಿಯಾದ ಹಿಂಜಾವೇ ಘಂಟರ್ ರತ್ನಾಕರ ಶೆಟ್ಟಿ ತನಗೆ ಚೂರಿ ಇರಿತದ ಗಾಯವಾಗಿದೆ ಎಂದು ಪುತ್ತೂರಿನ 'ಆದರ್ಶ' ಆಸ್ಪತ್ರೆ ಸೇರಿಕೊಂಡಿದ್ದಾನೆ. ಈ ಆಸ್ಪತ್ರೆ ಕಲ್ಲಡ್ಕ ಭಟ್ಟನ ಆತ್ಯಾಪ್ತ ಬಂಟ ಡಾ. ಪ್ರಸಾದ್ ಭಂಡಾರಿಯದು. ಈತನ ಹೆಂಡತಿ ಕಳೆದ ಬಾರಿ ಪುತ್ತೂರಿನ ಶಾಸಕಿಯಾಗಿದ್ದಾಕೆ. ಕೋಮು ಕಿತಾಪತಿಯ ಭಾಷಣ ಮಾಡೋದರಲ್ಲಿ ಡಾ. ಪ್ರಸಾದ್ ಗುರು ಕಲ್ಲಡ್ಕನನ್ನೇ ಮೀರಿಸುವಾತ! ಚೂರಿ ಇರಿತದ ಪ್ರಧಾನ ಆರೋಪಿಯಾದ ರತ್ನಾಕರ ಶೆಟ್ಟಿ ಕಾಯಲು ಪುತ್ತೂರಿನ ಮೂವರು ಪೊಲೀಸರನ್ನು ನೇಮಿಸಲಾಗಿತ್ತು.

ಪುತ್ತೂರು ಪಿಎಸ್‌ಐ ಓಮನಾ ಮತ್ತಿಬ್ಬರು ಪೇದೆಗಳ ಕಣ್ಣೆದುರೇ 'ಚೂರಿ ರತ್ನಾಕರ' ಸಲೀಸಾಗಿ ಬುಧವಾರ ರಾತ್ರಿ ಮನೆಗೆ ಹೋಗಿದ್ದಾನೆ. ಕಲ್ಲಡ್ಕಕ್ಕೆ ಕಿಚ್ಚು ಹಚ್ಚುವ ಪ್ಲಾನ್ ಕಲ್ಲಡ್ಕ ಭಟ್ಟನ ಶಿಷ್ಯರ ಜತೆ ಸೇರಿ ಮಾಡಿದ್ದಾನೆ. ಗುರುವಿನ ಮಾರ್ಗದರ್ಶನ ಪಡೆದಿದ್ದಾನೆ. ರತ್ನಾಕರ ಶೆಟ್ಟಿ ಆಸ್ಪತ್ರೆಯಿಂದ ಪರಾರಿಯಾಗಿದ್ದು ಗೊತ್ತಾಗುತ್ತಲೇ ಎಸ್‌ಪಿ ಭೂಷಣ ಬೋರಸೆ ಸಿಡಿಮಿಡಿ ಆಗಿದ್ದಾರೆ. ತಕ್ಷಣ ಎಸ್‌ಐ ಓಮನಾ ಮತ್ತಿಬ್ಬರು ಪೇದೆಗಳ ಅಮಾನತ್ತು ಮಾಡಿದ್ದಾರೆ. ಈ ಆದೇಶ ಕಂಡಿದ್ದೇ ಮಹಿಳಾ ಎಸ್‌ಐ ಓಮನಾ ಕುಟ್ಟಿ ಕುಸಿದುಬಿದ್ದು ಆಸ್ಪತ್ರೆ ಪಾಲಾಗಿದ್ದಾರೆ. ಪೊಲೀಸರು ರತ್ನಾಕರ ಶೆಟ್ಟಿಗೆ ಓಡಿಹೋಗಲು ಬಿಟ್ಟದ್ದಕ್ಕೆ ಶಿಕ್ಷೆಗೆ ತುತ್ತಾಗಿದ್ದಾರೆಂಬ ಸುದ್ದಿ ಹರಡಿದ್ದೇ ತಡ, ಮೊದಲು ಎಚ್ಚೆತ್ತುಕೊಂಡಿದ್ದು ಕಲ್ಲಡ್ಕ ಭಟ್ಟ. ತನ್ನ ಕೇಸರಿ ಕರಾಮತ್ತಿಗೆ ಸಕಲ ಸಹಕಾರ ಕೊಡುವ ಪೊಲೀಸರ ನೌಕರಿಗೆ ಕುತ್ತು ಬಂದಿದ್ದು ಕಲ್ಲಡ್ಕನ ಚಿಂತೆಗೀಡುಮಾಡಿದೆ. ರತ್ನಾಕರ ಶೆಟ್ಟಿಯನ್ನು ಸಂಪರ್ಕಿಸಿ ತಕ್ಷಣ ಅದೇ ಆದರ್ಶ ಆಸ್ಪತ್ರೆಯ ತೀವ್ರ ನಿಗಾ ಘಟಕದ ಕೋಣೆ ಸೇರಿಕೊಳ್ಳುವಂತೆ ಆರ್ಡರ್ ಮಾಡಿದ್ದಾನೆ.

ಬಾಸ್ ಆಜ್ಞೆ ಶಿರಸಾ ಪಾಲಿಸಿದ ಖತರ್‌ನಾಕ್ ಚೆಡ್ಡಿ ರತ್ನಾಕರ ಶೆಟ್ಟಿ ಮರುದಿನ ಗುರುವಾರ ತಾನಾಗೇ ಆಸ್ಪತ್ರೆ ರೂಮು ಸೇರಿಕೊಂಡಿದ್ದಾನೆ. ಓತಿಕ್ಯಾತಕ್ಕೆ ಬೇಲಿ ಸಾಕ್ಷಿ ಅಂತಾರಲ್ಲ ಹಾಗೆ, ಅನಾಹುತಕಾರಿ ಸಂಘಿ ಡಾ. ಪ್ರಸಾದ್ ಭಂಡಾರಿ "........ ರತ್ನಾಕರ ಶೆಟ್ಟಿ ಪರಾರಿ ಆಗಿರಲಿಲ್ಲ...



ಎಸ್‌ಐ ಓಮನಾ

ನಾನೇ ಅವನ ಎದೆನೋವು ಕಂಡು ಮಂಗಳೂರಿನ ಹೃದ್ರೋಗ ತಜ್ಞರ ಬಳಿ ಕಳಿಸಿದ್ದೆ...." ಎಂದು ಬೊಗಳುತ್ತಿದ್ದಾನೆ! "ಎದೆನೋವು ಕಮ್ಮಿಯಾದ್ದರಿಂದ ಮತ್ತೆ ಆದರ್ಶ ಆಸ್ಪತ್ರೆಗೆ ಬಂದಿದ್ದೇನೆ" ಎನ್ನುತ್ತಾನೆ ಚಾಕು ರತ್ನಾಕರ!! ಈ ಪ್ರಹಸನ ಹಿಂದೂತ್ವ ಡಾನ್ ಕಲ್ಲಡ್ಕ ಭಟ್ಟ ಮತ್ತು ದಕ್ಷಿಣ ಕನ್ನಡದ ಚೆಡ್ಡಿ ಪೊಲೀಸರ ನಡುವಿನ ಅನೈತಿಕ ನಂಟಿನ ಪ್ರತಿ ಮಜಲನ್ನೂ ನಿಚ್ಚಳವಾಗಿ ಬಿಚ್ಚಿಟ್ಟಿದೆ!!

ಸರಣಿ ಮತಾಂಧ ಮಸಲತ್ತುಗಳಿಂದ ನೆಮ್ಮದಿಗೆಟ್ಟಿರುವ ಕಲ್ಲಡ್ಕದ ನಿತ್ಯ ದುರಂತದಿಂದ ಒಂದಂತೂ ಖಾತ್ರಿಯಾಗಿದೆ. ಅದೆಂದರೆ, ಕಲ್ಲಡ್ಕ-ಬಂಟ್ವಾಳದಲ್ಲಿ ಒಂದಲ್ಲ ಒಂದು ಕೋಮು ಕಿತಾಪತಿ-ಕ್ರೌರ್ಯ ನಡೆಯುತ್ತಿರುವುದು ಕಲ್ಲಡ್ಕ ಭಟ್ಟನಿಗೆ ಆತ್ಯಗತ್ಯವಾಗಿದೆ. ಇದೆಲ್ಲದರಿಂದಾಗಿ ಇಡೀ ಬಂಟ್ವಾಳ ಈಗ ಭಟ್ಟನಿಗಿಂತ ರೈ ಮೇಲೆಯೇ ಹೆಚ್ಚು ಮುನಿಸಿಕೊಂಡಿದೆ. ಕಳೆದ ಮೂರು ದಶಕದಿಂದ ಕಣ್ಣು ಮುಚ್ಚಿ ರೈಯನ್ನು ಬೆಂಬಲಿಸುತ್ತ ಬಂದ ಮುಸ್ಲಿಮರೂ ಈಗ ತಿರುಗಿಬಿದ್ದಿದ್ದಾರೆ. ಆತ ಮೊನ್ನೆ ಏರ್ಪಡಿಸಿದ್ದ ಇಫ್ತಾರ್ ಕೂಟಕ್ಕೆ ಬೇಸತ್ತಿರುವ ಮುಸ್ಲಿಮರು ಬಹಿಷ್ಕಾರ ಹಾಕಿದ್ದಾರೆ. ಆರ್‌ಎಸ್‌ಎಸ್ ಚಿಗುರಿದಂತೆಯೇ ಬಂಟ್ವಾಳದಲ್ಲಿ ಎಸ್‌ಡಿಪಿಐ ಸಹ ಬೆಳೆಯುತ್ತಿದೆ. ಇದು ಮುಂದಿನ ಚುನಾವಣೆಯಲ್ಲಿ ರೈಗೆ ಮನೆ ದಾರಿ ತೋರಿಸಲಿದೆಯೇ?


ಈಗ ತಕ್ಷಣ ಕಾಂಗ್ರೆಸ್ ಹೈಕಮಾಂಡ್ ಎಚ್ಚೆತ್ತುಕೊಳ್ಳಬೇಕಿದೆ. ಸಂಘ ಪರಿವಾರವನ್ನು ಮಟ್ಟ ಹಾಕಬೇಕಿದೆ. ದಕ್ಷಿಣ ಕನ್ನಡದಲ್ಲಿ ಸಂಘ ಪರಿವಾರ ಬೊಬ್ಬಿಡುತ್ತ ಅರಾಜಕತೆ ಸೃಷ್ಟಿಸಿದೆ. ಮುಂದಿನ ಎಲೆಕ್ಷನ್‌ನಲ್ಲಿ ಬಂಟ್ವಾಳದಲ್ಲಿ ಕಾಂಗ್ರೆಸ್ ಗೆಲ್ಲಬೇಕೆಂದಿದ್ದರೆ ತಕ್ಷಣವೇ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಬೇಕಿದೆ.

■ ವರದಿಗಾರ





ಕೊಪ್ಪಳ: ಸುಳ್ಳುಗಾರ ಪೆಕ್ರವರ್ತಿಗೆ 'ಕಾರಟಗಿ' ಉತ್ತ


ನಿಜಗುಣಾನಂದ ಸ್ವಾಮೀಜಿ

ಬಡತನ, ನಿರುದ್ಯೋಗ ಹಾಗೂ ಕೃಷಿ ವೈಫಲ್ಯದಿಂದ ಅಕ್ಷರಶಃ ಕಂಗಾಲಾಗಿ ಹೋಗಿರುವ ಕೊಪ್ಪಳದ ನೆಮ್ಮದಿಗೆ ಬೆಂಕಿ ಇಡಲು ಆರೆಸ್ಸೆಸ್ ಪರಿವಾರ ಸದ್ದಿಲ್ಲದೆ ಕ್ರಿಯಾಶೀಲವಾಗಿದೆ. ಕೇಸರಿ ಕ್ರಿಮಿ ಪೆಕ್ರವರ್ತಿ ಸುಳ್ಳುಬೆಲೆ ಎಂಬ ಮಹಾನ್ ಮಾತುಗಾರ ಈಗಾಗಲೇ ಕೊಪ್ಪಳ ಜಿಲ್ಲೆಯ ಸಣ್ಣಪುಟ್ಟ ಶಹರದಲ್ಲೂ ಹಿಂದೂ-ಮುಸ್ಲಿಂ ವೈಷಮ್ಯದ ಭಾಷಣ ಬಿಗಿದು ಹೋಗಿದ್ದಾನೆ. 2014ರ ಲೋಕಸಭಾ ಚುನಾವಣೆ ವೇಳೆಯಲ್ಲೇ ಬ್ರಿಗೇಡ್ ಅವತಾರದಲ್ಲಿ ಕೊಪ್ಪಳಕ್ಕೆ ಅಪ್ಪಳಿಸಿದ್ದ ಈ ಸುಳ್ಳಾತ್ಮ ಪಾಕಿಸ್ತಾನದ ಮೂಲಕ ಮಾತು ಶುರು ಮಾಡಿ, ಅಂದಿನ ಯುಪಿಎ ಪ್ರಧಾನಿ ಮನಮೋಹನ್ ಸಿಂಗ್‌ರನ್ನು ಲೇವಡಿ ಮಾಡುತ್ತಾ ಮೋದಿಯನ್ನು ಸಾಕ್ಷಾತ್ ದೇವಮಾನವನಂತೆ ಪ್ರಚುರಪಡಿಸಿ ಹೋಗಿದ್ದ. ಈಗ ಹೊಸ ಅವತಾರದಲ್ಲಿ ಆಗಮಿಸಿರುವ ಪೆಕ್ರವರ್ತಿ ಎರಡು ತದ್ವಿರುದ್ಧ ಸೈದ್ಧಾಂತಿಗಳನ್ನು ಒಂದೇ ವೇದಿಕೆಯಲ್ಲಿ ಕೂಡಿಹಾಕಿ ಜನರನ್ನು ದಿಕ್ಕುತಪ್ಪಿಸುವ ಹುನ್ನಾರಕ್ಕೆ ಕೈಹಾಕಿದ್ದಾನೆ.

ಪುರೋಹಿತಶಾಹಿಗಳು ಯಾವ ದಲಿತ ಸಮುದಾಯವನ್ನು ತುಚ್ಛೀಕರಿಸಿ ಇಷ್ಟುದಿನ ದೂರವಿಟ್ಟದ್ದರೋ ಅದೇ ದಲಿತ ಸಮುದಾಯದ ನೆರವಿಲ್ಲದೆ ತಮಗೆ ರಾಜಕೀಯ ಅಧಿಕಾರ ದಕ್ಕದು ಎಂಬ ಸತ್ಯವನ್ನು ನಿಧಾನಕ್ಕಾದರೂ ಅರ್ಥ ಮಾಡಿಕೊಳ್ಳುತ್ತಿದ್ದಾರೆ. ಹಾಗಾಗಿ ಅವರಿಗೆ ಈಗ ಧಿಗ್ಗನೇ ಅಂಬೇಡ್ಕರ್ ಬಗ್ಗೆ ನೆನಪಾಗುತ್ತಿದೆ. ಅಂಬೇಡ್ಕರ್‌ರ ಜೀವವಾದಕ್ಕೆ ಬೆಂಕಿ ಇಟ್ಟ ಜನ ಈಗ ಅವರ ಫೋಟೊಕ್ಕೆ ಹೂಮಾಲೆ ಹಾಕಿ ಮುನ್ನೆಲೆಗೆ ಬರಲು ಹವಣಿಸುತ್ತಿರೋದು ರಹಸ್ಯವಾಗೇನೂ ಉಳಿದಿಲ್ಲ. ಕೊಪ್ಪಳದಲ್ಲಿ ಅಂತದ್ದೇ ಒಂದು ವಿಕೃತಿಗೆ ಕೈಹಾಕಿರುವ ಪೆಕ್ರವರ್ತಿ ಅಂಬೇಡ್ಕರರ 125ನೇ ಜನ್ಮ ದಿನಾಚರಣೆಗೆ ಸನಾತನವಾದಿ ರಾಮಾನುಜಾಚಾರ್ಯನ 1000ನೇ ಜನ್ಮಾಚರಣೆಯ ತಳುಕು ಹಾಕಿ ಎರಡನ್ನೂ ಒಟ್ಟೊಟ್ಟಿಗೆ, ಒಂದೇ ವೇದಿಕೆಯಲ್ಲಿ ಆಚರಿಸುವ ಮಹಾನ್ ಯಡವಟ್ಟು ಮಾಡಿದ್ದಾನೆ.

ಅಸಮಾನತೆ ಮತ್ತು ಶೋಷಣೆ ವಿಜೃಂಭಿಸುತ್ತಿರುವ ಈ ಹೊತ್ತಿನಲ್ಲಿ ಅಂಬೇಡ್ಕರ್ ಹೆಚ್ಚೆಚ್ಚು ಪ್ರಸ್ತುತತೆಗೆ ಬರುತ್ತಿರೋದು ಅವರ ವಿಚಾರಗಳಿಂದಲೇ ಹೊರತು ಅವರ ವ್ಯಕ್ತಿ ಚಿತ್ರದಿಂದಲ್ಲ, ಆದರೆ ಜೀವವಿರೋಧಿ ಸಂಘಿಗಳಿಗೆ ಅಂಬೇಡ್ಕರ್ ವಿಚಾರವಾದ ಯಾವತ್ತೂ ರುಚಿಸುವಂತದ್ದಲ್ಲ, ಹಾಗಾಗಿ ಅಂಬೇಡ್ಕರ್‌ರ ವ್ಯಕ್ತಿಚಿತ್ರದ ಮರೆಯಲ್ಲಿ ತಮ್ಮ ಕೋಮುವಾದಿ ಹಕೀಕತ್ತುಗಳನ್ನು ಜಾಹೀರು ಪಡಿಸಲು ಇಂತಹದ್ದೊಂದು ಘನಕಾರ್ಯಕ್ಕೆ ಮುಂದಾಗಿದ್ದಾರೆ.

'ಹಿಂದೂವಾಗಿ ಹುಟ್ಟಿರುವೆ; ಆದರೆ ಹಿಂದೂವಾಗಿ ಮಾತ್ರ ಸಾಯಲಾರೆ' ಎಂದು ಪ್ರತಿಜ್ಞೆ ಮಾಡಿ ಅದರಂತೆ ಬೌದ್ಧ ಧರ್ಮದ ಮಾನವಸೆಲೆಗೆ ಬಂದು ನಿಂತಿದ್ದ ಅಂಬೇಡ್ಕರ್ ಎಲ್ಲಿ, ಶೂದ್ರ ಸಮುದಾಯಗಳನ್ನು ಕೇವಲವಾಗಿ ಕಾಣುವ ವರ್ಣಾಶ್ರಮವೇ ಶ್ರೇಷ್ಠವೆಂದು ಸಾರಿದ ಸನಾತನವಾದಿ ರಾಮಾನುಜಾಚಾರ್ಯನೆಲ್ಲಿ. ಇವರಿಬ್ಬರನ್ನು ಒಂದೇ ವೇದಿಕೆಗೆ ಕರೆತರುವ ಪ್ರಯತ್ನವೇ ಅವಕಾಶವಾದಿತನದ ಸೂತಕ. ಅಂತಹ ಒಂದು ಕಾರ್ಯಕ್ರಮದಲ್ಲಿ ಪೆಕ್ರವರ್ತಿ ಆಡಿದ ಮಾತುಗಳ ಸ್ಯಾಂಪಲ್ಲೇ ಈ ಕೇಸರಿ ವಿಕೃತಿ ಹಿಂದಿರುವ ಕೋಮು ಬೊಗಳೆಯನ್ನು ಬಿಚ್ಚಿಡುತ್ತವೆ. 'ಜಾತಿಸಂಕೋಲೆಗಳನ್ನು ಕಳಚೋಣ ಬನ್ನಿ' ಎಂದು ದಲಿತ ಯುವಕರನ್ನು ಗುಡ್ಡೆ ಹಾಕಿಕೊಂಡಿದ್ದ ಸಮಾರಂಭದಲ್ಲಿ ಪೆಕ್ರವರ್ತಿ ಮಾಡಿದ್ದು ಶುದ್ಧ ಕೋಮುಹಿಂಸೆಯ ಭಾಷಣ. ಅಂಬೇಡ್ಕರ್‌ರು ಪಾಕಿಸ್ತಾನದ ವಿರೋಧಿಯಾಗಿದ್ದರು ಮತ್ತು ಹಿಂದೂ ಧರ್ಮದ ಸುಧಾರಣಾವಾದಿಗಳಾಗಿದ್ದರು ಎಂದೆಲ್ಲ ಬೊಬ್ಬಿರಿದ ಸುಳ್ಳುಬೆಲೆ ಸ್ವತಃ ಅಂಬೇಡ್ಕರರು ಗೋಹತ್ಯೆಯನ್ನು ಸಂವಿಧಾನದಲ್ಲಿ ನಿಷೇಧಿಸಿ ಹೋಗಿದ್ದಾರೆ ಎಂಬ ಮಿಥ್ಯವನ್ನೂ ಉದುರಿಸಿದ್ದ. ಅಷ್ಟಲ್ಲದೆ ಪ್ರತಿ ಊರಿನಲ್ಲಿಯೂ ದಲಿತ ಯುವಕರೊಟ್ಟಿಗೆ ಗುಪ್ತಸಭೆಗಳನ್ನು ನಡೆಸಿ 'ನಮ್ಮ ಶತ್ರುಗಳು ಮುಸ್ಲಿಮರು ಮತ್ತು ಕಾಂಗ್ರೆಸ್‌ನವರು' ಎಂದು ಉಸುರಿ ಹೋಗಿರುವ ಮಾಹಿತಿಗಳೂ ಕೇಳಿಬರುತ್ತಿವೆ.

20 ವರ್ಷಗಳ ಹಿಂದೆ ರಾಯಚೂರು ಜಿಲ್ಲೆಯಿಂದ ಕವಲೊಡೆದು. ಪ್ರತ್ಯೇಕ ಜಿಲ್ಲೆಯಾದ ಕೊಪ್ಪಳ ಕೇವಲ ಹತ್ತು ವರ್ಷಗಳ ಹಿಂದೆ ಶಾಂತ ಸ್ವರೂಪದಲ್ಲಿತ್ತು, ತುಂಗಭದ್ರ ಆಣೆಕಟ್ಟಿನ ನೆರವಿನಿಂದ ನೀರಾವರಿ ಪಡೆದು ನಿಧಾನವಾಗಿ ಅಭಿವೃದ್ಧಿ ಕಾಣತೊಡಗಿತ್ತು, ಆದರೆ ಇಲ್ಲಿಯೂ ಜಾತಿವಾದಿ ಮನಸ್ಥಿತಿಗಳು ಬಲವಾಗತೊಡಗಿ, ಜಾತಿಗೊಂದು ಮಠ, ಮಠಾಧಿಪತಿಗಳು ಬರಲಾರಂಭಿಸಿದ ತರುವಾಯ ಕೊಪ್ಪಳಕ್ಕೆ ಇಂಥಾ ಕೋಮು ಸೈತಾನಿಗಳು ಅಮರಿಕೊಳ್ಳಲು ಆರಂಭಿಸಿದರು. ಹಿರೇಬಗನಾಳ್, ಕಾತ್ರಿಕಿ ಗುಡ್ಲಾನೂರು, ಕಲಾಲ್ ಬಂಡಿ, ಜೀರಾಳ್ ಕಲ್ಗುಡಿ, ಮುರಕುಂಬಿ, ಹೊಸಗುಡ್ಡ, ಬೋಚನಳ್ಳಿ, ಕನಕಗಿರಿ, ಬಸವಣ್ಣ ಕ್ಯಾಂಪ್, ಈಚನಾಳ್, ತಿಪ್ಪನಾಳ್, ಸುಳೇಕಲ್ ಊರುಗಳು ಜಾತಿ ದಳ್ಳುರಿಗೆ ತುತ್ತಾದವು. ಪ್ರಗತಿಪರ ಮತ್ತು ದಲಿತ ಸಂಘಟನೆಗಳು ಇಂತಹ ಘಟನೆಗಳನ್ನು ಶಮನ ಮಾಡಲು ಯತ್ನಿಸಿದರೆ ಪೆಕ್ರವರ್ತಿಯ ಕೇಸರಿ ಬ್ರಿಗೇಡ್ ಅವುಗಳಿಗೆ ಗಾಳಿಯೂದಿ ಬೆಂಕಿ ಹಬ್ಬಿಸಲು ಯತ್ನಿಸುತ್ತಿವೆ.

ಅದರಲ್ಲೂ ಸಾಲುಸಾಲು ಬರದ ತತ್ತರಕ್ಕೆ ಸಿಲುಕಿ ಇಲ್ಲಿನ ರೈತಾಪಿ ಮತ್ತು ಯುವಸಮೂಹ ಉದ್ಯೋಗವಿಲ್ಲದೆ ಕಂಗೆಟ್ಟು ದೂರದ ಮಹಾನಗರಗಳತ್ತ ಗುಳೇ ಹೊರಟ ನಂತರ ಅಳಿದುಳಿದ ಯುವಕರಿಗೆ ಬಲೆ ಬೀಸಿದ ಕೇಸರಿ ಬ್ರಿಗೇಡ್ ಅವರನ್ನು ಕೋಮು ಸೈನಿಕರನ್ನಾಗಿ ಪರಿವರ್ತಿಸುವ ಆಪರೇಷನ್‌ಗೆ ಕೈಹಾಕಿದೆ. ಕಳೆದ ವರ್ಷ ಕಾರ್ಗಿಲ್ ವಿಜಯೋತ್ಸವದ ನೆಪದಲ್ಲಿ ತಾನೇ ಸೈನ್ಯದಲ್ಲಿ ನಿಂತು ಯುದ್ಧ ಮಾಡಿದ್ದ ರೀತಿ ಭಾಷಣ ಬಿಗಿದ ಈ ಪೆಕ್ರವರ್ತಿ ಸುಳ್ಳುಬೆಲೆ ಕರುಳು ಕಿತ್ತು ಬರುವ ನಾಟಕವಾಡಿದ್ದ. ನಂತರ ಹೋಬಳಿ ಕೇಂದ್ರಗಳಲ್ಲೆಲ್ಲಾ ತನ್ನ ಹಸಿ ಸುಳ್ಳಿನ ಆಂಗಿಕ ಅಭಿಯಾನ ಪ್ರದರ್ಶಿಸಿ, ಅಲ್ಲೆಲ್ಲಾ ಯುವಾ ಬ್ರಿಗೇಡ್ ಘಟಕಗಳು ಮೊಳೆಯುವಂತೆ ಮಾಡಿಹೋಗಿದ್ದ. ಈತನ ಮೋದಿ ಮಹಾರಾಜ್ ಮಾಡಿದ ನೋಟು ಅಮಾನ್ಯೀಕರಣ ಎಂಬ ಯಡವಟ್ಟಿಗೆ ದೇಶ ಇವತ್ತಿಗೂ ಚೇತರಿಸಿಕೊಳ್ಳಲಾಗದ ಆರ್ಥಿಕ ಸಂಕಷ್ಟಕ್ಕೆ, ಉದ್ಯೋಗ ಲುಕ್ಸಾನಿನ ಭೀತಿಗೆ ಸಿಲುಕಿದ್ದರೆ ನೋಟು ಅಮಾನ್ಯೀಕರಣದಿಂದ ಕ್ಯಾಷ್‌ಲೆಸ್ ದುನಿಯಾ ಸೃಷ್ಟಿಯಾಗುತ್ತದೆ, ಅಲ್ಲದೇ ಕಪ್ಪುಹಣ ವಾಪಸ್ ತಂದರೆ ದೇಶದ ಪ್ರತಿ ರಸ್ತೆಗಳನ್ನು ಚಿನ್ನದಲ್ಲಿ ನಿರ್ಮಿಸಬಹುದೆಂಬ ಸುಳ್ಳು ಬೊಗಳಾಡಿಕೊಂಡು ಓಡಾಡಿದ್ದ ಪೆಕ್ರವರ್ತಿ ಸುಳ್ಳುಬೆಲೆಯ ನಿಜಬಣ್ಣ ಏನೆಂಬುದು ಪ್ರಗತಿಪರ ವಲಯಕ್ಕೆ ಚೆನ್ನಾಗಿಯೇ ತಿಳಿದಿದೆ.

ಹಾಗಾಗಿಯೇ ಆತ ಅಂಬೇಡ್ಕರ್ ಮತ್ತು ರಾಮಾನುಜಾಚಾರ್ಯರನ್ನು ಒಟ್ಟೊಟ್ಟಿಗೆ ಕರೆತಂದಿರುವುದರ ಹಿಂದೆ ಭಾರೀ ಕೋಮು ಪಿತೂರಿಯೇ ಅಡಗಿದೆ ಎಂಬುದನ್ನು ಪ್ರಗತಿಪರರು ಗ್ರಹಿಸಿದ್ದಾರೆ. ಮುಂಬರುವ 2018ರ ಎಲೆಕ್ಷನ್ ವೇಳೆಗೆ ಕೊಪ್ಪಳದಲ್ಲಿ ಕೋಮು ಯನ್ನು ದಿಗ್ಗೆನ್ನಿಸಿ ಅದರ ಬೆಂಕಿಯಲ್ಲಿ ಬೆಚ್ಚಗಾಗು ಕೇಸರಿ ಬ್ರಿಗೇಡ್‌ನ ಹುನ್ನಾರ. ಇದನ್ನು ವಿಫಲಗೊ ವುದಕ್ಕೆಂದೇ ಜಿಲ್ಲೆಯ ದಲಿತ ಪ್ರಗತಿಪರ ಸಂಘಟ ಜೆ.ಭಾರದ್ವಾಜ್, ತಿಪ್ಪಣಆರತಿ, ಪಿ.ಪೀರ್‌ಭಾಷಾ, ಡಿ. ಪೂಜಾರ್, ನಿರುಪಾದಿ ಬೆಣಕಲ್, ಎಚ್.ಎನ್ ಬಡಿಗ ಬಸವರಾಜ್ ಬಾದರ್ಲಿ, ಸಂತೋಷ್ ಎಚ್ ಮುಂತಾದವರು 'ಚಲೋ ಕಾರಟಗಿ' ಎಂಬ ಸಮಾವೇಶವನ್ನು ಜುಲೈ 2ರಂದು ನಡೆಸಲು ಸಜ್ಜಾಗಿ


ಯಾವ ಕಾರಟಗಿಯಲ್ಲಿ ನಿಂತು ಪೆಕ್ರವರ್ತಿ ಅಪದ್ಧ ನುಡಿದುಹೋಗಿದ್ದಾನೊ ಅದೇ ಕಾರಟಗಿಯಲ್ಲಿ ಸಮಾ ಮಾಡಿ ಸಂಘ ಪರಿವಾರ ಬಿತ್ತುತ್ತಿರುವ ಸುಳ್ಳುಗ ಬಯಲುಗೊಳಿಸುವುದು ಈ ಸಮಾವೇಶದ ಕಾಳಜಿ. ಅ ಅಂಬೇಡ್ಕರ್‌ರವರ ನೈಜ ಆಶಯಗಳನ್ನು ಜನತೆಗೆ ತಿಳಿ ಮೂಲಕ ಸಂಘಪರಿವಾರ ಮತ್ತು ಪೆಕ್ರವರ್ತಿ ಸುಳ್ಳುಬೆ ಮುಖವಾಡವನ್ನು ಬಯಲಿಗೆಳೆಯಲೂ ಈ ಸಮಾ ಸಾಕ್ಷಿಯಾಗಲಿದೆ.

ಶಾಂತಿ, ಸೌಹಾರ್ದತೆ, ನೆಮ್ಮದಿಯ ಪಾಠ ಹೇ ಆರೆಸ್ಸೆಸ್ ಪ್ರಭಾವ ದಟ್ಟವಾಗಿರುವ ಕಾರಟಗಿಯನ್ನೇ ಮಾಡಿಕೊಂಡಿರುವ ಪ್ರಗತಿಪರರು ಅಸ್ಪೃಶ್ಯ ಸಮುದಾಯ ಮಾತ್ರವಲ್ಲದೇ ಹಿಂದುಳಿದ ಮತ್ತು ಅಲ್ಪಸಂಖ್ಯ ಸಮುದಾಯಗಳನ್ನು ಒಟ್ಟು ಮಾಡುತ್ತಿದ್ದಾರೆ. ಜೊ ಕಾಯಂ ಶೋಷಿತರಾದ ಮಹಿಳೆಯರು, ಆದಿವಾಸಿ ರೈತರು ಮತ್ತು ಕಾರ್ಮಿಕರನ್ನು ಈ ಸಮಾವೇ ಸಂಘಟಿಸಲು ಸಜ್ಜುಗೊಂಡಿದ್ದಾರೆ. ವೈಚಾರಿಕ ದನಿ ಗುರುತಿಸಿಕೊಂಡಿರುವ ನಿಜಗುಣಾನಂದ ಸ್ವಾಮಿ ಉದ್ಘಾಟಿಸುತ್ತಿರುವ ಈ ಸಮಾವೇಶದಲ್ಲಿ ಚಿಂತಕ ಶಿವಸುಂದರ್, ಮೋಹನ್‌ರಾಜ್, ಕೆ.ನೀಲಾ, ಬಾ ಆರ್.ಮಾನಸಯ್ಯನವರೂ ಭಾಗವಹಿಸಲಿದ್ದಾರೆ. ಕೋಮುವಾದ ಮತ್ತು ಜಾತೀಯತೆಯ ವಿರುದ್ಧ ಪ್ರಗತಿಪರ ಮತ್ತು ದಲಿತ ಸಂಘಟನೆಗಳು ಒಗ್ಗ ನಡೆಸುತ್ತಿರುವ ಈ ಪ್ರಯತ್ನ ಯಶಸ್ವಿಯಾಗಬೇಕಿದೆ.

■ ಮುತ್ತುರಾ



ಪೆಕ್ರವರ್ತಿ ಸುಳ್ಳುಬೆಲೆ



ಜನ್ಮದಿನಾಚರಣೆಯ ಬ್ಯಾನರ್

ಸಮಾವೇಶದ ಆಶಯಗಳು

1. ಡಾ.ಬಾಬಾಸಾಹೇಬ್ ಅಂಬೇಡ್ಕರರ ವಿಚಾರಗಳನ್ನು ತಿರುಚಿ ಅಪವ್ಯಾಖ್ಯಾನ ಮಾಡುತ್ತಾ, ಧರ್ಮಾಂಧತೆ ರಾಜಕಾರಣಕ್ಕೆ ಬಾಬಾಸಾಹೇಬರ ಹೆಸರು ಹಾಗೂ ಭಾವಚಿತ್ರಗಳನ್ನು ದುರ್ಬಳಕೆ ಮಾಡಿಕೊಳ್ಳುತ್ತಿರುವ ಜಾತಿವಾ ಕೋಮುವಾದಿಗಳಿಗೆ ಎಚ್ಚರಿಕೆ ನೀಡುವುದು.
2. ದಲಿತ ಮತ್ತು ದಮನಿತ ಸಂಸ್ಕೃತಿಗಳ ಮೇಲೆ ನಡೆಯುತ್ತಿರುವ ದಾಳಿ ಮತ್ತು ಸಮುದಾಯಗಳ ಮೇ ನಡೆಯುತ್ತಿರುವ ದೌರ್ಜನ್ಯಗಳನ್ನು ತಡೆಯುವುದು.
3. ಭೂಮಿ, ವಸತಿ, ಶಿಕ್ಷಣ ಆರೋಗ್ಯ ಮತ್ತು ಉದ್ಯೋಗ ಮೊದಲಾದ ಮೂಲಭೂತ ಬೇಡಿಕೆಗಳ ಈಡೇರಿಕೆ ದಲಿತ ಮತ್ತು ದಮನಿತರ ಸಾಂವಿಧಾನಿಕ ಹಕ್ಕಿನ ಹೋರಾಟವನ್ನು ಮುಂದುವರಿಸುವುದು. ಮೀಸಲಾತಿಯ ಕಡಿತಗೊಳಿಸಿ ಕ್ರಮೇಣ ಕಿತ್ತು ಹಾಕಲು ನಡೆಯುತ್ತಿರುವ ಸಂಚನ್ನು ವಿಫಲಗೊಳಿಸುವುದು ಹಾಗೂ ಸಂವಿಧಾ ಆಶಯಗಳನ್ನು ಮೂಲೆಗುಂಪು ಮಾಡಲು ನಡೆಯುತ್ತಿರುವ ಹುನ್ನಾರಗಳನ್ನು ಬಯಲುಗೊಳಿಸುವುದು.
4. ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗಗಳಲ್ಲಿ ದಲಿತ ದಮನಿತರ ಸಂಖ್ಯಾ ಅನುಪಾತಾನುಸಾರ ಒಳಗೊ ಅವಕಾಶಕ್ಕಾಗಿ ಹಕ್ಕೊತ್ತಾಯ ಮಂಡಿಸುವುದು ಆ ಮೂಲಕ ಪ್ರಜಾಪ್ರಭುತ್ವವನ್ನು ನೈಜ ಜನಪ್ರಭುತ್ವವನ್ನಾಗಿಸ ಹೋರಾಟವನ್ನು ಮುಂದುವರಿಸುವುದು.
5. ದಲಿತ, ದಮನಿತ ಸಮುದಾಯ ಮತ್ತು ಸಂಘಟನೆಗಳ ಐಕ್ಯತೆಯನ್ನು ಗಟ್ಟಿಗೊಳಿಸಿಕೊಳ್ಳುವುದು ಹಾ ಸ್ವಾಭಿಮಾನದ ಸಂದೇಶವನ್ನು ಪ್ರಕಟಿಸುವುದು ಈ ಸಮಾವೇಶದ ಉದ್ದೇಶಗಳಾಗಿವೆ.

ವೈದ್ಯ ಕ್ಷೇತ್ರದ ಘನತೆಯನ್ನು ಉಳಿಸಿಕೊಳ್ಳಿ

ವಿವಿಧ ಆಸ್ಪತ್ರೆಗಳ ವರ್ಗೀಕರಣಕ್ಕೆ ಸಂಬಂಧಿಸಿದ ...ವು ವರ್ಗೀಕರಣದ ಬಗ್ಗೆ ಸ್ಪಷ್ಟವಾಗಿ ಹೇಳುತ್ತದೆ. ...ರ್ಗೀಕರಣ ಇರಬೇಕು ಎಂಬುದನ್ನು ...ಕವಾಗಿಯೇ ವ್ಯಾಖ್ಯಾನಿಸುತ್ತಿರುವ ಕಾರಣ, ಸಣ್ಣ ... ಗುರಾಣಿಯ ಹಿಂದೆ ದೊಡ್ಡ ಆಸ್ಪತ್ರೆಗಳು ...ಳ್ಳಲೆಂದೇ ಆಗಿದೆ.

...ಈ ಸಂದರ್ಭದಲ್ಲಿ ಇನ್ನೊಂದು ಅಂಶವನ್ನೂ ...ಬೇಕು. ಕಣ್ಣಿಗೆ ರಾಚುವಂತಹ ಉಲ್ಲಂಘನೆಗಳು ...ಆಸ್ಪತ್ರೆಗಳಿಗೆ ಮಾತ್ರ ಸೀಮಿತವಾಗಿಲ್ಲ. ಇತ್ತೀಚೆಗೆ ...ವಾಗಿ ನೂರಾರು ಮಹಿಳೆಯರ ಗರ್ಭಕೋಶ ...ತೆಗೆಸಿದ ಪ್ರಕರಣಗಳು ಸಂಭವಿಸಿದ್ದು ಇಂತಹ ಸಣ್ಣ ...ಮಧ್ಯಮ ಪ್ರಮಾಣದ ಆಸ್ಪತ್ರೆಗಳಲ್ಲೇ ಆಗಿದೆ. ಈ ...ಮತ್ತು ಮಧ್ಯಮ ಪ್ರಮಾಣದ ಆಸ್ಪತ್ರೆಗಳೇ ಸರ್ಕಾರೀ ... ಪೈಪೋಟಿ ನೀಡುತ್ತಾ, ಸರ್ಕಾರೀ ಆಸ್ಪತ್ರೆಗಳ ...ಸಾಲುಗಟ್ಟಿವೆ. ಹೆಚ್ಚಿನ ವೈದ್ಯರುಗಳ (ಎಲ್ಲಾ ಅಲ್ಲ) ...ಭಾವವು ಕಾರ್ಪೋರೇಟ್ ಮನಸ್ಥಿತಿ ಆಗಿದೆಯೇ ...ಎಂಬುದನ್ನು ಆ ಸಮುದಾಯವು ಆತ್ಮಾವಲೋಕನ ...ಳ್ಳಲಿ ಎಂದಷ್ಟೇ ಮನವಿ ಮಾಡಿಕೊಳ್ಳುತ್ತೇನೆ. ... ಆಸ್ಪತ್ರೆಗಳಿಗೆ ತಮ್ಮಲ್ಲಿನ ಹಾಸಿಗೆಗಳ ಸಂಖ್ಯೆ ... ಬಯಕೆ ಸದಾ ಕಾಡುತ್ತಿರುತ್ತದೆ. ಇವರಿಗೆ ಲ್ಯಾಬ್ ...ರ್‌ಗಳ ಜೊತೆ ನಿರಂತರ ನಂಟು ಇರುವುದು ...ನ್ನೂ ದೊಡ್ಡ ಕಾರ್ಪೋರೇಟ್ ಆಸ್ಪತ್ರೆಗಳಿಗೆ ರೆಫರ್ ... ವಿಚಾರದಲ್ಲಿ ಒಪ್ಪಂದಗಳಿರುವುದು ಸುಳ್ಳಲ್ಲ. ...ಸಣ್ಣ ಹಾಗೂ ದೊಡ್ಡ ಆಸ್ಪತ್ರೆಗಳ ನಡುವೆ ವ್ಯತ್ಯಾಸ ...ಇದೆ. ಆದರೆ ಇತರ ಕ್ಷೇತ್ರಗಳಲ್ಲಿ ಸಣ್ಣ ...ದಾರರಿಗೂ ಮತ್ತು ಕಾರ್ಪೋರೇಟ್ ಕ್ಷೇತ್ರಕ್ಕೂ ...ರೀತಿಯ ವ್ಯತ್ಯಾಸದ ಪ್ರಮಾಣವನ್ನೂ, ವೈದ್ಯಕೀಯ ...ಲ್ಲಿ ಇರುವ ವ್ಯತ್ಯಾಸವನ್ನೂ ನಾವು ಭಿನ್ನವಾಗಿ ...ಬೇಕು. ಪರಿಮಾಣದ ದೃಷ್ಟಿಯಿಂದ ಇದರಲ್ಲಿ ಹೆಚ್ಚು ...ಇದೆ. ಮನೋಭಾವ, ಉಲ್ಲಂಘನೆಗಳ ವಿಚಾರದಲ್ಲಿ ...ವ್ಯತ್ಯಾಸಗಳಿವೆ.

...ನ್ನು ರೋಗ ಚಿಕಿತ್ಸೆಯಲ್ಲಿ ಸ್ಟಾಂಡರ್ಡೈಸೇಷನ್ ...ರದು, ಏಕೆಂದರೆ ಸ್ಟಾಂಡರ್ಡೈಸೇಷನ್ ಎಂದರೇನೇ ...ಕೇಂದ್ರೀಕರಣ ಮತ್ತು ಕಾರ್ಪೋರೇಟೀಕರಣ ಎಂಬ ...ದೆ. ಇದೂ ಸಹ ಅರ್ಧ ಸತ್ಯ. ಪುರಾವೆ ಆಧಾರಿತ ...ಕ ವೈದ್ಯಕೀಯ ಪದ್ಧತಿಯಲ್ಲಿ ಸ್ಟಾಂಡರ್ಡೈಸೇಷನ್ ...ದು ಅತ್ಯಂತ ಅಗತ್ಯ. ಅದೇನೇ ಇದ್ದರೂ, ಈ ...ರ್ಡೈಸೇಷನ್ ಮತ್ತು ದರ ನಿಗದಿಯ ಸಂದರ್ಭದಲ್ಲಿ ...ಕಾರ್ಪೋರೇಟ್‌ಗಳದ್ದೇ ಪ್ರಾಬಲ್ಯ ಇರಬಾರದು.

... ಮತ್ತು ಸರ್ಕಾರೀ ವ್ಯವಸ್ಥೆಯನ್ನು ಒಂದೇ ...ಟುಲ್ಲಿಟ್ಟು ತೂಗಲು ಬರುವುದಿಲ್ಲ ಏಕೆ?

...07ರ ಕಾಯ್ದೆಯು ಖಾಸಗಿ ವೈದ್ಯಕೀಯ ಸಂಸ್ಥೆಗಳ ...ದ್ದಾಗಿತ್ತು. ಅದಕ್ಕೆ ತಿದ್ದುಪಡಿ ತರಲು ಸರ್ಕಾರ ...ತ್ತು, ಅದರಲ್ಲಿ ಸರ್ಕಾರೀ ವ್ಯವಸ್ಥೆಯನ್ನೂ ಸೇರಿಸ ...ು ಹೊರಟಿದ್ದು ವಿಕ್ರಮ್‌ಜಿತ್ ಸೇನ್ ಸಮಿತಿ. ...ನ್ನಾರ ಏಕೆ ನಡೆಸಿದಿರಿ ಎಂದು ಉತ್ತರಿಸಬೇಕಾದವರು, ...ಸರ್ಕಾರೀ ವ್ಯವಸ್ಥೆಯನ್ನು ಇದರಿಂದ ಏಕೆ ಕೈಬಿಟ್ಟಿರಿ ...ಕೂಗಾಡುತ್ತಿರುವುದು ವಿಚಿತ್ರವಾಗಿದೆ. ಹಾಗಾದರೆ, ...ೀ ವ್ಯವಸ್ಥೆಗೆ ಯಾವುದೇ ನಿಯಂತ್ರಣ ಬೇಡವೇ? ... ಬೇಕು. ಆದರೆ, ಖಾಸಗಿ ನಿಯಂತ್ರಣ ಕಾಯ್ದೆಯಡಿ ...ಅದನ್ನೂ ಸೇರಿಸಬೇಕೆಂದು ಅಬ್ಬರಿಸುತ್ತಿರುವವರನ್ನು ... ನಗಬೇಕೋ ಅಳಬೇಕೋ ಗೊತ್ತಾಗುತ್ತಿಲ್ಲ. ಏನೇ ...ಳಿದ್ದರೂ, ಸರ್ಕಾರೀ ವ್ಯವಸ್ಥೆಯ ಉದ್ದೇಶ ಸೇವೆ; ...ಮ ಉದ್ದೇಶ ಲಾಭ.

...ರ್ಕಾರೀ ವ್ಯವಸ್ಥೆಗೆ ಕೇವಲ ಚಿಕಿತ್ಸೆ ನೀಡುವ ಕೆಲಸ ... ಇರುವುದಿಲ್ಲ, ಅದಕ್ಕೆ ಖಾಯಿಲೆ ಬರದ ಹಾಗೆ ...ಟ್ಟುವ (prevention) ಹಾಗೂ ಆರೋಗ್ಯ ...ಕೊಂಡು (promotion) ಹೋಗುವ ಹಲವು ...ಕರ್ತವ್ಯಗಳಿರುತ್ತವೆ. ನೂರು ಬಗೆಯ ರಾಷ್ಟ್ರೀಯ ...ಗ್ಯ ಯೋಜನೆಗಳನ್ನು ಜಾರಿ ಮಾಡುವುದು ಅವರ ...ಜವಾಬ್ದಾರಿಯಾಗಿರುತ್ತದೆ ಮತ್ತು ಸರ್ಕಾರದ ನಿರ್ಲಕ್ಷ್ಯದ ...ದಿಂದಲೂ, ಖಾಸಗಿ ಕ್ಷೇತ್ರದ ಪ್ರಾಬಲ್ಯದ ಕಾರಣಕ್ಕೂ ಈ ...ಈಗಾಗಲೇ ಹಾಳಾಗಿದೆ. ಅದನ್ನು ಸರಿ ಮಾಡಲು ... ಹಾಕಲೇಬೇಕು. ಹಾಗೆ ನೋಡಿದರೆ, ಖಾಸಗಿಯವರ ...ನ್ನು ಕೇಳುತ್ತಿರುವ ಎಲ್ಲರೂ ಹೆಚ್ಚಿನ ಸಮಯವನ್ನು ...ಸುವುದು ಸರ್ಕಾರೀ ವ್ಯವಸ್ಥೆಯನ್ನು ಸರಿ ಮಾಡುವ ...ಬಹುದಲ್ಲೇ. ಆದರೆ, ಎರಡನ್ನೂ ಒಂದೇ ...ಟ್ಟು ತೂಗಲು ಬರುವುದಿಲ್ಲ.

...ರ್ಕಾರೀ ವ್ಯವಸ್ಥೆಯಲ್ಲಿ ನಿಯಂತ್ರಣಕ್ಕೆ, ಈಗ ಒಂದು ... ಸಹ ಇದೆ. ಗ್ರಾಮ ಮಟ್ಟದಲ್ಲಿ ಆರೋಗ್ಯ ಹಾಗೂ ನೈರ್ಮಲ್ಯ ಸಮಿತಿಗಳಿವೆ. ಇದಲ್ಲದೇ ಆರೋಗ್ಯ ರಕ್ಷಾ ಸಮಿತಿಗಳಿವೆ. ಜನಪ್ರತಿನಿಧಿಗಳು ಈ ಸಮಿತಿಗಳಲ್ಲಿದ್ದಾರೆ. ಈ ವ್ಯವಸ್ಥೆಯು ಒಂದು ಪ್ರಜಾತಾಂತ್ರಿಕ ಉತ್ತರದಾಯೀ ವ್ಯವಸ್ಥೆಯೇ ಆಗಿದ್ದರೂ, ಸರಿಯಾಗಿ ಕೆಲಸ ಮಾಡುತ್ತಿಲ್ಲ. ಇವನ್ನು ಸರಿ ಮಾಡುವ ಕೆಲಸ ಅತ್ಯಗತ್ಯವಾಗಿ ಆಗಬೇಕು. ಸ್ಟಾಂಡರ್ಡೈಸೇಷನ್, ಉತ್ತರದಾಯಿತ್ವ ಮತ್ತು ಹೆಚ್ಚಿನ ಅನುದಾನ ಬಿಡುಗಡೆಗೆ ಕ್ರಮ ಆಗಬೇಕು. ಆದರೆ, ಇವನ್ನು ಖಾಸಗಿಯ ಜೊತೆಗೆ ಸೇರಿಸಬಾರದು.



ದೊಡ್ಡ ಮತ್ತು ಸಣ್ಣ ಆಸ್ಪತ್ರೆಗಳಿಗೆ ಒಂದೇ ಮಾನದಂಡ ನಿಗದಿ ಮಾಡಿದರೆ, ಸಣ್ಣ ಆಸ್ಪತ್ರೆಗಳು ಮುಚ್ಚಿಕೊಂಡು ಹೋಗುತ್ತದೆ ಎಂದು ಕೆಲವರು ದೊಡ್ಡ ಗಂಟಲಲ್ಲಿ ಹೇಳುತ್ತಿದ್ದಾರೆ. ಹಾಗಾದರೆ, ಲಾಭಕೋರ ಖಾಸಗಿ ವ್ಯವಸ್ಥೆಗೂ, ಸೇವಾದೃಷ್ಟಿಯ ಸರ್ಕಾರೀ ಆಸ್ಪತ್ರೆಗಳಿಗೂ ಒಂದೇ ಮಾನದಂಡ ನಿಗದಿ ಮಾಡಿದರೆ, ಮೊದಲೇ ಹಾಳಾಗಿರುವ ಮತ್ತು ಅನುದಾನದ ಕೊರತೆಯಿಂದ ಬಳಲುತ್ತಿರುವ ಸರ್ಕಾರೀ ವ್ಯವಸ್ಥೆಯೂ ಮುಚ್ಚಿ ಹೋಗುವುದಿಲ್ಲವೇ? ಹಾಗೆ ಮುಚ್ಚಿ ಹೋದರೆ ಒಳ್ಳೆಯದೆಂದು ಕಾರ್ಪೋರೇಟ್ ವ್ಯವಸ್ಥೆ ಬಯಸುತ್ತಿರುವಾಗ, ಅದಕ್ಕೆ ದನಿಗೂಡಿಸುತ್ತಿರುವ ಸಣ್ಣ ಆಸ್ಪತ್ರೆಗಳು ಅಮಾಯಕರೇ ಅಥವಾ ನಿಮ್ಮ ಉದ್ದೇಶವೂ ಅದೇ ಆಗಿದೆಯೇ? ವಾಸ್ತವದಲ್ಲಿ ಸಣ್ಣ ಆಸ್ಪತ್ರೆಗಳ ಹೆಗಲ ಮೇಲೆ ಬಂದೂಕಿಟ್ಟು ಸರ್ಕಾರೀ ವ್ಯವಸ್ಥೆಯ ಮೇಲೆ ಗುಂಡು ಹಾರಿಸುತ್ತಿರುವ ಕಾರ್ಪೋರೇಟ್ ವ್ಯವಸ್ಥೆಯ ಉದ್ದೇಶ ಅದೇ ಆಗಿದೆ.

ಲೈಸೆನ್ಸ್‌ರಾಜ್ ತರುತ್ತದೆ; ಭ್ರಷ್ಟಾಚಾರ ಹೆಚ್ಚಾಗುತ್ತದೆ; ಇತ್ಯಾದಿ

ಈ ಭಾಷೆಯನ್ನು ಎಲ್ಲೋ ಕೇಳಿದಂತಿದೆ. ಹೌದು, ಈ ಭಾಷೆಯು ನಮ್ಮ ದೇಶದಲ್ಲಿ ಜಾಗತೀಕರಣ, ಉದಾರೀಕರಣ ನೀತಿಗಳನ್ನು ತರಲು, ಅದುವರೆಗೂ ಅಸ್ತಿತ್ವದಲ್ಲಿದ್ದ ಸರ್ಕಾರೀ ವ್ಯವಸ್ಥೆಯನ್ನು ಅಮಾನ್ಯಗೊಳಿಸಲು ಬಳಸಲಾಗಿತ್ತು. ಆಗ, ಖಾಸಗಿ ಪೈಪೋಟಿಯು ದೇಶದಲ್ಲಿ ಜನರಿಗೆ ಸ್ವರ್ಗವನ್ನು ತರುವ ಕುರಿತೂ ಸಾಕಷ್ಟು ಹೇಳಲಾಗಿತ್ತು. ಅಲ್ಲಿಂದಾಚೆಗೆ ಏನಾಯಿತು ಎಂಬುದನ್ನು ಎಲ್ಲರೂ ನೋಡಿದ್ದೇವೆ. ದೇಶದಲ್ಲಿ ಭ್ರಷ್ಟಾಚಾರ ಇದೆ; ಸರ್ಕಾರೀ ವ್ಯವಸ್ಥೆಯಲ್ಲೂ ಇದೆ. ಆದರೆ ಖಾಸಗಿ ಭ್ರಷ್ಟಾಚಾರವೆಂಬುದು, ಕಾರ್ಪೋರೇಟ್ ಲೂಟಿಯೆಂಬುದೂ ಅವ್ಯಾಹತವಾಗಿ ನಡೆಯುತ್ತಿದೆ. ಇದನ್ನು ಸಾಮಾನ್ಯವಾಗಿ ಭ್ರಷ್ಟಾಚಾರ ಎಂದು ಕರೆಯಲಾಗುವುದಿಲ್ಲ ಅಷ್ಟೇ. ಈ ಯಾವ ನಿಯಂತ್ರಕ ವ್ಯವಸ್ಥೆಯೂ ಇದುವರೆಗೆ ವೈದ್ಯರುಗಳನ್ನು ನಿಯಂತ್ರಣದಲ್ಲಿಡಲು ಶಕ್ತವಾಗಲಿಲ್ಲ ಎಂಬುದೇ ವಾಸ್ತವ.

ನಮ್ಮನ್ನು ವಿಚಾರಣೆ ಮಾಡಲು ಈ ಜಿ.ಪಂ ಸಿಇಒ ಯಾರು? ಅವರಿಗೇನು ಗೊತ್ತಾಗುತ್ತದೆ? ಎಂದು ಕೂಗಾಡುತ್ತಿರುವವರು ಅಧಿಕಾರಿಗಳ ಮೇಲೂ ಪ್ರಭಾವ ಬೀರುವಷ್ಟು ಶಕ್ತರು ಎಂಬುದು ಎಲ್ಲರಿಗೂ ಗೊತ್ತು. ಅದನ್ನು ಈ ಕಾಯ್ದೆಯು ತನ್ನಂತೆ ತಾನೇ ಬದಲಿಸುವುದಕ್ಕೆ ಆಗುವುದಿಲ್ಲ. ಜನರು ಜಾಗೃತರಾದರೂ, ಏನೂ ಮಾಡಲಾಗುತ್ತಿರಲಿಲ್ಲ, ಈಗ ಅವರಿಗೆ ಒಂದು ಕಾನೂನಿನ ಉಪಕರಣ ಸಿಗುತ್ತದೆ ಅಷ್ಟೇ. ಹಾಗೆ ನೋಡಿದರೆ, ರೋಗಿಗಳು ಹತಾಶೆಯಲ್ಲಿ ವೈದ್ಯರುಗಳ ಮೇಲೆ ದಾಳಿ ಮಾಡುವುದರ ಬದಲಿಗೆ ಈ ನಿಯಂತ್ರಕ ವ್ಯವಸ್ಥೆಯ ದೊರೆ ಹೋಗಿ, ವೈದ್ಯರುಗಳಿಗೆ ಇದರಿಂದ ಒಳ್ಳೆಯದಾಗುತ್ತದೆ.

ಜನಾರೋಗ್ಯ ಚಳವಳಿಯ ಮೇಲೆ ಏಕೆ ದಾಳಿ?

ಸರ್ಕಾರೀ ವ್ಯವಸ್ಥೆಯ ಸಬಲೀಕರಣಕ್ಕಾಗಿ ನಿರಂತರವಾಗಿ ಹೋರಾಡುತ್ತಾ, ಅನಗತ್ಯ ಮತ್ತು ಅಮಾನವೀಯ ಗರ್ಭಕೋಶ ಶಸ್ತ್ರಚಿಕಿತ್ಸೆಯ ವಿರುದ್ಧವೂ ಹೋರಾಡುತ್ತಾ ಬರುತ್ತಿರುವ ಕರ್ನಾಟಕ ಜನಾರೋಗ್ಯ ಚಳವಳಿಯು, ಕಾರ್ಪೋರೇಟ್ ವೈದ್ಯಕೀಯ ವ್ಯವಸ್ಥೆಯ ವಿರುದ್ಧ ಸಾಕಷ್ಟು ಕಾಲದಿಂದ ಕೆಲಸ ಮಾಡುತ್ತಿದೆ. ಅದರ ಕೇಂದ್ರ ತಂಡದಲ್ಲಿ ಒಂದು ಸಣ್ಣ ಗುಂಪಷ್ಟೇ ಇದ್ದರೂ, ವಿವಿಧ ಜನಪರ ಸಂಘಟನೆಗಳ ಸಹಯೋಗದಲ್ಲಿ ಹೈದ್ರಾಬಾದ್ ಕರ್ನಾಟಕದ ಹಳ್ಳಿಗಳಲ್ಲಿ, ತಾಂಡಾಗಳಲ್ಲಿ, ದಲಿತ ಕಾಲೋನಿಗಳಲ್ಲಿ ಜನರನ್ನು ಸಂಘಟಿಸುತ್ತಾ ಅದು ಹೋರಾಡುತ್ತಾ ಬಂದಿದೆ. ವಿಕ್ರಮ್‌ಜಿತ್ ಸೇನ್ ಸಮಿತಿಯಲ್ಲಿ ಅದರ ಪ್ರತಿನಿಧಿಗಳೂ ಇದ್ದರು. ಸದರಿ ಸಮಿತಿಯು ಜನಪರವಾದ್ದನ್ನೆಲ್ಲಾ ಮೂಲೆಗುಂಪು ಮಾಡುತ್ತಾ, ಖಾಸಗಿ ಲಾಬಿಯ ಪರವಾಗಿ ವರದಿಯನ್ನು ಸಿದ್ಧ ಮಾಡಿತ್ತು. ಸಮಿತಿ ಸಭೆಯ ಬಗ್ಗೆಯೂ ಸರಿಯಾಗಿ ಮಾಹಿತಿ ನೀಡದೇ ಅವರನ್ನು ಹೊರಗೆ ದೂಡುವ ಪ್ರಯತ್ನವೂ ನಡೆದಿತ್ತು. ಅಂತಿಮವಾಗಿ ಆರೋಗ್ಯ ಸಚಿವರು ಈ ವರದಿಯನ್ನಯ ಮಸೂದೆಯನ್ನು ಸಿದ್ಧಪಡಿಸಲಾಗುವುದೆಂದು ಪ್ರಕಟಿಸಿದರು. ಇದು ಜನಾರೋಗ್ಯ ಚಳವಳಿಯ ಸದಸ್ಯರಿಗೆ ಅತೀವ ನಿರಾಶೆಯನ್ನು ತಂದಿತ್ತು. ದೇವನೂರ ಮಹಾದೇವ, ಎಸ್.ಆರ್.ಹಿರೇಮಠ, ಡಾ.ಜಿ.ರಾಮಕೃಷ್ಣ ಮುಂತಾದವರ ಸಹಿಯೊಂದಿಗೆ ಮನವಿಪತ್ರವೊಂದನ್ನು ಹಿಡಿದು ಸಚಿವರನ್ನು ಭೇಟಿ ಮಾಡಲು ನಡೆಸಿದ ಇನ್ನಿಲ್ಲದ ಪ್ರಯತ್ನವೂ ವಿಫಲವಾಯಿತು.

ಕಡೆಗೆ, ಸಚಿವರು ವಿಧಾನಸೌಧದ ಒಂದು ಗೇಟಿನಿಂದ ಹೊರಬರಲಿದ್ದಾರೆ ಎಂಬುದನ್ನು ತಿಳಿದು, ಅಲ್ಲಿ ಕಾಯ್ದು ಅವರಿಗೆ ಮನವಿ ಸಲ್ಲಿಸಲಾಯಿತು. ಬೀದಿಯಲ್ಲಿ ನಿಂತೇ ಮಾತನಾಡಿದ ಸಚಿವರು ನೀಡಿದ ಆಶ್ವಾಸನೆಯು ಜನಾರೋಗ್ಯದ ಸದಸ್ಯರಲ್ಲಿ ಭರವಸೆ ಹುಟ್ಟಿಸಲಿಲ್ಲ. ಹೀಗಾಗಿ ಸಾರ್ವಜನಿಕವಾಗಿ ಇದರ ವಿರುದ್ಧ ಮಾತನಾಡಬೇಕೆಂದು ಮಾಧ್ಯಮಗಳ ಮುಖಾಂತರ ಟೀಕಿಸಲಾಯಿತು. ಮಸೂದೆ ಮಂಡನೆಯಾದ ದಿನವೇ ಪ್ರಜಾವಾಣಿಯಲ್ಲಿ, ಸರ್ಕಾರದ ವಿರುದ್ಧ ಜನಾರೋಗ್ಯ ಚಳವಳಿಯ ಸದಸ್ಯರ ಪತ್ರ ಪ್ರಕಟವಾಯಿತು! ಇದು ಅಸಲೀ ವಿಚಾರ.

ಆದರೆ, ಜನಾರೋಗ್ಯ ಚಳವಳಿಯು ಕಾರ್ಪೋರೇಟ್ ಲಾಬಿಯ ಪರವಾಗಿದೆ ಎಂತಲೂ, ಅವರು ಬೆಂಗಳೂರಿನಲ್ಲಿ ಕುಳಿತು ವಾರ್ಷಿಕ ವರದಿಗಳಿಗಾಗಿ ಈ ಥರದ ಲಾಬಿ ಮಾಡುತ್ತಾರೆಂತಲೂ, ಅವರು ಸಚಿವರ ಕೈಹಿಡಿದು ಇದನ್ನು ಬರೆಸಿದ್ದಾರೆಂತಲೂ ಕೆಲವರು ದೊಡ್ಡವರು ಬರೆದಿದ್ದಾರೆ. ಅವರಿಗೆ ಶುಭವಾಗಲಿ! ತಮ್ಮ ವೈಯಕ್ತಿಕ ಹಿತಾಸಕ್ತಿಗೆ ಧಕ್ಕೆ ಬಂದಾಗ, ಎಂತಹ ಮಟ್ಟಕ್ಕೂ ಕೆಲವರು ಇಳಿಯಬಹುದೆಂಬುದು ಇದರಿಂದ ಸಾಬೀತಾಯಿತು ಅಷ್ಟೇ. ವೈದ್ಯರುಗಳ ಮೇಲೆ ಹಲ್ಲೆ ನಡೆದಾಗಲೂ ತೋರದ ಐಕ್ಯತೆಯನ್ನು ತಮ್ಮ ಲಾಭಕ್ಕೆ ಚ್ಯುತಿ ಬರಬಹುದೆಂದು ವೈದ್ಯ ಸಮೂಹ ತೋರಿತು. ಎರಡೇ ದಿನದಲ್ಲಿ ಅವರು ಹಲವು ಎಂಎಲ್‌ಎಗಳ ಮೂಲಕ ಸರ್ಕಾರದ ಮೇಲೆ ಒತ್ತಡ ತಂದರು. ಒಂದು ದೊಡ್ಡ ಪ್ರತಿಭಟನೆಯನ್ನೂ ಆಯೋಜಿಸಿದರು. ಖಾಸಗಿ ಲಾಬಿಯ ಶಕ್ತಿ ಏನೆಂಬುದನ್ನು ಅದು ತೋರಿಸುತ್ತದೆ. ದುರಂತ ಏನೆಂದರೆ, ರೋಗಿಗಳು ಒಂದು ಸಮೂಹವಾಗಿ ಸಂಘಟಿತರಲ್ಲ, ಅಂತಹ ಅಸಂಘಟಿತ ಸಮೂಹದ ಪರವಾಗಿ ನಿರಂತರವಾಗಿ ಕೆಲಸ ಮಾಡುತ್ತಿರುವ ಕಾರ್ಯಕರ್ತರ ವಿರುದ್ಧ, ಪರಿಣಾಮದಲ್ಲಿ ಖಾಸಗಿ ಲಾಭಕೋರ ಲಾಬಿಯ ಪರ ಮಾಡುತ್ತಿರುವ ಟೀಕೆ ಒಳ್ಳೆಯದಲ್ಲ. ಟೀಕೆ ಹಾಗೂ ವಿಮರ್ಶೆಗಳಿಗೆ ಯಾರೂ ಅತೀತರಲ್ಲ, ದೃಷ್ಟಿಕೋನಗಳಲ್ಲೂ ವ್ಯತ್ಯಾಸವಿರಬಹುದು. ಆದರೆ, ಸುಳ್ಳುಗಳಿಂದ ಕೂಡಿದ ವ್ಯಕ್ತಿಗತ ನಿಂದನೆ ಹೆಚ್ಚು ಕಾಲ ಬಾಳುವುದಿಲ್ಲ.

ವೈದ್ಯ ಸಮೂಹ ಪ್ರಬುದ್ಧತೆ ತೋರಬೇಕು

ಒಂದುಕ್ಷಣ ಕಣ್ಣು ಮುಚ್ಚಿ ಯೋಚಿಸಿ. ನೋವು, ನರಳಾಟದೊಂದಿಗೆ ನಿಮ್ಮಲ್ಲಿಗೆ ಬರುವ, ಕೆಲವೊಮ್ಮೆ ಸಾವುಬದುಕಿನ ಹೊಯ್ದಾಟದಲ್ಲಿ ನಿಮ್ಮ ಮುಂದೆ ಇರುವ ರೋಗಿಗಳಿಗೆ ಈ ವೈದ್ಯಕೀಯ ವ್ಯವಸ್ಥೆಯ ಇವತ್ತಿನ ಸ್ವರೂಪ ನೋಡಿ ಏನನ್ನಿಸಬಹುದು? ಈಗಾಗಲೇ ಆರಂಭವಾಗಿರುವ ಸಾರ್ವಜನಿಕರ ಸಂಘರ್ಷ ಇನ್ನೂ ಮುಂದಕ್ಕೆ ಯಾವ ರೂಪ ತಾಳಬಹುದು? ನಮ್ಮದೇನು ಕ್ಷೌರಿಕರ ಕಸುಬೇ, ನಾವೇನು ಚಪ್ಪಲಿ ಹೊಲಿಯುವವರೇ ಎಂದು ನೀವುಗಳು ಕೇಳಿದ್ದೀರಿ. (ಪುರಾವೆಗಳನ್ನು ತೋರಿಸಬಹುದು). ಪ್ರತಿಭಟನೆಯ ರೂಪ ಏನಿರಬೇಕು ಎಂದು ಚರ್ಚಿಸುವಾಗ, ಬೂಟ್ ಪಾಲಿಶ್ ಮಾಡುವುದು ಇತ್ಯಾದಿಗಳು ವೈದ್ಯರುಗಳ ಸಮೂಹದಲ್ಲಿ ಬಂದು ಹೋಗಿವೆ. ಇವು ವಿವಿಧ ವೃತ್ತಿ ನಿರತರ ಕುರಿತು ನಿಮಗಿರುವ ಗೌರವ ಮತ್ತು ನಿಮ್ಮ ವೃತ್ತಿಯ ಕುರಿತು ಇರುವ ಸೊಕ್ಕು. ಎಲ್ಲಾ ವೃತ್ತಿಗಳಿಗೂ ಅದರದ್ದೇ ಆದ ಘನತೆ ಇರುತ್ತದೆ. ನಿಮ್ಮ ವೃತ್ತಿಯ ಘನತೆ ಇಳಿಯುತ್ತಿದೆ. ಆ ವೃತ್ತಿ ಘನತೆಯನ್ನು ಕಾಪಾಡಲು ಬೇಕಾದ ಆತ್ಮಾವಲೋಕನ ಒಳಗಿನಿಂದ ಬರುವುದು ಸಾಧ್ಯವೇ ಇಲ್ಲ. ಪ್ರಜಾಪ್ರಭುತ್ವದಲ್ಲಿ ಜನರಿಂದ ಆಯ್ಕೆಯಾದ ಸರ್ಕಾರವಲ್ಲದೇ ಇನ್ನಾರು ಇದನ್ನು ಸರಿದಿಕ್ಕಿನೆಡೆ ತರಬೇಕು?

ಎಲ್ಲಾ ವೈದ್ಯರೂ ಸುಲಿಗೆಕೋರರಲ್ಲ. ಸುಲಿಗೆಯಲ್ಲಿ ನಿರತರಾಗಿರುವವರು ಇದ್ದಾರೆ. ಕೆಲವರು ಹೆಚ್ಚು, ಕೆಲವರು ಕಡಿಮೆ. ಇದು ಲಾಭಕೋರ, ಅಮಾನವೀಯ ಖಾಸಗಿ ವೈದ್ಯಕೀಯ ವ್ಯವಸ್ಥೆಯ ಸೃಷ್ಟಿ. ಸುಭದ್ರ ಸರ್ಕಾರೀ ವ್ಯವಸ್ಥೆಯ ಗೈರುಹಾಜರಿಯ ಕಾರಣದಿಂದ ಬಲಗೊಂಡಿರುವ ಖಾಸಗಿ ವ್ಯವಸ್ಥೆ ಅದು. ಈ ವ್ಯವಸ್ಥೆ ಬದಲಾಗಬೇಕು. ಜನರ ನೋವನ್ನು, ನರಳಾಟವನ್ನು ಕಡಿಮೆ ಮಾಡುವ ಉದಾತ್ತವಾದ ವೃತ್ತಿಯಲ್ಲಿ ನಿರತರಾಗಿರುವವರು ಈ ಬದಲಾವಣೆಯ ಮುಂಚೂಣಿಯಲ್ಲಿ ನಿಲ್ಲಬೇಕು. ವೈದ್ಯರು ಮಾತ್ರವಲ್ಲಾ ವೈದ್ಯಕೀಯ ಕ್ಷೇತ್ರದ ಎಲ್ಲಾ ಪ್ರಜ್ಞಾವಂತರು ಇದರಲ್ಲಿ ಜೊತೆಯಾಗಬೇಕು. ಬನ್ನಿ, ಆ ನಿಟ್ಟಿನಲ್ಲಿ ಪ್ರಯತ್ನಿಸೋಣ. ■

ರಾಜಸ್ತಾನದ ಪಠ್ಯಪುಸ್ತಕಗಳಿಗೆ ಕೇಸರೀಕರಣ ಭಾಗ



■ ಸುರೇಶ್ ಭಟ್ ಬಾಕ್ರಬೈಲ್

1925ನೆ ಇಸವಿಯಲ್ಲಿ ಸ್ಥಾಪನೆಯಾದ ಸಂದರ್ಭದಲ್ಲಿ ಆರೆಸ್ಸೆಸ್‌ನ ಪ್ರಮುಖ ನಾಯಕರು ಒಂದು ಮಹತ್ವದ ನಿರ್ಣಯವನ್ನು ತೆಗೆದುಕೊಂಡಿದ್ದರು. ಮುಂದಿನ ನೂರು ವರ್ಷಗಳೊಳಗಾಗಿ ಭಾರತವನ್ನು ಹಿಂದೂ ರಾಷ್ಟ್ರವಾಗಿ ಪರಿವರ್ತಿಸುವ ನಿರ್ಣಯ ಅದಾಗಿತ್ತು. ಆ ಗುರಿಯನ್ನು ಸಾಧಿಸುವ ನಿಟ್ಟಿನಲ್ಲಿ ಮೊದಲ ಹೆಜ್ಜೆಯಾಗಿ ಸ್ಥಾಪಿತ ವ್ಯವಸ್ಥೆಯನ್ನು ಬುಡಮೇಲುಗೊಳಿಸುವ ರಹಸ್ಯ ಕಾರ್ಯಾಚರಣೆಗಳನ್ನು ದೇಶಾದ್ಯಂತ ಪ್ರಾರಂಭಿಸಲಾಯಿತು. ಸ್ವಾತಂತ್ರ್ಯದ ನಂತರವೂ ಮುಂದುವರಿದ ಈ ಚಟುವಟಿಕೆಗಳಲ್ಲಿ ಕೋಮು ಸಂಘರ್ಷಗಳ ಮೂಲಕ ಸಮಾಜದ ಧ್ರುವೀಕರಣ; ಇತಿಹಾಸದ ತಿರುಚುವಿಕೆ; ನ್ಯಾಯಾಂಗ, ಕಾರ್ಯಾಂಗ, ಮಾಧ್ಯಮ, ಸರಕಾರಿ ಸಂಸ್ಥೆಗಳು, ಪೊಲೀಸ್ ಇಲಾಖೆ, ಗುಪ್ತಚರ ಇಲಾಖೆ, ಸೇನೆ, ಶಿಕ್ಷಣ ಮೊದಲಾದ ಕ್ಷೇತ್ರಗಳಲ್ಲಿ ಆರೆಸ್ಸೆಸ್ಸಿಗರ ತೂರಿಸುವಿಕೆ ಇತ್ಯಾದಿಗಳು ಸೇರಿವೆ. ಪಠ್ಯಪುಸ್ತಕಗಳ ಕೇಸರೀಕರಣವೂ ಇದೇ ಚಟುವಟಿಕೆಗಳ ಪ್ರಮುಖ ಅಂಶಗಳಲ್ಲೊಂದಾಗಿದ್ದು ಅದರ ಉದ್ದೇಶ ಮುಂದಿನ ಪೀಳಿಗೆಗಳ ಮಿದುಳನ್ನು ತೊಳೆದು ಹಿಂದೂತ್ವ ಸಿದ್ಧಾಂತವನ್ನು ಒಪ್ಪಿಕೊಳ್ಳುವಂತೆ ಮಾಡುವುದಾಗಿದೆ. ಇದಕ್ಕೆ ಪೂರಕವಾಗಿ ಶಾಲೆ ಕಾಲೇಜುಗಳ ಶಿಕ್ಷಕ, ಶಿಕ್ಷಕಿಯರಾಗಿ, ಪಠ್ಯಪುಸ್ತಕ ರಚನಾ ಸಮಿತಿಗಳ ಸದಸ್ಯರಾಗಿ ಸಾಕಷ್ಟು ಸಂಖ್ಯೆಯ ಆರೆಸ್ಸೆಸ್ಸಿಗರು ಅಥವಾ ಹಿಂದೂತ್ವ ಸಿದ್ಧಾಂತದ ಬೆಂಬಲಿಗರನ್ನು ತುಂಬಲಾಗಿದೆ.

ಶಿಕ್ಷಣಕ್ಷೇತ್ರದ ಕೇಸರೀಕರಣ

2014ರಲ್ಲಿ ಕೇಂದ್ರದಲ್ಲಿ ಮೋದಿ ಸರ್ಕಾರದ ಆಡಳಿತ ಶುರುವಾದ ನಂತರದಲ್ಲಿ ಆರೆಸ್ಸೆಸ್‌ನ ಪ್ರಯತ್ನಗಳಿಗೆ ಆನೆಯ ಬಲ, ಚಿರತೆಯ ವೇಗ ಬಂದಿದೆ. ಅದೀಗ ತನ್ನ ಅಜೆಂಡಾವನ್ನು ಜಾರಿಗೊಳಿಸಲು ಎಲ್ಲಿಲ್ಲದ ಹುಮ್ಮಸ್ಸಿನಿಂದ ಶ್ರಮಿಸುತ್ತಿದೆ. ಹಿಂದೂತ್ವವಾದಿಗಳು ಶಾಲೆಗಳಲ್ಲಿ ಮತ್ತು ಶಾಖೆಗಳಲ್ಲಿ ಸುಲಭದಲ್ಲಿ ಪ್ರಭಾವಕ್ಕೊಳಗಾಗುವ ಮಕ್ಕಳಿಗೆ ಅವೈಜ್ಞಾನಿಕ ವಿಚಾರಗಳನ್ನು ಕಲಿಸುವುದರೊಂದಿಗೆ ಅವರ ಮನಸ್ಸಿನಲ್ಲಿ ತಮ್ಮ ವಿನಾಶಕಾರಿ ಸಿದ್ಧಾಂತವನ್ನು ಬಿತ್ತುತ್ತಿದ್ದಾರೆ. ಭಾರತದ ಜಾತ್ಯತೀತ ಪರಂಪರೆಯನ್ನು ನಾಶಪಡಿಸುತ್ತಿದ್ದಾರೆ. ಆ ಮೂಲಕ ಮಕ್ಕಳ ಮತ್ತು ದೇಶದ ಭವಿಷ್ಯದ ಜತೆ ಚೆಲ್ಲಾಟವಾಡುತ್ತಿದ್ದಾರೆ. ಬಿಜೆಪಿ ಆಡಳಿತವಿರುವ ಜಾರ್ಖಂಡ, ಛತ್ತೀಸ್‌ಗಢ, ಗುಜರಾತ್ ಮೊದಲಾದ ರಾಜ್ಯಗಳಲ್ಲಿ ಶಾಲಾ ಪಠ್ಯಪುಸ್ತಕಗಳು ಈಗಾಗಲೆ ಪೂರ್ತಿ ಕೇಸರೀಕರಣಕ್ಕೆ ತುತ್ತಾಗಿವೆ. ಇದೀಗ ರಾಜಸ್ತಾನದ ಸರದಿ. ರಾಜಸ್ತಾನದಲ್ಲಿ ಶಾಲಾ ಯೂನಿಫಾರಂನ ಬಣ್ಣವನ್ನು ಸಮೇತ ಬದಲಾಯಿಸಿ ಆರೆಸ್ಸೆಸ್ ಯೂನಿಫಾರಂನ ಬಣ್ಣಕ್ಕೆ ಸಮೀಪವಿರುವಂತೆ ಮಾಡಲಾಗಿದೆ!


ರಾಜಸ್ತಾನದಲ್ಲಿ ಪಠ್ಯಪುಸ್ತಕಗಳ ಕೇಸರೀಕರಣ

ರಾಜಸ್ತಾನದಲ್ಲಿ ಪಠ್ಯಪುಸ್ತಕಗಳ ರಚನೆ ಮತ್ತು ಕಾಲಕಾಲಕ್ಕೆ ಅವುಗಳ ಪರಿಷ್ಕರಣೆಯ ಜವಾಬ್ದಾರಿಯನ್ನು ರಾಜಸ್ತಾನ ಮಾಧ್ಯಮಿಕ ಶಿಕ್ಷಣ ಕಾಯ್ದೆ 1957ರ ಅಡಿಯಲ್ಲಿ ರಾಜ್ಯದ ಮಾಧ್ಯಮಿಕ ಶಿಕ್ಷಣ ಮಂಡಳಿ ಸ್ಥಾಪಿಸುವ ಸಮಿತಿಯೊಂದಕ್ಕೆ ವಹಿಸಲಾಗುತ್ತದೆ. ಈ ಬಾರಿ ಪರಿಷ್ಕರಣೆಗೊಳಗಾಗಿರುವ 10 ಮತ್ತು 12ನೆ ತರಗತಿಯ ಸಮಾಜ ವಿಜ್ಞಾನ ಪಠ್ಯಪುಸ್ತಕಗಳಲ್ಲಿ ಮೋದಿ ಸರ್ಕಾರದ ಅರ್ಥಾತ್ ಆರೆಸ್ಸೆಸ್‌ನ ಕೈವಾಡವನ್ನು ಸ್ಪಷ್ಟವಾಗಿ ಗುರುತಿಸಬಹುದಾಗಿದೆ. ಈ ಪಠ್ಯಪುಸ್ತಕಗಳಲ್ಲಿ ಸೇರ್ಪಡೆಯಾಗಿರುವ ಹೊಸ ಅಧ್ಯಾಯಗಳು ಯಾವುವೆಂದು ನೋಡಿದರೆ ಎಲ್ಲವೂ ಅರ್ಥವಾಗುತ್ತದೆ. ಹೊಸ ಅಧ್ಯಾಯಗಳು ಮೋದಿ ಸರ್ಕಾರದ ಉಪಕ್ರಮಗಳಾದ ನೋಟು ರದ್ದತಿ, ಮೇಕ್ ಇನ್ ಇಂಡಿಯಾ, ಮಾಂಸಾಹಾರದಿಂದ ಆರೋಗ್ಯದ ಮೇಲಾಗುವ ದುಷ್ಪರಿಣಾಮಗಳು, ಉಗ್ರಗಾಮಿ ಚಟುವಟಿಕೆಗಳ ಕುರಿತು ಮಾಧ್ಯಮಗಳ ವರದಿಗಾರಿಕೆ, ಪ್ರಧಾನಿಯ ವಿದೇಶ ಭೇಟಿಗಳು, ನಗದುರಹಿತ ವಹಿವಾಟು, ನೀತಿ ಆಯೋಗ, 16ನೆ ಲೋಕಸಭಾ ಚುನಾವಣೆಗಳು, ಸ್ವಚ್ಛ ಭಾರತ ಅಭಿಯಾನ, ಪ್ಯಾರಿಸ್ ಒಪ್ಪಂದ ಮೊದಲಾದ ವಿಷಯಗಳ ಕುರಿತಾಗಿವೆ! ಅಧ್ಯಾಯಗಳ ಕೊನೆಯಲ್ಲಿರುವ ಪ್ರಶ್ನೆಗಳು ಕೂಡಾ ವಿಮರ್ಶಾತ್ಮಕ ವಿಶ್ಲೇಷಣೆಗಳನ್ನು ಪ್ರೋತ್ಸಾಹಿಸುವ ರೀತಿಯಲ್ಲಿಲ್ಲ. ವಿದ್ಯಾರ್ಥಿಗಳಿಗೆ ಈ ಉಪಕ್ರಮಗಳ ಮತ್ತೊಂದು ಮಗ್ಗುಲನ್ನು ಪ್ರಶ್ನಿಸಲು ಯಾವುದೆ ಅವಕಾಶವನ್ನೂ ಒದಗಿಸಲಾಗಿಲ್ಲ. ಹೊಸದಾಗಿ ಸೇರ್ಪಡೆಯಾಗಿರುವ ಪ್ರಶ್ನೆಗಳನ್ನು ಕೊಂಚ ನೋಡಿ:

* ಸಬ್ ಕಾ ಸಾಥ್ ಸಬ್ ಕಾ ವಿಕಾಸ್ ಘೋಷಣೆಯನ್ನು ರಚಿಸಿದವರಾರು?
* ಪ್ರಧಾನಿ ಮೋದಿಯವರು ಪಾಕಿಸ್ತಾನದ ಜೊತೆ ಸಂಬಂಧಗಳನ್ನು ಸುಧಾರಿಸಲು ಏನೆಲ್ಲ ಮಾಡಿದ್ದಾರೆ?
* ಪ್ರಧಾನಿ ಮೋದಿಯವರು ತಮ್ಮ ನೇಪಾಳ ಭೇಟಿಯ ಸಂದರ್ಭದಲ್ಲಿ ನೇಪಾಳಕ್ಕೆ ಯಾವ ರೀತಿ ಭರವಸೆ ನೀಡಿದರು?
* ನೋಟು ರದ್ಧತಿಯನ್ನು ಯಾತಕ್ಕೋಸ್ಕರ ಜಾರಿಗೊಳಿಸಲಾಯಿತು?
* ಮೋದಿ ಸರ್ಕಾರದ ನಾಲ್ಕು ಅಭಿವೃದ್ಧಿ ಯೋಜನೆಗಳನ್ನು ಹೆಸರಿಸಿ.
* ಸಾವರ್ಕರರು ಸ್ವಾತಂತ್ರ್ಯ ಹೋರಾಟಕ್ಕೆ ನೀಡಿರುವ ಕೊಡುಗೆಗಳೇನು?

12ನೇ ತರಗತಿಯ ರಾಜಕೀಯ ಶಾಸ್ತ್ರ ಪಠ್ಯಪುಸ್ತಕ

ಭ್ರಷ್ಟಾಚಾರ ಕುರಿತ ಅಧ್ಯಾಯದಲ್ಲಿ ನೋಟು ರದ್ಧತಿಯ ಕ್ರಮವನ್ನು ವಿವರಿಸಿರುವುದು ಹೀಗೆ: "ಅರ್ಥಶಾಸ್ತ್ರದ ಚರಿತ್ರೆಯಲ್ಲಿ ಅದನ್ನು 'ಕಪ್ಪುಹಣದ ನಿರ್ಮೂಲನ' ಎಂದು ತಿಳಿಯಲಾಗಿದೆ. ಅದು ಕಪ್ಪುಹಣವನ್ನು ಮರಳಿ ಪಡೆಯಲು, ಭ್ರಷ್ಟಾಚಾರದ ವಿರುದ್ಧ ಹೋರಾಡಲು, ಉಗ್ರಗಾಮಿ ಸಂಘಟನೆಗಳಿಗೆ ಹಣಕಾಸು ಪೂರೈಕೆಯನ್ನು ನಿಲ್ಲಿಸಲು, ಚುನಾವಣೆಗಳಲ್ಲಿ ಕಪ್ಪುಹಣ ಬಳಕೆಯನ್ನು ತಡೆಗಟ್ಟಲು ಕೇಂದ್ರ ಸರಕಾರ ಕೈಗೊಂಡ ಚಾರಿತ್ರಿಕ ನಿರ್ಧಾರ." ಆದರೆ ಇಡೀ ಪಠ್ಯಪುಸ್ತಕದಲ್ಲಿ ಎಲ್ಲೂ ನೋಟು ರದ್ದತಿಯಿಂದ ಹಠಾತ್ತಾಗಿ ನಗದಿನ ಕೊರತೆ ಉಂಟಾಗಿ ಜನ ಅನುಭವಿಸಿದ ಬವಣೆಗಳ ಬಗ್ಗೆ, ಪ್ರಧಾನವಾಗಿ ನಗದು ವ್ಯವಹಾರಗಳಿ ನಡೆಯುವ ಅನೌಪಚಾರಿಕ ವಲಯದ ಮೇಲಾದ ಪರಿಣಾಮಗಳ ಬಗ್ಗೆ, ಬೇಡಿಕೆ ಕಡಿಮೆಯಾಗಿರುವ ಬಗ್ಗೆ, ಇನ್ನಿತರ ಋಣಾತ್ಮಕ ಪರಿಣಾಮಗಳ ಬಗ್ಗೆ ಒಂದೇ ಒಂದು ವಾಕ್ಯವೂ ಇಲ್ಲ.



11ನೇ ತರಗತಿಯ ರಾಜಕೀಯ ಶಾಸ್ತ್ರ

ಇದರಲ್ಲಿ ಕಾಂಗ್ರೆಸ್ ಪಕ್ಷವನ್ನು ಸ್ಥಾಪಿಸಿದವರು ಬಂಡವಾಳಶಾಹಿಗಳು ಮತ್ತು ಮೇಲ್ಮಧ್ಯಮ ವರ್ಗಗಳು ಎಂದು ಹೇಳುವುದರೊಂದಿಗೆ ಅದು ಬ್ರಿಟಿಷ್ ಸಾಮ್ರಾಜ್ಯದ ಕೈಗೂಸಾಗಿತ್ತು ಎಂದು ಬಣ್ಣಿಸಲಾಗಿದೆ.

10ನೆ ತರಗತಿಯ ಸಮಾಜ ವಿಜ್ಞಾನ

ಈ ಪಠ್ಯಪುಸ್ತಕದಲ್ಲಿ ಭಾರತದ ಸ್ವಾತಂತ್ರ್ಯ ಚಳವಳಿಯ ಕುರಿತು ಒಂದು ಅಧ್ಯಾಯ ಇದೆ. ಅದರಲ್ಲಿ "ಕಾಂಗ್ರೆಸ್ ಪಕ್ಷದ ಬೆಳವಣಿಗೆಯ ಪ್ರಥಮ ಹಂತದಲ್ಲಿ ನಾಯಕರಾಗಿದ್ದವರೆಂದರೆ ಜನಸಾಮಾನ್ಯರೊಂದಿಗೆ ಸಂಪರ್ಕ ಸಾಧಿಸಲಾಗದ ಮಧ್ಯಮ ವರ್ಗದ ಶ್ರೀಮಂತ ಬುದ್ಧಿಜೀವಿಗಳು. ಈ ಉದಾರವಾದಿಗಳು ಬ್ರಿಟಿಷ್ ಆಡಳಿತವನ್ನು ಶಾಂತಿ ಸುವ್ಯವಸ್ಥೆಯ ಸಂಕೇತವೆಂದು ಪರಿಗಣಿಸಿದರು. ಅದಿಲ್ಲವಾದಲ್ಲಿ ದೇಶದಲ್ಲಿ ಅವ್ಯವಸ್ಥೆ ಉಂಟಾಗಲಿದೆ ಎಂದು ಭಯಪಟ್ಟರು. ಆದುದರಿಂದ ಅವರು ಬ್ರಿಟಿಷ್ ಆಡಳಿತದ ಪರವಾಗಿ ಪ್ರಚಾರ ನಡೆಸಿದರು. ಆ ಮೂಲಕ ಅದನ್ನು ಬಲಪಡಿಸಲು ಮುಂದಾದರು. ಆ ಹಂತದಲ್ಲಿ ಅವರು ಸ್ವಾತಂತ್ರ್ಯಕ್ಕಾಗಿ ಆಗ್ರಹಿಸಲೇ ಇಲ್ಲ" ಎಂದು ಬರೆಯಲಾಗಿದೆ.

ಗಮನಾರ್ಹವಾಗಿ ಸಾವರ್ಕರ್ ವಿಷಯಕ್ಕೆ ತುಂಬಾ ಸ್ಥಳಾವಕಾಶ ನೀಡಲಾಗಿದೆ. 'ವೀರ' ಸಾವರ್ಕರ್ ದೇಶದ ಸ್ವಾತಂತ್ರ್ಯಕ್ಕಾಗಿ ಮಾಡಿದ 'ಅಜೀವ ತ್ಯಾಗಗಳು ವರ್ಣನಾತೀತ' ಎಂದು ಬಣ್ಣಿಸಲಾಗಿದೆ. ಮಾತ್ರವಲ್ಲ 'ಎರಡೆರಡು ಬಾರಿ ಜೀವಾವಧಿ ಶಿಕ್ಷೆಗೊಳಗಾದ ಸಾವರ್ಕರ್, ದೇಶ ವಿಭಜನೆಯನ್ನು ತಡೆಯಲು ಅವಿಶ್ರಾಂತವಾಗಿ ದುಡಿದ ಏಕೈಕ ಕ್ರಾಂತಿಕಾರಿ' ಎನ್ನಲಾಗಿದೆ. ಜವಾಹರ್‌ಲಾಲ್ ನೆಹರೂರನ್ನು ಮೂಲೆಗೊತ್ತಲಾಗಿದೆ. ಅಸಹಕಾರ, ನಾಗರಿಕ ಅವಿಧೇಯತೆ, ಕ್ವಿಟ್ ಇಂಡಿಯ ಚಳವಳಿಗಳನ್ನು ವಿವರಿಸುವ ಸಂದರ್ಭದಲ್ಲಿ ಈ ಎಲ್ಲಾ ಚಳವಳಿಗಳ ರೂವಾರಿಯಾದ ಗಾಂಧಿಯ ಬಗ್ಗೆ ತೀರ ಚಿಕ್ಕದಾಗಿ ಬರೆಯಲಾಗಿದೆ. ಗಮನಾರ್ಹವಾಗಿ ಎಲ್ಲೂ ಗಾಂಧಿ ಹತ್ಯೆಯ ಉಲ್ಲೇಖವೆ ಇಲ್ಲ.

10ನೆ ತರಗತಿಯ ದೈಹಿಕ ಮತ್ತು ಆರೋಗ್ಯ ಶಿಕ್ಷಣ

ಇದರಲ್ಲಿ ಮಾಂಸಾಹಾರದಿಂದ ಶರೀರಕ್ಕೆ ಹಾನಿಯಾಗುತ್ತದೆ ಎಂದು ಬೋಧಿಸಲಾಗಿದೆ. ಪಠ್ಯಪುಸ್ತಕದ ಹಿಂದಿನ ಆವೃತ್ತಿಯಲ್ಲಾದರೆ ಕೊಬ್ಬು ಪ್ರೊಟೀನ್ ಮತ್ತು ಮಿನರಲ್‌ಗಳ ಮೂಲಗಳು ಯಾವುವು ಎಂಬ ಪಟ್ಟಿಯಲ್ಲಿ ಮಾಂಸ ಉತ್ಪನ್ನಗಳೂ ಇದ್ದವು. ಆದರೆ ನೂತನ ಪರಿಷ್ಕೃತ ಆವೃತ್ತಿಯಲ್ಲಿ ಮಾಂಸ ಉತ್ಪನ್ನಗಳಿಗೆ ಖೊಕ್ ನೀಡಲಾಗಿದ್ದು ಕೇವಲ ಮೊಟ್ಟೆಯನ್ನಷ್ಟೆ ಉಳಿಸಿಕೊಳ್ಳಲಾಗಿದೆ. ಇದಲ್ಲದೆ 'ಯಾವ ಹೊತ್ತಿನಲ್ಲಿ ತಿನ್ನಬೇಕು', 'ಊಟಕ್ಕೆ ಮೊದಲು ಯಾವ ಮಂತ್ರವನ್ನು ಜಪಿಸಬೇಕು', 'ಪಾಶ್ಚಿಮಾತ್ಯ ಸಂಸ್ಕೃತಿ ಹೇಗೆ ನಮ್ಮ ಕುಟುಂಬಗಳನ್ನು ಒಡೆಯುತ್ತಿದೆ ಮತ್ತು ಹೊಸ ಪೀಳಿಗೆಯಲ್ಲಿ ಸಂಸ್ಕಾರದ ಕೊರತೆಗೆ ಕಾರಣವಾಗಿದೆ' ಎಂಬ ವಿಷಯಗಳ ಮೇಲೆ ಸವಿಸ್ತಾರವಾಗಿ ಬರೆಯಲಾಗಿದೆ.

10ನೆ ತರಗತಿಯ ಇಂಗ್ಲಿಷ್ ಪಠ್ಯ ಗೋಲ್ಡನ್ ರೇಸ್

ಈ ಪುಸ್ತಕದಲ್ಲಿ ಭಾರತೀಯ ಕವಿ ತೋರುದತ್ ಬರೆದ ಪದ್ಯವೊಂದಿದೆ. ಅದರ ಹೆಸರು 'ಕಮಲ'. ಅದು ಕಮಲವನ್ನು ಭಾರತದ ದೇವ, ದೇವಿಯರ ಅಚ್ಚುಮೆಚ್ಚಿನ ಹೂವು ಎಂಬುದಾಗಿ ಚಿತ್ರಿಸುತ್ತದೆ. 'ಕಮಲದ ಗೆಲುವು ಭಾರತೀಯ ಸಂಸ್ಕೃತಿಯ ಗೆಲವು' ಎಂದು ಬಣ್ಣಿಸುತ್ತದೆ. ಪದ್ಮಶ್ರೀ, ಪದ್ಮಭೂಷಣ ಇತ್ಯಾದಿ ಅನೇಕ ಪ್ರಶಸ್ತಿಗಳಿಗೆ ಕಮಲದ ಹೆಸರಿಡಲಾಗಿರುವ ವಿಚಾರವನ್ನು ಅರುಹುತ್ತದೆ. ಗುಲಾಬಿ, ಕಮಲ ಮತ್ತು ನೈದಿಲೆ ಹೂವುಗಳು ಯಾರು ಹೆಚ್ಚು ಸುಂದರಿ ಎಂಬ ವಿಷಯದಲ್ಲಿ ಜಗಳಾಡಿಕೊಂಡಾಗ ಆ ಸೌಂದರ್ಯ ಸ್ಪರ್ಧೆಯ ಕೊನೆಯಲ್ಲಿ ಸಸ್ಯ ದೇವಿ ಕಮಲವನ್ನು ಅತ್ಯುಚ್ಚ ಸೌಂದರ್ಯದ ಹೂವನ್ನಾಗಿ ಆರಿಸುತ್ತಾಳೆಂದು ಕವಿ ಹೇಳುತ್ತಾನೆ. ಅಧ್ಯಾಯದ ಕೊನೆಯಲ್ಲಿ ನೀಡಲಾಗಿರುವ ಪ್ರಶ್ನೆಯೊಂದು ಹೀಗಿದೆ: "ಭಾರತೀಯ ಸಮಾಜ ಕಮಲವನ್ನು ಹೇಗೆ ಸಾಂಸ್ಕೃತಿಕ ಲಾಂಛನವಾಗಿ ಪರಿಗಣಿಸುತ್ತದೆ?" ಅಂದಹಾಗೆ ನಮಗೆಲ್ಲರಿಗೂ ತಿಳಿದಿರುವಂತೆ ಕಮಲ ಬಿಜೆಪಿಯ ಚುನಾವಣಾ ಚಿಹ್ನೆಯಾಗಿದೆ!

'ನೆರೆಯ ರಾಷ್ಟ್ರಗಳೊಂದಿಗೆ ಭಾರತದ ಸಂಬಂಧ' ಎಂಬ ಅಧ್ಯಾಯದಲ್ಲಿ ಪ್ರಧಾನಿ ಮೋದಿಯ ಪಾಕಿಸ್ತಾನ, ಚೀನಾ, ನೇಪಾಳ ಭೇಟಿಗಳ ಕುರಿತು ಹೇಳಲಾಗಿದೆ. ಪಾಕಿಸ್ತಾನವನ್ನು ವಿಶೇಷವಾಗಿ ಉಲ್ಲೇಖಿಸಿ ಚೀನಾ, ನೇಪಾಳ ಜೊತೆಗಿನ ಒಪ್ಪಂದಗಳನ್ನೂ ಪಠ್ಯದಲ್ಲಿ ಸೇರಿಸಲಾಗಿದೆ. 'ಪಾಕಿಸ್ತಾನದ ಜತೆ ಮೋದಿ ಸರ್ಕಾರದ ಸಂಬಂಧಗಳು' ಎಂಬ ತಲೆಬರಹದ ಲೇಖನದಲ್ಲಿ ಮೋದಿಯ ಪ್ರಮಾಣವಚನ ಸ್ವೀಕಾರ ಸಮಾರಂಭಕ್ಕೆ ಪಾಕಿಸ್ತಾನಿ ಪ್ರಧಾನಿ ನವಾಜ್ ಷರೀಫ್‌ರನ್ನು ಆಹ್ವಾನಿಸಿರುವುದು, 18ನೆ ಸಮ್ಮೇಳನದಲ್ಲಿ ಅವರಿಬ್ಬರ ನಡುವೆ ... ನಡೆಯುದಿರುವುದು, ಮೋದಿ ಬಲೂಚಿಸ್ತಾ... ಮಾನವಹಕ್ಕುಗಳ ಬಗ್ಗೆ ಮಾತಾಡಿರುವುದು, ... ಹುಟ್ಟುಹಬ್ಬಕ್ಕೆ ಲಾಹೋರಿಗೆ ಅಚ್ಚರಿಯ ಭೇಟಿ ... ವುದು, ಪಠಾಣ್‌ಕೋಟ್ ದಾಳಿ, ಉಗ್ರರ ಉರಿ ... ಮತ್ತು ಅದಕ್ಕೆ ಪ್ರತಿಯಾಗಿ ಭಾರತದ ಸೇನಾ ... 'ಸರ್ಜಿಕಲ್ ದಾಳಿ' ಇವೇ ಮುಂತಾದ ... ವಿಷಯಗಳನ್ನು ಒಳಗೊಳ್ಳಲಾಗಿದೆ.

ಭಯೋತ್ಪಾದನೆ ಕುರಿತ ಅಧ್ಯಾಯದಲ್ಲಿ ಮಾಧ... ವರದಿಗಾರಿಕೆಯ ಬಗ್ಗೆ ಬಹಳಷ್ಟು ಬರೆಯ... ಅಗತ್ಯಕ್ಕಿಂತ ಜಾಸ್ತಿ ವರದಿ ಮಾಡುವುದರ ಪರಿ... ಗಳೇನೆಂದು ತಿಳಿಸಲಾಗಿದೆ. 'ಮಾಧ್ಯಮಗಳು ಕಾಶ್ಮೀ... ಪಂಜಾಬಿನಲ್ಲಿ ನಡೆಯುತ್ತಿರುವ ಭಯೋತ್ಪಾದನ... ನಿರೂಪಿಸುವ ರೀತಿ ರೂಢಮಾದರಿಯದು. ಇದು... ವಿರುದ್ಧ ದ್ವೇಷ ಹುಟ್ಟುಹಾಕುವ ಬದಲು ಅವರ ... ಸಹನೆಯ ಭಾವನೆಯನ್ನು ಉಂಟುಮಾಡುತ್ತದೆ. ... ಭಯೋತ್ಪಾದನೆ ಇನ್ನಷ್ಟು ಬೆಳೆಯುತ್ತದೆ. ಅತಿಯಾದ... ಹಿಂಸೆಯನ್ನು ಇನ್ನಷ್ಟು ಆಕರ್ಷಣೀಯವಾಗಿ... ಉಗ್ರಗಾಮಿ ಸಂಘಟನೆಗಳನ್ನು ಹುಟ್ಟುಹಾಕಲು ... ನೀಡುತ್ತದೆ; ಆಡಳಿತದ ಕಾರ್ಯಕ್ಷಮತೆ ಮೇಲೆ ಪ... ಪರಿಣಾಮ ಬೀರುತ್ತದೆ; ಮಾಧ್ಯಮಗಳ ಜನ... ಹೆಚ್ಚುತ್ತದೆ. ಪರಿಣಾಮವಾಗಿ ಭಯೋತ್ಪಾದಕ ಗುಂ... ಚಾನಲ್‌ಗಳನ್ನು ನಿಯಂತ್ರಿಸುವ ಪರಿಸ್ಥಿತಿ ನಿ... ವಾಗಬಹುದು. (ಮೋದಿ ಸರ್ಕಾರ ಎನ್‌ಡಿಟಿವಿ ... ಮೇಲೆ ನಡೆಸಿದ ಗದಾಪ್ರಹಾರ ನೆನಪಿಸಿಕೊಳ್ಳಿ. ಎನ್... ಹಿಂದಿ ವಾಹಿನಿಯ ಪ್ರಸಾರ ರಾಷ್ಟ್ರೀಯ ಭದ್ರತೆಗೆ ... ತಂದೊಡ್ಡಿದೆ ಎಂದು ಆರೋಪಿಸಿ ಅದರ ಮೇಲೆ... ದಿನದ ನಿಷೇಧ ಹೇರಲು ಪ್ರಯತ್ನಿಸಲಾಯಿತು.)

ಭಾರತದ ಆರ್ಥಿಕತೆ ಕುರಿತ ಅಧ್ಯಾಯದಲ್ಲಿ ... ಉತ್ಪನ್ನಗಳು ರಾಷ್ಟ್ರಾಭಿಮಾನವನ್ನು ಹೆಚ್ಚಿಸುತ್ತವೆ. ರಾ... ವಾದ ದೇಶದ ಅಭಿವೃದ್ಧಿಗಾಗಿರುವ ಒಂದು ಪರಿಣಾ... ಅಂಶ ಎಂದು ಬರೆಯಲಾಗಿದೆ. ಸ್ವದೇಶಿ ಸ... ಪಟ್ಟಿಯಲ್ಲಿ ಟಾಟಾ, ಗೋದ್ರೆಜ್, ಅಮುಲ್, ... ಬಜಾಜ್ ಜೊತೆ ಪತಂಜಲಿ ಉತ್ಪನ್ನಗಳನ್ನೂ ಸೇರಿಸ...

ವಿವಾದಗಳ ಕುರಿತು ಮೌನ...

ಪರಿಷ್ಕೃತ ಪಠ್ಯಪುಸ್ತಕಗಳಲ್ಲಿ ನೋಟು ರದ್ದತಿ, ... ಒಪ್ಪಂದಗಳಂತಹ ಇತ್ತೀಚಿನ ವಿದ್ಯಮಾನಗಳನ್ನು ಉ... ಲಾಗಿದೆ. ಆದರೆ ದೇಶದಲ್ಲಿ ಹೆಚ್ಚುತ್ತಿರುವ ಅಸ... ಮತ್ತು ಅದಕ್ಕೆ ಕಾರಣವಾದ ಘಟನೆಗಳ ಬಗ್ಗೆ ಬರೆಯ... ರಾಜಕೀಯ ಶಾಸ್ತ್ರ ಪಠ್ಯದಲ್ಲಿರುವ ಜಾತೀಯತೆ ... ಕೋಮುವಾದ ಎಂಬ ಅಧ್ಯಾಯದಲ್ಲಿಯೂ ಗಾಂ... 2002ರ ಗುಜರಾತ್ ದಂಗೆಗಳು, ಗೋರಕ್ಷಕ ... ಪುಂಡಾಟಿಕೆ, ಗೋಮಾಂಸ ನಿಷೇಧ, ದಾ... ಕಾನೂನುಬಾಹಿರ ಗುಂಪುಗಳು ನಡೆಸಿದ ಕೊಲೆ, ... ಲೇಖಕರು ಆರಂಭಿಸಿದ ಪ್ರಶಸ್ತಿ ವಾಪಸಾತಿ ... ಮುಂತಾದ ವಿಷಯಗಳನ್ನು ಉಲ್ಲೇಖಿಸಲಾಗಿಲ್ಲ.

ವಿಶ್ವವಿದ್ಯಾನಿಲಯದ ಪಠ್ಯಪುಸ್ತಕ...

ರಾಜಸ್ತಾನ ವಿಶ್ವವಿದ್ಯಾನಿಲಯದ ಕೆಲ... ಪಠ್ಯಪುಸ್ತಕಗಳು ಸಹಿತ ಕೇಸರೀಕರಣಕ್ಕೆ ಒಳಗಾಗಿವೆ. ... ವಿಭಾಗದಲ್ಲಿ ವಿದೇಶಿ ಲೇಖಕರನ್ನು ಬಹಿಷ್ಕರಿಸಿ ಗೀ... ಸೇರಿಸಲಾಗಿದೆ. ಇತಿಹಾಸ ವಿಭಾಗದಲ್ಲಿ ಸೇರ್ಪಡೆಯ... 'ಮಹಾರಾಣಾ ಪ್ರತಾಪ್ ಮತ್ತು ಹಳದೀಘಾಟಿ ... ಎಂಬ ಪುಸ್ತಕದಲ್ಲಿ ಸತ್ಯಾಂಶಗಳಿಗೆ ವಿರುದ್ಧವಾ... 1576ರಲ್ಲಿ ಅಕ್ಬರನನ್ನು ಸೋಲಿಸಿದ ಎನ್ನಲಾಗಿದ...

ಪಠ್ಯಪುಸ್ತಕಗಳಲ್ಲಿ ಮಾಡಲಾದ ತಿದ್ದುಪಡಿ, ಸೇ... ಕುರಿತು ರಾಜಸ್ತಾನ ಮಾಧ್ಯಮಿಕ ಶಿಕ್ಷಣ ಮಂ... ಅಧ್ಯಕ್ಷರ ಪ್ರತಿಕ್ರಿಯೆ ಹೀಗಿದೆ: "ಹಿಂದಿನ ಪಠ್ಯಪು... ಭಾರತ ಮತ್ತು ರಾಜಸ್ತಾ'ಗಳಿಗಿಂತಲೂ ... ಆಗುಹೋಗುಗಳಿಗೇ ಹೆಚ್ಚು ಆದ್ಯತೆ ನೀ... 'ಆದುದರಿಂದ' ನಮ್ಮ ಮಕ್ಕಳು ಹಿಂದುಳಿಯ... ಎನ್ನುವ ಕಾರಣಕ್ಕಾಗಿ ಕೇವಲ ಸಮಾಜವಿಜ್ಞಾನ ಪ... ಬದಲಾವಣೆಗಳನ್ನು ಮಾಡಲಾಗಿದೆ... ಸಿಲಬಸ್‌ನ ... 70ರಷ್ಟನ್ನು ಬದಲಾಯಿಸದೆ ಹಾಗೇ ಉಳಿಸಿಕೊಳ್ಳ...

ಆದರೆ ರಾಜಸ್ತಾನ ವಿಶ್ವವಿದ್ಯಾನಿಲಯದ ಪ್ರೊ। ... ಗುಪ್ತಾ ಪ್ರಕಾರ "ರಾಜಸ್ತಾನದ ಪಠ್ಯಪುಸ್ತಕಗಳಲ್ಲಿ ... ಹಿಂಜರಿಕೆ ಇಲ್ಲದೆ ನೇರವಾಗಿ ಹಿಂದೂತ್ವ ಸಿದ್ಧಾ... ತುರುಕಿರುವುದು ದಿಲ್ಲಿಯಲ್ಲಿ ಮೋದಿ ಸರ್ಕಾರದ ಕಾ... ಪ್ರಾರಂಭವಾದ ನಂತರ. ಬದಲಾವಣೆಗಳನ್ನು ಮಾಡಿ... ಭಾರತದ ಮೇಲೆ ಹೆಚ್ಚು ಕೇಂದ್ರೀಕರಿಸುವ ಸ... ಎಂದು ಮಂಡಳಿಯ ಅಧ್ಯಕ್ಷರು ಹೇಳಿದ್ದಾರೆ. ಆದರ... ತೀರ ಭಿನ್ನವಿದೆ. ಗಮನಾರ್ಹವಾಗಿ ನೂತನ ಪಠ್ಯಪು...

▶▶

ಸಂಪಾದಕೀಯ

ಭುಗಿಲೆದ್ದಿರುವ ಹೊಲಗದ್ದೆಗಳು

ಕೃಪೆ: *Economic and Political Weekly*
June 17, 2017. Vol. 52. No. 24

■ ಅನು: ಶಿವಸುಂದರ್

ಕೃಷಿ ಆದಾಯವನ್ನು ದುಪ್ಪಟ್ಟುಗೊಳಿಸಲಾಗುವುದೆಂಬ ಚುನಾವಣಾ ಭರವಸೆಗಳಿಗೆ ಮಾಡಿದ ದ್ರೋಹದ ವಿರುದ್ಧ ...ರತದ ರೈತಾಪಿ ಬೀದಿಗಿಳಿದಿದ್ದಾರೆ.

2014ರ ಚುನಾವಣಾ ಸಂದರ್ಭದಲ್ಲಿ ಭಾರತೀಯ ...ಾ ಪಕ್ಷವು (ಬಿಜೆಪಿ) ಕೃಷಿ ಆದಾಯವನ್ನು ...ಟ್ಟುಗೊಳಿಸುವ, ದೊಡ್ಡ ಮಟ್ಟದಲ್ಲಿ ಉದ್ಯೋಗಗಳನ್ನು ...ುವ ಮತ್ತು ಕಪ್ಪುಹಣವನ್ನು ವಿದೇಶದಿಂದ ವಾಪಸ್ ...ಂಥ ಹಲವಾರು ದುಬಾರಿ ಭರವಸೆಗಳನ್ನು ನೀಡಿತ್ತು. ...ವಣೆ ಸಂದರ್ಭದಲ್ಲಿ ಕೊಟ್ಟ ಭರವಸೆಗಳ ಗತಿ ...ಗುತ್ತದೆಂಬುದು ಈ ದೇಶದಲ್ಲಿ ರಹಸ್ಯವಾಗೇನೂ ...ಿಲ್ಲ. ಆದರೆ ಈ ಸರ್ಕಾರದ ಭಿನ್ನತೆ ಏನೆಂದರೆ ... ತಾನು ಕೊಟ್ಟ ಭರವಸೆಗಳನ್ನು ವಾಸ್ತವದಲ್ಲಿ ...ರಿಸುವಂಥ ಒಬ್ಬ ಪ್ರಧಾನಮಂತ್ರಿಯನ್ನು ಕೊಡುವ ...ಸೆಯನ್ನೂ ಸಹ ನೀಡಿತ್ತು. ಹೀಗಾಗಿ ಸಾಮಾನ್ಯವಾಗಿ ...ಷ ದ್ರೋಹಗಳನ್ನು ಮರೆತು ಮನ್ನಿಸುವ ಗುಣದ ...ತೀಯ ನಾಗರಿಕರು, ಈ ಅತ್ಯಂತ ಗಂಡೆದೆಯ ಮತ್ತು ...ತ ಸಮರ್ಥನೆಂದು ಬಿಂಬಿಸಲ್ಪಟ್ಟ ನಾಯಕನಿಗೆ ಆತನ ...ೋಷಿತ ಅಜೆಂಡಾಗಳನ್ನು ಮತ್ತೆ ನೆನಪಿಸುವ ...ಬ್ದಾರಿಯನ್ನು ನಿರ್ವಹಿಸುತ್ತಿದ್ದಾರೆ. ಇದೇ ಇಂದು ಬಿಜೆಪಿ ...ರಿಸುತ್ತಿರುವ ಬಿಕ್ಕಟ್ಟಿಗೆ ಕಾರಣವಾಗಿದೆ. ಅದು ...ೊಟ್ಟ ನೋಟುನಿಷೇಧದ ಭ್ರಾಂತಿಯ ಕನಸುಗಳ ...ಳು ಕಳಚಿ ಬೀಳುತ್ತಿದ್ದಂತೆ ದೇಶದೆಲ್ಲೆಡೆ ಕೃಷಿ ಮತ್ತು ...ನೋಪಾಯಗಳ ಬಿಕ್ಕಟ್ಟಿನಿಂದ ಹುಟ್ಟಿರುವ ...ರೋಶಗಳನ್ನು ಬಿಜೆಪಿಯು ಎದುರಾಗಲೇ ಬೇಕಾದ ...ರ್ಭವು ಉದ್ಭವಿಸಿದೆ.

ಮಹಾರಾಷ್ಟ್ರ ಮತ್ತು ಅದಕ್ಕೆ ಅಂಟಿಕೊಂಡಂತಿರುವ ...ಪ್ರದೇಶಗಳಲ್ಲಿ ಹತ್ತು ದಿನಗಳ ಕಾಲ ನಡೆದ ಐತಿಹಾಸಿಕ ...ಹೋರಾಟವು ದೇಶವನ್ನು ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ...ಯನ್ನು ಆಶ್ಚರ್ಯಚಕಿತಗೊಳಿಸಿದೆ. ಇಲ್ಲಿಯವರೆಗೆ ... ಹಕ್ಕುಗಳನ್ನು ಪ್ರತಿಪಾದಿಸಲಾಗದ ಮತ್ತು ...ಘಟಿತವಾಗಿದ್ದ ರೈತ ಸಮೂಹವು ರಾತ್ರೋರಾತ್ರಿ ...ು ಬಲಿಷ್ಠ ರಾಜಕೀಯ ಶಕ್ತಿಯಾಗಿ ಉದ್ಭವಿಸಿಬಿಟ್ಟಿದೆ. ...ೋರಾಟನಿರತ ರೈತಾಪಿಯು ಸ್ವಾಮಿನಾಥನ್ ವರದಿಯು ...ರಸ್ಸು ಮಾಡಿರುವಂತೆ ಕೃಷಿ ಆರ್ಥಿಕತೆಯಲ್ಲಿ ...ಲಭೂತ ಬದಲಾವಣೆಗಳನ್ನು ಜಾರಿ ಮಾಡಬೇಕೆಂದು ...ಸುತ್ತಿದ್ದಾರೆ. ಹಾಗೆಯೇ ನೋಟು ನಿಷೇಧ ಮತ್ತು ...ರ್ ಬೆಳೆಯಿಂದಾಗಿ ತತ್‌ಕ್ಷಣಕ್ಕೆ ಎದುರಿಸುತ್ತಿರುವ ...ಕುಸಿತದ ಸಮಸ್ಯೆಯನ್ನು ಕೂಡಲೇ ಬಗೆಹರಿಸಬೇಕೆಂಬ ...ಪ್ರಸ್ತಾಪಗಳನ್ನು ಮುಂದಿಟ್ಟು ಹೋರಾಟಕ್ಕಿಳಿದಿದ್ದಾರೆ.

ಸತತ ಎರಡು ವರ್ಷಗಳ ತೀವ್ರ ಬರಗಾಲವನ್ನು ಎದುರಿಸಿದ ನಂತರ ಈಗವರು ಹೆಚ್ಚುವರಿ ಬೆಳೆಯ ಸಮಸ್ಯೆಯನ್ನು ಎದುರಿಸಬೇಕಾಗಿ ಬಂದಿದೆ. ಹೀಗಾಗಿಯೇ ಈ ರೈತ ಹೋರಾಟವು ಸಾಪೇಕ್ಷವಾಗಿ ಉತ್ತಮ ನೀರಾವರಿ ಸೌಲಭ್ಯ ಹೊಂದಿರುವ ಮತ್ತು ಸಂಪದ್ಭರಿತವಾದ ಮಹಾರಾಷ್ಟ್ರದ ಪುಣೆ ಮತ್ತು ನಾಸಿಕ್ ವಲಯದಲ್ಲಿ, ಮಧ್ಯಪ್ರದೇಶದ ಉಜ್ಜೈನ್ ವಲಯದಲ್ಲಿ ಭುಗಿಲೆದ್ದಿತೇ ಹೊರತು ಅತ್ಯಂತ ಹಿಂದುಳಿದ ಮಹಾರಾಷ್ಟ್ರದ ಮರಾಠವಾಡ ಮತ್ತು ವಿದರ್ಭ ಪ್ರದೇಶಗಳಲ್ಲಾಗಲೀ, ಮಧ್ಯಪ್ರದೇಶದ ಚಂಬಲ್ ಅಥವಾ ಬುಂದೇಲ್ಖಂಡ್ ಪ್ರದೇಶಗಳಲ್ಲಾಗಲೀ ಹುಟ್ಟಿಕೊಳ್ಳಲಿಲ್ಲ. ಪ್ರಾಕೃತಿಕ ವೈಪರೀತ್ಯಗಳನ್ನು ಬದಿಗಿಟ್ಟರೂ, ಭಾರತೀಯ ಕೃಷಿಯು ತೀವ್ರವಾದ ಬಿಕ್ಕಟ್ಟಿನಲ್ಲಿ ಸಿಲುಕಿರುವುದಂತೂ ವಾಸ್ತವ. ಹೆಚ್ಚುತ್ತಿರುವ ಒಳಸುರಿಗಳ ವೆಚ್ಚ, ಬೆಳೆದ ಬೆಳೆಗೆ ಕುಸಿಯುತ್ತಿರುವ ಧಾರಣೆ, ಕಡಿತವಾಗುತ್ತಿರುವ ಸರ್ಕಾರಿ ಬೆಂಬಲ, ಹೆಚ್ಚುತ್ತಿರುವ ಮಾರುಕಟ್ಟೆ ಅಸ್ಥಿರತೆ, ಕಡಿಮೆಯಾಗುತ್ತಿರುವ ಹಿಡುವಳಿಯ ಗಾತ್ರಗಳು ಮತ್ತು ಇಳಿಕೆಯಾಗುತ್ತಿರುವ ಭೂಮಿಯ ಉತ್ಪಾದಕತೆಗಳು ಕೃಷಿ ಆದಾಯವನ್ನು ಕಡಿಮೆಗೊಳಿಸುತ್ತಾ ಇಡೀ ಕೃಷಿ ಕ್ಷೇತ್ರವನ್ನೇ ನಿತ್ರಾಣಗೊಳಿಸುತ್ತಿದೆ. ಇದರಿಂದಾಗಿ ಸಣ್ಣ ಮತ್ತು ಅತಿಸಣ್ಣ ರೈತರು, ಗೇಣಿದಾರರು, ಭೂರಹಿತ ಕೃಷಿ ಕಾರ್ಮಿಕರು ಮತ್ತು ಕೃಷಿ ಆರ್ಥಿಕತೆಯ ಅಂಚಿನಲ್ಲಿ ಬದುಕುತ್ತಿರುವ ವರ್ಗಗಳು ತೀವ್ರವಾದ ಸಂಕಷ್ಟಕ್ಕೆ ಗುರಿಯಾಗುತ್ತಿದ್ದಾರೆ.

ಈ ಎರಡೂ ರಾಜ್ಯಗಳಲ್ಲಿ ಅಧಿಕಾರದಲ್ಲಿರುವ ಬಿಜೆಪಿ ಸರ್ಕಾರಗಳು ಈ ರೈತ ಹೋರಾಟಗಳನ್ನು ಅರ್ಥಮಾಡಿಕೊಳ್ಳುವಲ್ಲೂ ಮತ್ತು ಅದನ್ನು ಪರಿಣಾಮಕಾರಿಯಾಗಿ ನಿಭಾಯಿಸುವಲ್ಲೂ ಘೋರವಾಗಿ ವಿಫಲವಾಗಿವೆ. ಮೊದಮೊದಲು ಇವೆಲ್ಲವೂ ವಿರೋಧ ಪಕ್ಷಗಳ ಚಿತಾವಣೆಯೆಂದು ಬಣ್ಣಿಸಿ ನೆಲಕಚ್ಚಿದ್ದ ವಿರೋಧ ಪಕ್ಷಕ್ಕೆ ಸರ್ಕಾರಗಳು ಅನಗತ್ಯವಾದ ಪ್ರಚಾರವನ್ನು ಕೊಟ್ಟವು. ನಂತರದಲ್ಲಿ ಬೀದಿಗಿಳಿದು ಹೋರಾಡುತ್ತಿರುವವರು ನಿಜವಾದ ರೈತರೇ ಅಲ್ಲವೆಂದು ದುಷ್ಪ್ರಚಾರ ಪ್ರಾರಂಭಿಸಿದರು. ಅದು ಅವರಿಗೆ ಹಿಂಪೆಟ್ಟು ನೀಡಿತು. ನಂತರದಲ್ಲಿ ಮಹಾರಾಷ್ಟ್ರ ಸರ್ಕಾರವು ರೈತ ಪ್ರತಿನಿಧಿಗಳ ಕೇಂದ್ರ ಸಮಿತಿಯನ್ನು ಒಡೆಯಲು ಪ್ರಯತ್ನಿಸಿತು. ಆದರೆ ಅಂತಿಮವಾಗಿ ಮಹಾರಾಷ್ಟ್ರದ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ರೈತರ ಹೋರಾಟಕ್ಕೆ ಮಣಿಯಲೇ ಬೇಕಾಯಿತು. ಅದರಂತೆ ಸಣ್ಣ ಮತ್ತು ಅತಿಸಣ್ಣ ರೈತರ 30,000 ಕೋಟಿ ರೂಪಾಯಿಗಳ ಸಾಲಮನ್ನಾ, ಮುಂದಿನ ಬೆಳೆಯನ್ನು ಬೆಳೆಯಲು ಕೂಡಲೇ ಹೊಸ ಸಾಲವನ್ನು ವಿತರಿಸುವ ಮತ್ತು ಹಾಲಿನ ಬೆಲೆಯಲ್ಲಿ ಗಮನಾರ್ಹ ಏರಿಕೆಯನ್ನು ಮಾಡಿ ಅದರ ಶೇ.70ರಷ್ಟು ಹಣವು ನೇರವಾಗಿ ರೈತರ ಕೈತಲುಪುವಂತೆ ಮಾಡುವ ಕ್ರಮಗಳನ್ನು ಘೋಷಿಸಲಾಯಿತು. ಅಷ್ಟು ಮಾತ್ರವಲ್ಲದೆ ರೈತ ಬೆಳೆದ ಬೆಳೆಗೆ ಉತ್ಪಾದನಾ ವೆಚ್ಚದ ಜೊತೆಗೆ ಶೇ. 50ರಷ್ಟು ಲಾಭವನ್ನು ಸೇರಿಸಿ ಕನಿಷ್ಠ ಬೆಂಬಲ ಬೆಲೆಯನ್ನು (ಎಂಎಸ್ಪಿ) ಘೋಷಿಸುವಂತೆ ಮಾಡಲು ಕೇಂದ್ರ ಸರ್ಕಾರದ ಜೊತೆ ಮಾತುಕತೆಯಾಡುವುದಾಗಿಯೂ ಮಹಾರಾಷ್ಟ್ರ ಮುಖ್ಯಮಂತ್ರಿ ಭರವಸೆ ನೀಡಿದರು. ಈ ಭರವಸೆಗಳು ಅತ್ಯಂತ ಮಹತ್ವಾಕಾಂಕ್ಷೆಯಿಂದ ಕೂಡಿದ್ದರೂ ಆಚರಣೆಗೆ ತರುವುದು (ಸಾಲಮನ್ನಾದ ಅಗತ್ಯವಿರುವ ನೈಜ ರೈತಾಪಿಯನ್ನು ಗುರುತಿಸುವ ಅಥವಾ ಉತ್ಪಾದನಾ ವೆಚ್ಚವನ್ನು ನಿಖರವಾಗಿ ಲೆಕ್ಕ ಹಾಕುವ ವಿಷಯಗಳು) ಅತ್ಯಂತ ಸವಾಲಿನ



ವಿಷಯವಾಗಿದೆ. ವಿತ್ತೀಯವಾಗಿ ತ್ರಾಸದಾಯಕವಾದ ಮತ್ತು ಹೆಚ್ಚಿನ ಹಣಕಾಸು ಹೊರೆಯನ್ನು ಹೇರುವಂತ ಕ್ರಮಗಳಾಗಿವೆ. ಇದರಲ್ಲಿ ಗಮನಾರ್ಹವಾದ ಸಂಗತಿಯೆಂದರೆ ಈ ಕ್ರಮಗಳು ಸಾರಾಂಶದಲ್ಲಿ ಕೃಷಿಯಲ್ಲಿ ಸರ್ಕಾರದ ಮಧ್ಯಪ್ರವೇಶಕ್ಕೆ ಮರಳುವ ನೀತಿಯೇ ಆಗಿದೆ. ಇದು ಬಿಜೆಪಿ ಪ್ರತಿಪಾದಿಸುತ್ತಿರುವ ನೀತಿಗೆ ತದ್ವಿರುದ್ಧವಾದ ನೀತಿಯೇ ಆಗಿದೆ. ಮಧ್ಯಪ್ರದೇಶದಲ್ಲಿ ಗೋಲಿಬಾರ್‌ನಲ್ಲಿ ಸತ್ತ ರೈತರ ಸಂಖ್ಯೆ ಏಳಕ್ಕೆ ಏರಿದರೂ ಅಲ್ಲಿನ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್, ಮಾತುಕತೆಗೆ ಕರೆಯುವ ಮತ್ತು ಸಾಲಮನ್ನಾದಂಥ ಸೀಮಿತ ಪರಿಹಾರಗಳನ್ನು ಮಾತ್ರ ಮುಂದಿಡುತ್ತಿದ್ದಾರೆ. ಅವರ ಈ ನಡೆಗಳು ಹೋರಾಟಗಾರರನ್ನು ತೃಪ್ತಗೊಳಿಸುವ ಬದಲಿಗೆ ವಿರೋಧ ಪಕ್ಷಗಳಿಗೆ ಕಸುವು ತುಂಬುತ್ತಿದೆ.

ಈ ವಿದ್ಯಮಾನಗಳ ಪಾಠವೇನೆಂದರೆ ಬಿಜೆಪಿಯು ಗ್ರಾಮೀಣ ಭಾರತದತ್ತ ಮತ್ತು ಕೃಷಿ ಆರ್ಥಿಕತೆಯತ್ತ ಚಿತ್ತವನ್ನು ಹರಿಸಬೇಕಿದೆ. ಪ್ರಧಾನವಾಗಿ ವ್ಯಾಪಾರಿಗಳ ಮತ್ತು ನಗರ ಕೇಂದ್ರಿತ ಪಕ್ಷವಾಗಿರುವ ಬಿಜೆಪಿ, ಈ ಚುನಾವಣೆಯಲ್ಲಿ ಅತ್ಯಂತ ಸೂಕ್ಷ್ಮ ಜಾತಿ ಲೆಕ್ಕಾಚಾರಗಳ ಮೂಲಕ ಮತ್ತು ಒಟ್ಟಾರೆ ಆರ್ಥಿಕತೆಗೆ ಅದರಲ್ಲೂ ನಿರ್ದಿಷ್ಟವಾಗಿ ಕೃಷಿ ಆರ್ಥಿಕತೆಗೆ ಹೆಚ್ಚಿನ ಕಸುವು ತುಂಬುವ ಭರವಸೆಯನ್ನು ನೀಡುವ ಮೂಲಕ ಗ್ರಾಮೀಣ ಪ್ರದೇಶದ ಓಟುಗಳನ್ನು ಪಡೆದುಕೊಂಡಿತು. ಈಗ ಆ ಭರವಸೆಗಳೇ ಬೇತಾಳದಂತೆ ಅದರ ಬೆನ್ನು ಹತ್ತಿದೆ.

ಇಂದಿನ ಈ ಕೃಷಿ ಬಿಕ್ಕಟ್ಟು ಎಲ್ಲಾ ರಾಜಕೀಯ ಪಕ್ಷಗಳು ಮತ್ತು ಸರ್ಕಾರಗಳು ಕೃಷಿಯನ್ನು ಸತತವಾಗಿ ಕಡೆಗಣಿಸುತ್ತಾ ಬಂದಿದ್ದರ ಪರಿಣಾಮವೇ ಆಗಿದೆ. ಇವೆಲ್ಲಕ್ಕೂ ಬಿಜೆಪಿ ಮಾತ್ರ ಕಾರಣವೆಂದು ಹೇಳಲಾಗುವುದಿಲ್ಲ. ಆದರೂ ಆದೀಗ ಹಿಂದೆಂದೂ ಇಲ್ಲದ ರೀತಿಯಲ್ಲಿ ನ್ಯಾಯವನ್ನು ಆಗ್ರಹಿಸುತ್ತಿರುವ ಹತಾಷ ಮತ್ತು ಅಸಹಾಯಕ ರೈತಾಪಿಯ ಹೋರಾಟಗಳನ್ನು ಎದುರಿಸಬೇಕಾಗಿದೆ.

ಈ ಹಿಂದೆ ಬಿಜೆಪಿಯು ಅಂದಿನ ಆಡಳಿತಾರೂಢ ಕಾಂಗ್ರೆಸ್ ಪಕ್ಷವು ಜಾರಿಗೆ ತಂದ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಗಳಂಥ ಗ್ರಾಮೀಣ ಅಭಿವೃದ್ಧಿಪರ ಯೋಜನೆಗಳನ್ನು ಖಡಾಖಂಡಿತವಾಗಿ ವಿರೋಧಿಸಿತ್ತು. ಮತ್ತೊಂದು ಕಡೆ ಭೂಸ್ವಾಧೀನ ಕಾಯಿದೆ ಮತ್ತು ನೋಟು ನಿಷೇಧದಂಥ ಬಿಜೆಪಿಯ ಸ್ವಂತ ನೀತಿಗಳು ಗ್ರಾಮೀಣ ಆರ್ಥಿಕತೆ ಮತ್ತದರ ಕಾರ್ಯನಿರ್ವಹಣೆಯ ಬಗ್ಗೆ ಬಿಜೆಪಿಗಿರುವ ಅಜ್ಞಾನ ಮತ್ತು ಅಸಡ್ಡೆಗಳನ್ನು ಎತ್ತಿತೋರಿಸುವಂತಿವೆ. 2017ರ ಜೂನ್ 7 ರಂದು ರಿಸರ್ವ್ ಬ್ಯಾಂಕ್ ಹೊರತಂದ ಹಣಕಾಸು ನೀತಿಗಳ ದ್ವೈಮಾಸಿಕ ಪರಾಮರ್ಶನ ವರದಿಯು ನೋಟು ನಿಷೇಧದ ಕಾರಣದಿಂದಾಗಿ ಎಲ್ಲೆಡೆ ಕೃಷಿ ಸರಕುಗಳ ಬೆಲೆಗಳು ಕುಸಿದಿದ್ದು ರೈತರು ಹತಾಶ ಮಾರಾಟದಲ್ಲಿ ತೊಡಗಿದ್ದಾರೆ ಎಂದು ಸ್ಪಷ್ಟವಾಗಿ ಹೇಳಿದೆ.

ನೋಟು ನಿಷೇಧವು ಹುಟ್ಟುಹಾಕಿದ ನಗದು ಕೊರತೆಯು ಈಗಲೂ ಹಳ್ಳಿಗಾಡಿನಲ್ಲಿ, ಸಣ್ಣಪುಟ್ಟ ಪಟ್ಟಣಗಳಲ್ಲಿ ಮತ್ತು ರೈತ ಮಂಡಿಗಳಲ್ಲಿ ಮುಂದುವರೆದಿದ್ದು ಕೃಷಿ ಉತ್ಪನ್ನ ಮಾರುಕಟ್ಟೆ ಯಲ್ಲಿದ್ದ ನಗದು ಬಂಡವಾಳವನ್ನು ಲೂಟಿಮಾಡಿದ ಸರ್ಕಾರವು ಕೃಷಿ ಕ್ಷೇತ್ರದಲ್ಲಿ ಇಳಿಕೆಯುಬ್ಬರವನ್ನು (ಡಿಫ್ಲೇಷನ್-ಇಳಿಕೆಯುಬ್ಬರ- ಹಣದುಬ್ಬರ ಮತ್ತು ಬೆಲೆಗಳ ಇಳಿಕೆ ಎರಡೂ ಏಕಕಾಲದಲ್ಲಿ ಸಂಭವಿಸುವ ವಿದ್ಯಮಾನ- ಅನುವಾದಕನ ಟಿಪ್ಪಣಿ) ಹುಟ್ಟುಹಾಕಿದೆ. ಹರ್ಯಾಣ, ರಾಜಸ್ತಾನ, ಗುಜರಾತ್, ಆಂಧ್ರಪ್ರದೇಶ, ತೆಲಂಗಾಣ ಮತ್ತು ಕರ್ನಾಟಕದ ರೈತಾಪಿಯು ಒಂದಾದ ನಂತರದಲ್ಲಿ ಒಂದು ಹೋರಾಟದ ಹಾದಿಯನ್ನು ಹಿಡಿಯುತ್ತಿರುವುದು ಈ ವಿದ್ಯಮಾನಗಳ ಪರಿಣಾಮಗಳನ್ನು ಸ್ಪಷ್ಟಪಡಿಸುತ್ತಿವೆ.

ಇದರಲ್ಲಿ ಬಹಳಷ್ಟು ಜನರು ಕಾಣದೇ ಹೋದ ಒಂದು ಕಟು ವಾಸ್ತವವೆಂದರೆ ಮಹಾರಾಷ್ಟ್ರದ ಯಾವ ಪುಣೆ ವಿಭಾಗದ ಅಹಮದ್‌ನಗರದಲ್ಲಿ ಇತ್ತೀಚಿಗಷ್ಟೇ ಮರಾಠ ಮೋರ್ಚಾಗಳು ಪ್ರಾರಂಭವಾಗಿದ್ದವೋ ಅದೇ ಪ್ರದೇಶದಿಂದಲೇ ಇಂದಿನ ರೈತ ಹೋರಾಟಗಳು ಪ್ರಾರಂಭಗೊಂಡಿವೆ.

ಈ ಎರಡೂ ಜನಹೋರಾಟಗಳ ಬೇಡಿಕೆಗಳು ಮತ್ತು ಉದ್ದೇಶಗಳು ಬೇರೆಬೇರೆಯಾದರೂ ಎರಡು ಹೋರಾಟಗಳು ಪಡೆದುಕೊಂಡ ದಿಢೀರ್ ಜನಬೆಂಬಲ, ಅವುಗಳ ಪ್ರಮಾಣ ಮತ್ತು ವ್ಯಾಪ್ತಿಗಳು ಯಾವುದೇ ಸರ್ಕಾರವನ್ನು ಕಂಗೆಡಿಸುವಂತಿವೆ. ಪ್ರಬಲವಾದ ವಿರೋಧ ಪಕ್ಷಗಳು ಇಲ್ಲದಿರುವ ಸನ್ನಿವೇಶದಲ್ಲಿ ಜನತೆಯ ಇಂಥಾ ವೀರೋಚಿತ ಹೋರಾಟಗಳೇ ಸರ್ಕಾರಗಳನ್ನು ಅವರು ನೀಡಿದ ಭರವಸೆಗಳಿಗೆ ಉತ್ತರದಾಯಿಗಳನ್ನಾಗಿ ಮಾಡುವ ನಿಜವಾದ ಪ್ರಜಾತಾಂತ್ರಿಕ ಉಸ್ತುವಾರಿಯನ್ನು ನಿಭಾಯಿಸುತ್ತಿವೆ. ■

ಕೇಸರೀಕರಣ ಭಾಗ್ಯ!

...ದಿ ಸರ್ಕಾರದ ಉಪಕ್ರಮಗಳನ್ನು ಧನಾತ್ಮಕ ಬೆಳಕಿನಲ್ಲಿ ...ರಿಸಲಾಗಿದೆ. ಆದರೆ ವಿವಾದಾತ್ಮಕ ವಿಷಯಗಳನ್ನು ...ಡಲಾಗಿದೆ. ಗಾಂಧಿ ಹತ್ಯೆ, 2002ರ ಗುಜರಾತ್ ...ಲೀಧದ ವಿಷಯಗಳು ಕೂಡಾ ನಾಪತ್ತೆಯಾಗಿವೆ. ಇದು ...ತಿ ಉತ್ಪಾದನೆಯ ಸ್ಪಷ್ಟ ನಿದರ್ಶನವಾಗಿದೆ."

...ಈ ಸಂದರ್ಭದಲ್ಲಿ ಕರ್ನಾಟಕದ ವಿದ್ಯಮಾನಗಳನ್ನೂ ... ಮೆಲುಕು ಹಾಕಬೇಕಾಗಿದೆ. ಇಲ್ಲಿ ಬಿಜೆಪಿ ಸರ್ಕಾರ ...ಗ ಪಠ್ಯಪುಸ್ತಕಗಳ ಕೇಸರೀಕರಣ ನಡೆದಿರುವುದನ್ನು ...ಸಿಕೊಳ್ಳಬೇಕಾಗಿದೆ. ನಂತರದ ಚುನಾವಣೆಗಳಲ್ಲಿ ಬಿಜೆಪಿ ...ದು ಕಾಂಗ್ರೆಸ್ ಅಧಿಕಾರಕ್ಕೆ ಬಂದಾಗ ಬರಗೂರು ...ಚಂದ್ರಪ್ಪರ ನೇತೃತ್ವದಲ್ಲಿ ಹಳೆಯ, ಕೇಸರೀಕರಣಗೊಂಡ ...ಪುಸ್ತಕಗಳನ್ನೇನೋ ಸರಿಪಡಿಸಲಾಗಿದೆ. ಆದರೆ ಪ್ರಸಕ್ತ ...ದಿಂದ ಚಾಲ್ತಿಗೆ ಬಂದಿರುವ ಈ ಹೊಸ ಪಠ್ಯಪುಸ್ತಕಗಳ ...ಷ್ಯ ಅನಿಶ್ಚಿತವಾಗಿದೆ. ಏಕೆಂದರೆ ಮುಂದಿನ ವರ್ಷ ...ಯಲಿರುವ ಚುನಾವಣೆಗಳಲ್ಲಿ ಬಿಜೆಪಿ ಎಲ್ಲಾದರೂ ...ತೆಂದಾದರೆ ಪರಿಷ್ಕೃತ ಪಠ್ಯಗಳೆಲ್ಲವೂ ಕಸದಬುಟ್ಟಿ ...ಸೇರುವುದು ನಿಶ್ಚಿತ.

(ಆಧಾರ: 16.6.2017ರ *thewire.com* ನಲ್ಲಿ ... ವೈರ್, 14-6-2017ರ ಡೆಕ್ಕನ್ ಹೆರಾಲ್ಡ್ ನಲ್ಲಿ ತಬೀನಾ ಅಂಜುಂ ಲೇಖನಗಳು)

ನನ್ನೊಳಗಿನ ಕವಿತೆ



ನೆತ್ತರಲಿ ನೆಂದ ಸೂರ್ಯನಂತೆ
ಸಪ್ತವರ್ಣದ ಬೀರಿ
ಬೆರಗು ಮೂಡಿಸುತ್ತದೆ

ನನ್ನೊಳಗಿನ ಕಾವ್ಯ ಕನ್ನಿಕೆ
ಚುಕ್ಕಿ ಚಂದ್ರಮರ ನಾಡಿನಲ್ಲಿ
ಯಾರೋ ನುಡಿಸುವ ಕೊಳಲ ಕೇಳಿ
ಪದಗಳೊಂದಿಗೆ ನಾಟ್ಯವಾಡಿ
ವಿಜಯದ ನಗೆ ಬೀರುತ್ತಾಳೆ.

ನನ್ನೊಳಗಿನ ಕವಿತೆ
ಬಿರುಬಿಸಿಲಾಳದ ನಿಜ ಸತ್ಯಗಳ
ಬೆಂಕಿಯಲ್ಲೂ ಬಾಡದ ಹೂ
ಒಂಟಿ ಹಕ್ಕಿಯ ಹಾಡು
ಹಂಗಿಲ್ಲದೆ ಹರಿವ ಜೀವನದಿ

ನನ್ನೊಳಗಿನ ಕವಿತೆ
ಬೂದಿ ಮುಚ್ಚಿದ ಕೆಂಡ
ನೀಲಿ ನಕ್ಷತ್ರಗಳೊಳಗಿನ ಮುತ್ತಿನ ರಾಶಿ
ಬೇಲಿ ಹೂ ನೋಡಿ ಆಣಿಕಿಸುವ ಚುಕ್ಕಿ ಹಾಡು
ಮೊಳಕೆಯೊಡೆಯದ ಬೀಜ
ಮೌನ ಸಾಧಕನ ಅಸಮರ್ಥ ದಂಡಯಾತ್ರೆ

ನನ್ನೊಳಗಿನ ಕವಿತೆ
ಮುಳುಗಡೆಯಾಗದ ಸುಂದರ ದ್ವೀಪ
ಇತಿಹಾಸ ಮರೆತವರಿಗೆ ನೆನಪು
ಹಕ್ಕಿಗಳ ಸ್ವಾತಂತ್ರ್ಯದ ಸಂತೆ ಸರಕು
ಗುಬ್ಬಿಗೂಡಿನೊಳಗಣ ಹಾಡು
ನಾದ ನುಡಿ ಸಂಗಮದ ಗುಲಗಂಜಿ





ನನ್ನೊಳಗಿನ ಕವಿತೆ
ಅಂತರಂಗದಲಿ ವೀಣೆ
ನುಡಿಸುವವರ ನೇರ ನುಡಿಗಳು
ಸವಿದವರಿಗೆ ಅಭಿಮಾನದ ಹೊಳೆ
ಸದಾ ಜಿನುಗುವ ಸ್ವಾತಿ ಮುತ್ತಿನ ಮಳೆ.



■ ಡಾ. ಡಿ.ಸಿ. ರಾಜಪ್ಪ ಐಪಿಎಸ್.
ಡಿಐಜಿಪಿ & ಜಂಟಿ ಪೊಲೀಸ್ ಆಯುಕ್ತರು,
ಸಿ.ಎ.ಆರ್., ಬೆಂಗಳೂರು ನಗರ

ಇಂಡಿಯಾ ವರ್ಸಸ್ ಪಾಕ್: ಚೆಡ್ಡಿಗಳ ಹುನ್ನಾರ ಬಯಲ





ಮೊನ್ನೆ ಐಸಿಸಿ ಫೈನಲ್‌ನಲ್ಲಿ ಭಾರತ ಗೆಲ್ಲುವುದು ಖಂಡಿತ ಎಂದು ಭಾವಿಸಿ ನಮ್ಮ ಕರಾವಳಿಯ ಸಂಘಿ ಕಾಲಾಳುಗಳು ದೊಡ್ಡ ಪ್ರಮಾಣದಲ್ಲಿ ಪಟಾಕಿ ಹಾಗೂ ಸಿಹಿ ತಂದು ಇಟ್ಟುಕೊಂಡಿದ್ದರು. ಆದರೆ ಭಾರತ ಪಾಕಿಸ್ತಾನದ ಎದುರು ಸೋತ ಮೇಲೆ ಸಂಘಿ ಕಾಲಾಳುಗಳು ತಂದಿದ್ದ ಪಟಾಕಿಯನ್ನು ಹಾಗೂ ಸಿಹಿಯನ್ನು ರಾತ್ರೋರಾತ್ರಿ ಸಣ್ಣಪುಟ್ಟ ಬಡ ಮುಸ್ಲಿಂ ಹುಡುಗರಿಗೆ ಉಚಿತವಾಗಿ ಹಂಚಿ ಆ ಅಮಾಯಕ ಮಕ್ಕಳಿಗೆ "ನಿಮ್ಮ ನಿಮ್ಮ ವಠಾರದಲ್ಲಿ ನಿಮ್ಮ ಮನೆಯ ಮುಂದೆ ಈ ಪಟಾಕಿ ಸುಟ್ಟು ಸಿಹಿ ಹಂಚಿ ಮಜಾ ಮಾಡಿ" ಎಂದು ಹೇಳಿ ಕೊಟ್ಟಿದ್ದರು. ಆದರೆ ಮುಸ್ಲಿಂ ಹಿರಿಯರಿಗೆ ಚೆಡ್ಡಿಗಳ ಮಸಲತ್ತು ಅರ್ಥವಾಗಿ ಅವರು ತಮ್ಮ ಅಮಾಯಕ ಮಕ್ಕಳಿಂದ ಸಂಘಿಗಳು ಕೊಟ್ಟ ಪಟಾಕಿ ಮತ್ತು ಸಿಹಿಯನ್ನು ಕಸಿದುಕೊಂಡು ಚರಂಡಿಗೆ ಎಸೆದರು. ಈ ಮುನ್ನೆಚ್ಚರಿಕೆಯಿಂದಾಗಿ ದೊಡ್ಡ ಅನಾಹುತವೊಂದು ತಪ್ಪಿತು. ಚೆಡ್ಡಿಗಳ ಹುನ್ನಾರು ಏನಾಗಿತ್ತೆಂದರೆ ಚಿಕ್ಕಪುಟ್ಟ ಮುಗ್ಧ ಮುಸ್ಲಿಂ ಮಕ್ಕಳು ಉಚಿತವಾಗಿ ಸಿಕ್ಕಿರುವ ಪಟಾಕಿ ಸುಟ್ಟರೆ ಹಾಗೂ ಸಿಹಿ ತಿಂದರೆ ಅದನ್ನು ಉದಾಹರಿಸಿ ಇಲ್ಲಿಯ ಮುಸ್ಲಿಮರು ಪಾಕಿಸ್ತಾನದ ಪರವಾಗಿರುವ ದೇಶದ್ರೋಹಿಗಳು ಎಂದು ಬಿಂಬಿಸಿ ಕೋಮುಗಲಭೆ ಹಬ್ಬಿಸುವುದೇ ಆಗಿತ್ತು.

ಜತೆಗೆ ಪಟಾಕಿ ಸುಟ್ಟವರೆಲ್ಲಾ ಜಿಲ್ಲಾ ಉಸ್ತುವಾರಿ ಸಚಿವ ರಮಾನಾಥ್ ರೈ ಬೆಂಬಲಿಗರು ಎಂದು ಬಿಂಬಿಸಿ ಬಂಟವಾಳ-ಕಲ್ಲಡ್ಕದಲ್ಲಿ ಕಾಂಗ್ರೆಸ್ಸಿನ ರಮಾನಾಥ್ ರೈ ಅವರನ್ನು ಹಣಿಯುವ ಘೋರ ಷಡ್ಯಂತ್ರ ಅಡಗಿತ್ತು. ಸದ್ಯ ಚೆಡ್ಡಿಗಳ ಷಡ್ಯಂತ್ರ ಫಲಿಸದಿದ್ದದ್ದು ಕರಾವಳಿಯ ಅದೃಷ್ಟ. ಭಾರತದ ಗೆಲುವಿಗೆ ತಾವು ಮಾಡಿದ ಹೋಮ ಹವನ ಪೂಜೆಗಳೆಲ್ಲಾ ವ್ಯರ್ಥವಾಗಿರುವ ಬಗ್ಗೆ ಸಂಘಿಗಳಿಗೆ ದುಃಖ ಆಗುತ್ತಿದೆಯಂತೆ. ಅದರಲ್ಲೂ ಗೋಮಾಂಸ ತಿನ್ನುವವರ ಮುಂದೆ ಹೀನಾಯವಾಗಿ ಸೋತಿರುವುದು ದೊಡ್ಡ ಅವಮಾನ ಎಂದು ಸಂಘಿಗಳು ಭಾವಿಸಿದ್ದಾರೆ. ಅದಕ್ಕಾಗಿ ಅಂಪಾಯರ್‌ಗಳಿಗೆ ದಾವೂದ್ ಇಬ್ರಾಹಿಮ್ ಬಿಲಿಯನ್ ಗಟ್ಟಲೆ ಲಂಚ ಕೊಟ್ಟು ಅವರು ಭಾರತದ ವಿರುದ್ಧ ಹಲವು ತೀರ್ಪು ಕೊಟ್ಟಿದ್ದರಿಂದ ಭಾರತ ಸೋತಿತು ಎಂಬ ವದಂತಿ ಹಬ್ಬಿಸಿ ಚೆಡ್ಡಿಗಳು ಸಮಾಧಾನ ತಂದುಕೊಳ್ಳುತ್ತಿದ್ದಾರೆ ಅಷ್ಟೇ. ಉದಯವಾಣಿ ಪತ್ರಿಕೆಯಂತೂ ಭಾರತ ತಂಡವನ್ನು "ಕೇಸರಿ ತಂಡ" ಎಂದು ಹೆಸರಿಸಿ ಈ ತಂಡ ಹಿಂದೂತ್ವದ ಪ್ರತಿನಿಧಿ ಎಂದು ಬಣ್ಣಿಸಿತ್ತು. ಕಾರಣ ಭಾರತದ ತಂಡದ 12 ಜನರಲ್ಲಿ ಎಲ್ಲರೂ ಹಿಂದೂಗಳಾಗಿದ್ದು ತಂಡದಲ್ಲಿ ಒಬ್ಬನೇ ಒಬ್ಬ ಮುಸ್ಲಿಂ ಕ್ರೈಸ್ತ ಸಿಖ್ಖ ಅಥವಾ ಜೈನ ಇರಲಿಲ್ಲ. ಕನ್ನಡ ಮಾಧ್ಯಮಗಳಲ್ಲಿ ಎಂತೆಂತಹ ಕರಾಳ ಬುದ್ಧಿಯವರಿದ್ದಾರೆ ಎಂಬುದಕ್ಕೆ ಇದು ಸಾಕ್ಷಿ.

- ರಾಮಕೃಷ್ಣ ಕುಲಾಲ್, ಬೆಂಗಳೂರು

ಮಾಂಸಾಹಾರಿಗಳು ಆವಿಷ್ಕರಿಸಿರುವ ಎಲ್ಲವನ್ನೂ ಸಸ್ಯಾಹಾರಿಗಳು ತ್ಯಜಿಸಬೇಕು

ಎಲ್ಲಾ ತರದ ಮೀನುಗಳ ಸಾಕಣೆ ಮತ್ತು ಮಾರಾಟ ರಾಜ್ಯ ಸರಕಾರಗಳ ಅಧಿಕಾರದ ಪರಿಧಿಯಲ್ಲಿ ಬರುತ್ತದೆ. ಆದರೂ ಕಳೆದ ವಾರ ಅಲಂಕಾರಿಕ ಮೀನುಗಳ ಮಾರಾಟದ ಮೇಲೆ ನಿರ್ಬಂಧ ಹೇರಿ ಮೋದಿ ಸರಕಾರ ತನ್ನ ಅಧಿಕಾರ ವ್ಯಾಪ್ತಿಯನ್ನು ಮೀರಿ ಮತ್ತೆ ತನ್ನ ಸರ್ವಾಧಿಕಾರಿ ಬುದ್ಧಿ ತೋರಿಸಿದೆ. ಇದರಿಂದಾಗಿ ನಮ್ಮ ದೇಶದಲ್ಲಿ ಸುಮಾರು ಹತ್ತು ಲಕ್ಷ ಜನರು ನಿರುದ್ಯೋಗಿ ಆಗಲಿದ್ದಾರಂತೆ. ನಮ್ಮ ದೇಶದ ಜನರ ಜೀವನಮಟ್ಟ ಏರುತ್ತಾ ಹೋದಂತೆ ಮನೆಯಲ್ಲಿ ಅಲಂಕಾರಿಕ ಮೀನುಗಳ ಅಕ್ವೆರಿಯಮ್ ಇಡುವುದು ಜನಪ್ರಿಯವಾಗುತ್ತಿದೆ. ಮೇಲಾಗಿ ಕೆಲವು ಜಾತಿಯ ಮೀನು ಸಾಕುವುದು ಫೆಂಗ್-ಶ್ವೇ ವಾಸ್ತು ಪ್ರಕಾರ ಅದೃಷ್ಟದಾಯಕ ಎಂದು ವಿದ್ಯಾವಂತರೂ ನಂಬುತ್ತಾರೆ. ಹಾಗಾಗಿ ಅಲಂಕಾರಿಕ ಮೀನುಗಳ ಬ್ರೀಡಿಂಗ್ ಮತ್ತು ಅವುಗಳ ಆಹಾರ ಮಾರುವುದು, ಜತೆಗೆ ಗಾಜಿನ ಅಕ್ವೆರಿಯಮ್ ತಯಾರಿಸುವುದು ಮತ್ತು ತಿಂಗಳಿಗೊಮ್ಮೆ ಮನೆಗಳಲ್ಲಿ ಅಥವಾ ಅಂಗಡಿಗಳಲ್ಲಿ ಇಟ್ಟಿರುವ ಅಕ್ವೆರಿಯಮ್ ಸ್ವಚ್ಛಗೊಳಿಸುವ ಮೆಂಟೇನನ್ಸ್ ಕೆಲಸಗಳು ಈಗ ದೊಡ್ಡ ಸಂಖ್ಯೆಯಲ್ಲಿ ಮುಂಬೈ ದಿಲ್ಲಿ ಬೆಂಗಳೂರಿನಂತಹ ಮಹಾನಗರಗಳಲ್ಲಿ ಅರೆ-ಸಾಕ್ಷರರಿಗಾಗಿ ಸೃಷ್ಟಿಯಾಗಿವೆ. ಆದರೆ ಮೋದಿ ಸರಕಾರದ ಶತಮೂರ್ಖ ನಿರ್ಬಂಧದಿಂದಾಗಿ ಈ ವ್ಯಾಪಾರ ಬಂದ್ ಆಗಿ ಲಕ್ಷಾಂತರ ಜನರು ನಿರುದ್ಯೋಗಿ ಆಗಲಿದ್ದಾರೆ. ಮೋದಿ ಅಧಿಕಾರಕ್ಕೆ ಬಂದಮೇಲೆ ಹಿಂದಿನ ಮೂರು ವರ್ಷಗಳಲ್ಲಿ ಹೊಸ ಉದ್ಯೋಗ ಸೃಷ್ಟಿಯಾಗುವ ಮಾತು ಒತ್ತಟ್ಟಿಗಿರಲಿ, ನೋಟು ರದ್ದತಿ ಸಹಿತ ವಿವಿಧ ನಿರ್ಬಂಧಗಳಿಂದಾಗಿ ಈಗಾಗಲೇ ಇದ್ದ ಹಳೆಯ ಉದ್ಯೋಗ, ಸ್ವ-ಉದ್ಯೋಗ, ಸಣ್ಣ ವ್ಯಾಪಾರ, ಮುಂತಾದ ಅಸಂಘಟಿತ ವಲಯದಲ್ಲಿಯ ಸುಮಾರು ಎರಡು ಕೋಟಿ ಜನರು ತಮ್ಮ ಜೀವನಾಧಾರ ಕಳೆದುಕೊಂಡು ಬೀದಿಗೆ ಬಿದ್ದಿದ್ದಾರೆ. ಆದರೂ ಮೋದಿಯ ಹುಂಬ ಭಕ್ತಗಣ ಮೋದಿ ಅಧಿಕಾರಕ್ಕೆ ಬಂದಮೇಲೆ ದೇಶ ಅಭಿವೃದ್ಧಿ ಆಗುತ್ತಿದೆ ಹಾಗೂ ಹೆಚ್ಚೆಚ್ಚು ಜನಗಳಿಗೆ ನೌಕರಿ ಸಿಗುತ್ತಿದೆ ಎಂದು ಮಹಾ ಸುಳ್ಳುಭರಿತ ಪ್ರಚಾರ ಮಾಡುತ್ತಿದ್ದಾರೆ. ಈ ರೀತಿಯ ಸುಳ್ಳುಗಳಿಂದಲೇ ಜನರನ್ನು ವಂಚಿಸುತ್ತಾ ಚುನಾವಣೆಗಳನ್ನು ಗೆಲ್ಲುತ್ತಾ ಸರಕಾರ ಸಾಗಿರುವುದು ದೇಶದ ಹಿತದ ದೃ... ದೂರಗಾಮಿ ಅನಾಹುತ ಮಾಡುವಂತಹದ್ದು ... ಜಾಹಿರಾತಿನ ಆಸೆಗೆ ಬಿದ್ದಿರುವ ಮಾಧ್ಯಮಗಳು ... ಜನರ ಕಣ್ಣು ತೆರೆಸುವ ಕಾರ್ಯ ಮಾಡುತ್ತಲೇ ...

ಒಂದಲ್ಲ ಒಂದು ದಿನ ಇಡೀ ಭಾರತವನ್ನು ಸ... ಸಸ್ಯಾಹಾರಿ ದೇಶವನ್ನಾಗಿ ಮಾಡುವ ಗುಪ್ತ ... ಆರೆಸ್ಸೆಸ್ ಹೊಂದಿದೆಯೆಂದು ಸಂಘಪರಿವಾ... ಒಪ್ಪುತ್ತಿದ್ದಾರೆ. ಅದರ ಮೊದಲ ಹೆಜ್ಜೆಯಾಗಿ ಗ... ರಾಜ್ಯವನ್ನು ಕ್ರಮೇಣ ಪೂರ್ಣ ಸಸ್ಯಾಹಾರಿ... ಮಾಡುವುದಾಗಿ ಅಲ್ಲಿಯ ಮುಖ್ಯಮಂತ್ರಿ ವಿಜಯ... ಎಂಬ ಜೈನ ಇತ್ತೀಚೆಗೆ ಬಹಿರಂಗವಾಗಿ ಘೋ... ಅದಕ್ಕಾಗಿ ಅಲ್ಲಿಯ ಗುಜರಾತಿ ಭಾಷೆಯ ... ಮಾಂಸಾಹಾರದ ರೆಸಿಪಿಗಳನ್ನು ಪ್ರಸಾರ ಮಾಡದಂ... ಹೇಳಿದ್ದಾನಂತೆ. ಇದು ದಲಿತ ಮತ್ತು ಅಲ್ಪಸ... ಆಹಾರ ಕ್ರಮದ ಮೇಲೆ ನೇರ ಪ್ರಹಾರ. ಅದೇ... ಶೇ.80 ಮಾಂಸಾಹಾರಿಗಳಿರುವ ಉತ್ತರ ಪ್ರ... ಕಾವಿಧಾರಿಯೊಬ್ಬ ಮುಖ್ಯಮಂತ್ರಿ ಆದ ಮೇಲೆ ... ಮಾಂಸದ ಅಂಗಡಿಗಳನ್ನು ಕುಂಟನೆಪದಲ್ಲಿ... ಮಾಡಿಸುತ್ತಿರುವುದು ಎಲ್ಲರಿಗೂ ಗೊತ್ತಿದೆ... ಕರ್ನಾಟಕದಲ್ಲೂ 2018 ರಲ್ಲಿ ಬಿಜೆಪಿ ಅಧಿಕಾರಕ್ಕೆ... ಇಲ್ಲಿಯೂ ಮಾಂಸ-ಮೀನಿನ ಅಂಗಡಿ ... ಆಗಬಹುದು. ಕರಾವಳಿಯ ಮೀನುಗಾರ ಮ... ಗಂಗಮತಸ್ಥ ಸಮುದಾಯದವರು ನಿರುದ್ಯೋ... ಮೀನಿನ ಬುಟ್ಟಿಯಲ್ಲಿ ಬದನೆಕಾಯಿ ಮಾರಲು... ನಿಂದಲೇ ತಯಾರಾಗಿರಬೇಕು. ಕನ್ನಡ ಟಿವಿ ಚಾನ... ಮಾಂಸಾಹಾರ ರೆಸಿಪಿಯ ರವಿವಾರದ ಬಾಡೂಟ,... ಮಿಲಿಟರಿ ಹೊಟೇಲ್ ಮುಂತಾದ ಕಾರ್ಯಕ್ರ... ನಿಲ್ಲಿಸಬೇಕಾಗಬಹುದೇನೋ! ಕಳೆದ ತಿಂಗಳು ... ಭಾರತದಾದ್ಯಂತ ಗೋಹತ್ಯೆ ನಿಷೇಧದ ಹೊಸ ... ಗಳನ್ನು ಹೇರಿದ್ದು ಸಹ ಭಾರತವನ್ನು ಗೋಮಾಂ... ಮಾತ್ರವಲ್ಲ ಎಲ್ಲಾ ತರದ ಮಾಂಸ- ಮೀನು ಮ... ಮಾಡುವ ಮೊದಲ ಹೆಜ್ಜೆ ಎಂದು ವಿಶ್ಲೇಷಿಸಲು...

ಡೆಕ್ಕನ್ ಏವಿಯೇಶನ್ ಕಂಪನಿ ಸ... ಕ್ಯಾ.ಗೋಪಿನಾಥ್ ಇವರು ಕಟ್ಟಾ ಬ್ರಾಹ್ಮಣರಾ... ಮಿಲಿಟರಿ ಸೇರುವ ಮೊದಲು ಎಂದೂ ಮಾ... ಸೇವಿಸಿಯೇ ಇರಲಿಲ್ಲವಂತೆ. ಆದರೆ ಸೇನೆ ಸೇರಿದ... ಅವರು ಇತರರಂತೆ ಎಲ್ಲಾ ತರದ ಮಾಂಸ ... ಸೇವಿಸುವುದು ಅನಿವಾರ್ಯವಾಯಿತಂತೆ. ಇದು ... ಕನ್ನಡ ಪತ್ರಿಕೆಯಲ್ಲಿ ಅವರೇ ಬರೆದಿರುವ ಲೇ... ಹೇಳಿರುವುದು. ದನದ ಮಾಂಸ ಸೇವಿಸಬೇಕು ... ಗೋಮಾಂಸ ನಿಷೇಧಿಸಬೇಕು ಎಂದು ಯಾರಿ... ನಿರ್ಬಂಧಿಸುವ ನೈತಿಕ ಅಧಿಕಾರ ನಾವು ಹೊಂದಿರು... ಎಂಬ ಪ್ರಶ್ನೆಗೆ ಗೋಪಿನಾಥರು ಮಹಾತ್ಮ ಗ... ಕೊಟ್ಟಿದ್ದ ಉತ್ತರವನ್ನು ಈ ರೀತಿ ಉಲ್ಲೇಖಿ... "ಗೋಹತ್ಯೆ ಮೇಲ್ಜಾತಿ ಹಿಂದೂಗಳಲ್ಲಿ ನಿಷಿದ್ಧ ಎಂ... ನಾನು ಅನುಮಾನಿಸುವುದಿಲ್ಲ. ಗೋವಿನ ಸೇವೆಗ... ಪ್ರಮಾಣವನ್ನು ನಾನು (ಗಾಂಧಿ) ಹಿಂದೆಯೇ ಮಾ... ಆದರೆ ನನ್ನ ಧರ್ಮವು ಎಲ್ಲ ಭಾರತೀಯರ ... ಆಗುವುದು ಹೇಗೆ ಸಾಧ್ಯ? ಹಾಗೆ ಮಾಡುವುದು, ... ಅಲ್ಲದ ಅಮಾಯಕ ಭಾರತೀಯರ ಮೇಲೆ ಕಠಿ... ವಿಧಿಸಿದಂತೆ ಆಗುತ್ತದೆ" ಎಂದು ಗಾಂಧೀಜಿ... ಹೇಳಿದ್ದರು.

ಮಾಂಸಾಹಾರ ಸೇವಿಸುವವರು "ಅನಾಗರಿಕರು...

ಬಸವಪ್ರಣೀತ ಮಠಾಧೀಶರ ಜಾಣ ಮೌನವೇಕೆ?



ಕರ್ನಾಟಕದ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯನವರು ಲಿಂಗಾಯತ ಧರ್ಮವು ಶರಣರ ಸಾಮಾಜಿಕ ಕಳಕಳಿ, ಸಮಾನತೆ ತತ್ವಗಳನ್ನು ಹೊಂದಿದ ಧರ್ಮವಾಗಿದ್ದು ಇದನ್ನು ಸ್ವತಂತ್ರ ಧರ್ಮದವೆಂದು ಘೋಷಣೆ ಮಾಡಲು ಕೇಂದ್ರ ಸರಕಾರಕ್ಕೆ ಶಿಫಾರಸು ಮಾಡುವುದಾಗಿ ಇತ್ತೀಚೆಗೆ ಹೇಳಿರುವುದು ಸ್ವಾಗತಾರ್ಹವಾಗಿದೆ.

"ಬಸವಣ್ಣ ಈ ಜಗವು ಕಂಡ ಶ್ರೇಷ್ಠ ಸಮಾಜವಾದಿ ಹಾಗು ಚಿಂತಕ, ಕನ್ನಡ ನೆಲದ ಕ್ರಾಂತಿ ಪುರುಷ, ಇವರ ತತ್ವಗಳು ಜಗತ್ತಿಗೆ ಮಾದರಿಯಾಗಿವೆ" ಎಂದು ಸಿದ್ದರಾಮಯ್ಯ ಅಭಿಪ್ರಾಯಪಟ್ಟಿದ್ದಾರೆ. ಬಸವಣ್ಣನವರು ಸ್ಥಾಪಿಸಿದ ಲಿಂಗಾಯತ ಧರ್ಮವು ವರ್ಗರಹಿತ, ವರ್ಣರಹಿತ, ಲಿಂಗ ಭೇದ ರಹಿತ, ಆಶ್ರಮ ಭೇದ ರಹಿತ ಮತ್ತು ಸ್ಥಾವರ ವಿರೋಧಿ ನೀತಿ ಹೊಂದಿದ ಜಾತ್ಯತೀತ ಧರ್ಮವಾಗಿದ್ದು ಅವರ ತತ್ವ ಪಾಲನೆ ಮಾಡುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ.

ಇದೇ ಸಂದರ್ಭದಲ್ಲಿ ಕೆಲವರು "ವೀರಶೈವ ಲಿಂಗಾಯತ ಧರ್ಮ"ವೆಂದು ಶಿಫಾರಸು ಮಾಡಲು ಸರಕಾರಕ್ಕೆ ಒತ್ತಾಯ ಮಾಡಿದ್ದಾರೆ. ಇದು ಸಂಪೂರ್ಣ ತಪ್ಪು ಗ್ರಹಿಕೆಯಿಂದ ಕೂಡಿದ್ದಾಗಿದೆ. ವೀರಶೈವವು ಶೈವ ಪಂಥದ ಒಂದು ಭಾಗ. ಅದಕ್ಕೂ ಲಿಂಗಾಯತ ಧರ್ಮಕ್ಕೂ ಯಾವುದೇ ಸಂಬಂಧವಿಲ್ಲ. ವೇದ ಆಗಮ ಶಾಸ್ತ್ರ ಮಾನ್ಯತೆ ಮಾಡಿ ಗಣಪತಿ ನಂದಿ ವೀರಭದ್ರ ಶಿವನನ್ನು ಆರಾಧಿಸುವವರು ಮತ್ತು ಸ್ಥಾವರ ಲಿಂಗ ಪೂಜಕರು ಲಿಂಗಾಯತರಾಗಲು ಹೇಗೆ ಸಾಧ್ಯವಾದೀತು?

ಇತ್ತೀಚೆಗೆ ವಿಜಯಪುರದ ಮಹಿಳಾ ವಿಶ್ವವಿದ್ಯಾಲಯಕ್ಕೆ ಅಕ್ಕ ಮಹಾದೇವಿ ಹೆಸರು ಇಟ್ಟು ಜನರಿಗೆ ತಾವು ಶರಣ ಸಂಸ್ಕೃತ ಸಂಪನ್ನ ಪರಂಪರೆಗೆ ಬದ್ಧ ಎಂದು ತೋರಿಕೊಟ್ಟಿದ್ದಾರೆ ಸಿದ್ದರಾಮಯ್ಯ. ಹಾಗೆಯೇ ಕಲ್ಬುರ್ಗಿ ವಿಶ್ವವಿದ್ಯಾಲಯಕ್ಕೆ ಜಗಜ್ಯೋತಿ ಬಸವಣ್ಣನವರ ಹೆಸರನ್ನು ಇಡಲು ಮುಂದಾಗಿರುವುದು ಸ್ವಾಗತಾರ್ಹವಾದ ಬೆಳವಣಿಗೆಯಾಗಿದೆ.

ಮುಖ್ಯಮಂತ್ರಿಯವರ ಈ ನಿರ್ಧಾರದಿಂದ ವೈದಿಕರಿಗಿಂತ ವೀರಶೈವರಿಗೆ ಆಘಾತವಾದಂತೆ ಭಾಸವಾಗುತ್ತಿದೆ. ಮುಖ್ಯಮಂತ್ರಿಯವರ ಹೇಳಿಕೆಯ ಮರುದಿನದಿಂದ ವೀರಶೈವ ಜಗದ್ಗುರುಗಳು, ಪೀಠಾಧಿಪತಿಗಳು ಲಿಂಗಾಯತ ಸ್ವತಂತ್ರ ಧರ್ಮ ಶಿಫಾರಸಿಗೆ ತಮ್ಮ ಪರೋಕ್ಷ ವಿರೋಧ ವ್ಯಕ್ತಪಡಿಸುತ್ತಿದ್ದಾರೆ.

ಪತ್ರಿಕಾ ಹೇಳಿಕೆಗಳಲ್ಲಿ ಮತ್ತು ಸಾಮಾಜಿಕ ಜಾಲತಾಣಗಳಲ್ಲಿ ಇಲ್ಲಸಲ್ಲದ ಕಪೋಲಕಲ್ಪಿತ ಪೌರಾಣಿಕ ಕತೆಗಳನ್ನು ಮತ್ತು ವೀರಶೈವ ಚರಿತ್ರೆಯ ಗೊಡ್ಡು ದಾಖಲೆಗಳನ್ನು ಪ್ರದರ್ಶಿಸುವ ದಡ್ಡತನವನ್ನು ಮಾಡುತ್ತಿದ್ದಾರೆ. ವೀರಶೈವರ ಪರ ಅಬ್ಬರದ ಹೇಳಿಕೆಗಳು ಪ್ರತಿದಿನ ಬರುತ್ತಿದ್ದರೂ ಬಸವ ಪ್ರಣೀತ ಮಠಾಧೀಶರು ಜಾಣ ಮೌನ ವಹಿಸಿರುವುದು ಅತ್ಯಂತ ಖೇದಕರ ಸಂಗತಿಯಾಗಿದೆ. ಪುರಾಣ ಪ್ರವಚನ ಸಭೆ ಸಮಾರಂಭಗಳಲ್ಲಿ ಅಪ್ಪ ಬಸವಣ್ಣನವರು ಸ್ಥಾಪಿಸಿದ ಲಿಂಗಾಯತ ಧರ್ಮವು ಸ್ವತಂತ್ರ ಧರ್ಮವೆಂದು ಕೂಗುವ ಈ ಸ್ವಾಮಿಗಳು ಪಂಚ ಪೀಠದವರ ಅಭಿಪ್ರಾಯದ ಮುಂದೆ ಏಕೆ ಮೌನಕ್ಕೆ ಜಾರಿದ್ದಾರೆ? ವಿರಕ್ತ ಮಠಗಳು, ಬಸವಣ್ಣನವರ ಹೆಸರು ಹೇಳಿಕೊಂಡು ಬದುಕುವ ಮಠಗಳು ಇಂತಹ ಸಂದರ್ಭದಲ್ಲಿಯೂ ಶಾಂತವಾಗಿರುವುದು ಇವರ ಮನದೊಳಗಿನ ದುರುದ್ದೇಶದ ಬಗ್ಗೆ ಜನರಲ್ಲಿ ಸಂಶಯ ಮೂಡಿಸುತ್ತಿವೆ.

ವೀರಶೈವರು ಅನಾಥವಾದ ವಚನಸಾಹಿತ್ಯದ ಸಂಕಲನ ಕಾಲದಲ್ಲಿ ವಚನಗಳಲ್ಲಿ ಕಲಬೆರಕೆ ಮಾಡಿ 'ವೀರಶೈವ' ಪದ ಸೇರಿಸಿದರು. 12ನೇ ಶತಮಾನದಲ್ಲಿ ಶರಣರು ಬರೆದ ಸಾವಿರಾರು ವಚನಗಳಲ್ಲಿ ಇಂದು ಕೃತ್ರಿಮತೆ ಸಂಸ್ಕೃತ ಶ್ಲೋಕ, ವೇದ, ಉಪನಿಷದ್‌ಗಳು ಕಂಡುಬರುತ್ತವೆ. ಇದು ವೈದಿಕರ, ಪುರೋಹಿತರ ಕುಚೇಷ್ಟೆ ಎಂದೇ ಹೇಳಬೇಕು. ವೀರಶೈವವೆಂಬುದು ಒಂದು ವ್ರತ, ಅದು ಜಾತಿ ಧರ್ಮವಲ್ಲ.

ಯಾರೂ ಬಸವಣ್ಣನವರು ಸ್ಥಾಪಿಸಿದ ಲಿಂಗಾಯತ ಧರ್ಮವನ್ನು ಅಲ್ಲಗಳೆಯುವ ಹಾಗಿಲ್ಲ. ನಮ್ಮ ಹೋರಾಟ ಲಿಂಗಾಯತ ಸ್ವತಂತ್ರ ಧರ್ಮದ್ದು. ವೇದ ಆಗಮ ಮಾನ್ಯ ಮಾಡುವ ವೀರಶೈವರು ಲಿಂಗಾಯತರು ಹೇಗೆ ಆಗುತ್ತಾರೆ. ಇವೆರಡೂ ಎಂದಿಗೂ ಸೈದ್ಧಾಂತಿಕವಾಗಿ ಒಂದಾಗಲು ಸಾಧ್ಯವಿಲ್ಲ. ಲಿಂಗಾಯತ ಧರ್ಮವು ಬಡವರ ದಲಿತರ ಅಸ್ಪೃಶ್ಯರ ಶೋಷಿತರ ಮಹಿಳೆಯರ ಧರ್ಮ.

ಕಲ್ಯಾಣ ಕ್ರಾಂತಿಯ ನಂತರದಲ್ಲಿ ಬಸವಣ್ಣನವರು ಸ್ಥಾಪಿಸಿದ ಲಿಂಗಾಯತ ಧರ್ಮಕ್ಕೆ ಮಾನ್ಯತೆ ದೊರೆಯುವಲ್ಲಿ 900 ವರ್ಷಗಳೇ ಕಳೆದುಹೋಗಿವೆ. ಆದ್ದರಿಂದ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಬಸವ ಸಮಿತಿ ಬೆಂಗಳೂರು, ಗದಗ ಇಳಕಲ್ ಬೆಳಗಾವಿ ಚಿತ್ರದುರ್ಗ ಶ್ರೀಗಳು ಭಕ್ತರ ಮನದೊಳಗಿನ ಗೊಂದಲ ನಿವಾರಣೆ ಮಾಡಲು ಬೀದಿಗಿಳಿದು ಹೋರಾಟ ಮಾಡಬೇಕು. ಇಲ್ಲದಿದ್ದರೆ ಬಸವ ಭಕ್ತರ ಆಕ್ರೋಶಕ್ಕೆ ಗುರಿಯಾಗುತ್ತಾರೆ.

ಮಠಗಳಲ್ಲಿ ಇರಬೇಕಾದದ್ದು ಬಸವ ಪ್ರಜ್ಞೆಯೇ ಹೊರತು ಜಾತಿಯಲ್ಲ. ಮಠಗಳು ಇನ್ನು ತಮ್ಮ ವ್ಯವಹಾರ ಬದಿಗಿಟ್ಟು ಹೋರಾಟಕ್ಕೆ ಮುನ್ನುಗ್ಗಲಿ. ಇಲ್ಲದಿದ್ದರೆ ಸಂಘರ್ಷಕ್ಕೆ ಗುರಿಯಾಗುವ ಎಲ್ಲ ಲಕ್ಷಣಗಳು ಕಂಡುಬರುತ್ತಿವೆ.

- ಡಾ.ಶಶಿಕಾಂತ ಪಟ್ಟಣ, ರಾಮದುರ್ಗ

...ಪವಿತ್ರರು" ಎಂಬ ಭಾವನೆ ಹುಟ್ಟಿಸುವ ಮನೋವೈಜ್ಞಾನಿಕ ತಂತ್ರವನ್ನು ಕೇಸರಿ ಕುತಂತ್ರಿಗಳು ಎಲ್ಲೆಡೆ ಹಬ್ಬಿಸಲು ಹುನ್ನಾರು ನಡೆಸಿರುವರು. ಸಸ್ಯಾಹಾರ ಮಾತ್ರ ಸಾತ್ವಿಕ ನಾಗರಿಕ ಪದ್ಧತಿ ಹಾಗೂ ಅದುವೇ ದೇವರಿಗೂ ಇಷ್ಟ ಎಂಬುದು ಹಲವು ಮೂರ್ಖರ ನಂಬಿಕೆ. ಹಿಟ್ಲರ್‌ನಂತಹ ಘೋರ ನರಹಂತಕ ಕೂಡಾ ಸಸ್ಯಾಹಾರಿ ಆಗಿದ್ದ ಎಂದು ಹೆಚ್ಚಿನವರಿಗೆ ತಿಳಿದಿಲ್ಲ. ಐನ್‌ಸ್ಟೈನ್, ನ್ಯೂಟನ್, ಗೆಲಿಲಿಯೋ ಮುಂತಾದ ಮಾಂಸಾಹಾರಿ ವಿಜ್ಞಾನಿಗಳಿಂದಾಗಿ ಜಗತ್ತು ಇಂದು ವೈಜ್ಞಾನಿಕವಾಗಿ ಇಷ್ಟೊಂದು ಮುಂದುವರಿದಿದೆ. ನಾವು ದೇವರೆಂದು ನಂಬುವ ರಾಮ- ಕೃಷ್ಣ- ದುರ್ಗಾ ಇವರೆಲ್ಲಾ ಮಾಂಸಾಹಾರಿಗಳಾಗಿದ್ದರು ಎಂದು ನಮ್ಮ ಪುರಾಣದಲ್ಲಿಯೇ ಸ್ಪಷ್ಟ ಉಲ್ಲೇಖವಿದೆ. ನಾವು ನಾಗರಹಾವನ್ನು ದೇವರೆಂದು ಪೂಜಿಸಿ ಅದರ ಪೂಜೆಯ ಸಮಯದಲ್ಲಿ ಕಡ್ಡಾಯವಾಗಿ ಸಸ್ಯಾಹಾರಿ ಆಗಿರುತ್ತೇವೆ. ಆದರೆ ನಿಜವಾದ ನಾಗರಹಾವಿಗೆ ಎಷ್ಟೇ ಹಸಿವಾಗಿರಲಿ ಅದು ಎಂದೂ ಸಸ್ಯಾಹಾರ ಮುಟ್ಟುವುದಿಲ್ಲ. ನಾಗರಹಾವು ಕೇವಲ ಇಲಿ ಕಪ್ಪೆ ಓತಿಖ್ಯಾತ, ಸಣ್ಣ ಹಾವು, ಹಕ್ಕಿ ಮರಿಗಳನ್ನೇ ತಿಂದು ಜೀವಿಸುತ್ತದೆ. ಆದರೂ ಅದನ್ನು ದೇವರೆಂದು ಹಿಂದೂಗಳು ಪೂಜಿಸುತ್ತಾರೆ. ರಾಮನು ಸೀತೆಯೊಟ್ಟಿಗೆ ಮದಿರೆ ಮತ್ತು ಮಾಂಸ ಸೇವಿಸುವ ಉಲ್ಲೇಖ ವಾಲ್ಮೀಕಿ ರಾಮಾಯಣದಲ್ಲಿ ಇದೆ. ಕೃಷ್ಣ ಮತ್ತು ಅರ್ಜುನ ಬೇಟೆಗೆ ಹೋಗಿ ಕಾಡುಹಂದಿ ಜಿಂಕೆ ಕೊಲ್ಲುತ್ತಿದ್ದ ಉಲ್ಲೇಖ ಮಹಾಭಾರತ ಮತ್ತು ಶ್ರೀಶೈಲ ಮಹಾತ್ಮೆ ಎಂಬ ಕ್ಷೇತ್ರ ಪುರಾಣದಲ್ಲಿ ಇದೆ.

ಪ್ರಕೃತಿಯೇ ಮಾನವನನ್ನು ಮಿಶ್ರಾಹಾರಿ ಆಗಿ ಹುಟ್ಟಿಸಿದೆ. ಅದಕ್ಕಾಗಿ ಮನುಷ್ಯನ ಜೀರ್ಣಾಂಗ ಸಸ್ಯಾಹಾರ ಮತ್ತು ಮಾಂಸಾಹಾರ ಎರಡನ್ನೂ ಜೀರ್ಣಿಸಲು ಮಾಡಲ್ಪಟ್ಟಿದೆ. ಜಿಂಕೆ ಕಡವೆ ಆಡು ಕುದುರೆ ದನ ಆನೆ ಜಿರಾಫೆ ಮುಂತಾದ ಮೃಗಗಳ ಜೀರ್ಣಾಂಗ ಕೇವಲ ಸಸ್ಯಾಹಾರ ಜೀರ್ಣಿಸಲು ಮಾತ್ರ ಶಕ್ತವಾಗಿವೆ. ಹಾಗೆಯೇ ಚಿರತೆ ಹುಲಿ ಸಿಂಹದ ಜೀರ್ಣಾಂಗ ಕೇವಲ ಮಾಂಸಾಹಾರ ಜೀರ್ಣಿಸಲು ಶಕ್ತವಾಗಿವೆ. ಆದರೆ ಕರಡಿ ಚಿಂಪಾಂಜಿ ವಾನರ ನಾಯಿ ಬೆಕ್ಕು ಮತ್ತು ಪಕ್ಷಿ ಜಾತಿಯ ಜೀವಿಗಳ ಜೀರ್ಣಾಂಗ ಎರಡೂ ತರದ ಆಹಾರ ಜೀರ್ಣಿಸುವ ಶಕ್ತಿ ಹೊಂದಿದ್ದು ಅವು ಉಭಯಹಾರಿ ಅರ್ಥಾತ್ ಮಿಶ್ರಾಹಾರಿ ಆಗಿವೆ. ಜೀವಿಗಳ ಆಹಾರ ಕ್ರಮದ ವಿಷಯದಲ್ಲಿ ಪ್ರಕೃತಿಯ ನಿರ್ಣಯವೇ ಅಂತಿಮ. ಅದನ್ನು ದೇವರೂ ಸಹ ಪ್ರಶ್ನಿಸಲು ಸಾಧ್ಯವಿಲ್ಲ.

ಜಗತ್ತಿನ ಎಲ್ಲೆಡೆಯೂ ನಾಗರಿಕತೆ ಹುಟ್ಟಿದ್ದು ನದಿ ತೀರದಲ್ಲಿ ಅಥವಾ ಸಮುದ್ರ ತಟದಲ್ಲಿ. ಹಾಗಾಗಿ ಆಗ ಆ ಜನರ ಮುಖ್ಯ ಆಹಾರ ಮೀನು ಆಗಿತ್ತು ಅಷ್ಟೇ. ಮೊದಲು ಕೇವಲ ಸಂಚಾರಿ ಬೇಟೆಗಾರ ಮತ್ತು ಮೀನುಗಾರನಾಗಿದ್ದ ಮಾನವನು ನಂತರ ಒಂದೆಡೆ ನೆಲೆ ನಿಂತು ಒಕ್ಕಲುತನ ಹಾಗೂ ಆಹಾರಕ್ಕಾಗಿ ಪಶು ಸಾಕಣೆ ಶುರು ಮಾಡಿದನು. ಹಣ್ಣು ಹಣ್ಣು ಮುದುಕ ಪರಾಶರ ಮುನಿ ಸತ್ಯವತಿ ಎಂಬ ಮೀನುಗಾರ ಕನ್ಯೆಯನ್ನು ಅವಳ ದೋಣಿಯಲ್ಲಿಯೇ ರೇಪ್ ಮಾಡಿ ವೇದವ್ಯಾಸನನ್ನು ಹುಟ್ಟಿಸಿದ್ದು ಅವನು ಮೀನು ತಿಂದು ಮದಿರೆ ಕುಡಿದು ಮತ್ತೇರಿದ ನಂತರ ತಾನೇ. ಪರಾಶರ ಮುನಿ ಮೀನು ತಿನ್ನದೇ ಇದ್ದರೆ ಅವನಿಂದ ವೇದವ್ಯಾಸನನ್ನು ಹುಟ್ಟಿಸಲು ಆಗುತ್ತಲೇ ಇರಲಿಲ್ಲ ಹಾಗೂ ವ್ಯಾಸನಿಂದ ವೇದಗಳು ಮತ್ತು ಮಹಾಭಾರತ ರಚನೆ ಆಗುತ್ತಲೂ ಇರಲಿಲ್ಲ. ಹೀಗೆ ವೈದಿಕರ ಪೂಜ್ಯ ಗೋಪ್ರಿಯ ಕೃಷ್ಣನ ಕಥೆ ಬರೆದ ವ್ಯಾಸನ ಹುಟ್ಟಿಗೆ ಮಾಂಸಾಹಾರ ಹಾಗೂ ಮದಿರೆ ನೇರ ಕಾರಣ. ಕೃಷ್ಣನ ಮಾವ ಕಂಸ ಅಸುರ (ರಾಕ್ಷಸ) ಕುಲದವನು. ಹಾಗಾಗಿ ಅವನ ತಂಗಿ ದೇವಕಿ ಸಹ ಅಸುರ ಕುಲದವಳೇ ಆಗಿದ್ದಳು. ಆದುದರಿಂದ ಅವಳಿಗೆ ಹುಟ್ಟಿದ ಕೃಷ್ಣ ಸಹ ಅಸುರ ಕುಲದವನೇ ಆಗಿದ್ದ. ಮೇಲಾಗಿ ಕೃಷ್ಣ ಬೆಳೆದಿದ್ದು ಪಕ್ಕಾ ಮಾಂಸಾಹಾರಿ ಯಾದವ ಜಾತಿಯವರ ಮನೆಯಲ್ಲಿ. ಹಾಗಾಗಿ ಕೃಷ್ಣ ಮಾಂಸಾಹಾರಿ ಆಗಿರಲಿಲ್ಲ ಎಂದು ಹೇಳಲು ಪ್ರಮಾಣವೇ ಇಲ್ಲ. ವಾಲ್ಮೀಕಿಯೂ ಮಾಂಸಾಹಾರ ಸೇವಿಸಿಯೇ ರಾಮಾಯಣ ಬರೆದಿದ್ದು. ಅಗಸ್ತ್ಯ ಋಷಿ ವಾತಾಪಿ-ಇಲ್ವಲರ ಮನೆಯಲ್ಲಿ ಮೇಕೆಯ ಮಾಂಸ ಸೇವಿಸಿದ ಕಥೆ ಎಲ್ಲರಿಗೂ ಗೊತ್ತಿದೆ. ಚಕ್ರವರ್ತಿ ರಂತಿದೇವ ಬ್ರಾಹ್ಮಣರ ಭೋಜನಕ್ಕಾಗಿ ದಿನಾಲೂ ನೂರು ಆಕಳು ಕಡಿಯುತ್ತಿದ್ದದ್ದು ಸಹ ಬೃಹದಾರಣ್ಯಕೋಪನಿಷತ್‌ನಲ್ಲಿಯೇ ಉಲ್ಲೇಖಿಸಲಾಗಿದೆ.

ಬಂಗಾಳಿ ಬ್ರಾಹ್ಮಣರ ಹೋಮ ಹವನದಲ್ಲಿ ಆಡು ಅಥವಾ ಆಕಳ ಕರು ಬಲಿ ಕೊಟ್ಟು ಅದನ್ನು ಯಾಜ್ಞಿಕ ಬ್ರಾಹ್ಮಣರು ಅಲ್ಲಿಯೇ ಬೇಯಿಸಿ ತಿನ್ನುತ್ತಿದ್ದರು ಎಂದು ಸ್ವಾಮೀ ವಿವೇಕಾನಂದರೇ ಬರೆದಿದ್ದಾರೆ. ಯಜ್ಞದಲ್ಲಿ ಬಲಿಕೊಟ್ಟ ಪ್ರಾಣಿಯ ಮಾಂಸ ತಿನ್ನದವನು ಯಾಜ್ಞಿಕನಾಗಲು ಅರ್ಹನಲ್ಲ ಎಂಬ ನಿಯಮ ಆಗಿನ ಕಾಲದಲ್ಲಿ ಇತ್ತು ಎಂದು ವಿವೇಕಾನಂದರು ಉಲ್ಲೇಖಿಸಿದ್ದಾರೆ. ಕಾಶ್ಮೀರಿ ಬ್ರಾಹ್ಮಣರು, ಗೋವಾದ ಸಾರಸ್ವತರು ಮತ್ತು ಬೆಂಗಾಲಿ ಬ್ರಾಹ್ಮಣರು ಇವತ್ತಿಗೂ ಮೀನು ಮಾಂಸ ನಿತ್ಯ ಸೇವಿಸುತ್ತಾರೆ. ಇಷ್ಟೆಲ್ಲಾ ಇದ್ದರೂ ಬ್ರಾಹ್ಮಣ, ಬನಿಯಾ ಹಾಗೂ ಜೈನರಿಗೆ ಯಾವಾಗಲೂ ಬೇರೆಯವರ ಆಹಾರದ ಮೇಲೆ ಯಾಕೆ ಕೆಟ್ಟ ಕಣ್ಣು? ಯುರೋಪ್ ಅಮೆರಿಕ ಜಪಾನ್ ದೇಶಗಳ ವಿಜ್ಞಾನಿಗಳೆಲ್ಲಾ ನೂರಕ್ಕೆ ನೂರು ಮಾಂಸಾಹಾರಿಗಳು. ಹಾಗಾಗಿ ಮಾಂಸಾಹಾರಿಗಳು ಇರದಿದ್ದರೆ ವಿಜ್ಞಾನ ಬೆಳೆಯುತ್ತಿರಲಿಲ್ಲ. ವಿಜ್ಞಾನ ಇರದಿದ್ದರೆ ಇಂದು ನಾವು ಅದೇ ಮಧ್ಯಯುಗದ ಎತ್ತಿನ ಗಾಡಿಯ ಕಾಲದಲ್ಲಿಯೇ ಇರುತ್ತಿದ್ದೆವು. ಮೊಬೈಲ್ ಹಿಡಿದುಕೊಂಡು ಸಿಕ್ಕ ಸಿಕ್ಕಲ್ಲೆಲ್ಲಾ ಸೆಲ್ಫೀ ತೆಗೆಯುವುದು ಮೋದಿಗೆ ಸಾಧ್ಯವಾಗುತ್ತಿರಲಿಲ್ಲ. ನಾವು ಬಳಸುತ್ತಿರುವ ಸ್ಮಾರ್ಟ್ ಫೋನ್, ಕಂಪ್ಯೂಟರ್, ವಿಮಾನ, ವಾಹನಗಳೆಲ್ಲಾ ಮಾಂಸಾಹಾರಿಗಳ ಆವಿಷ್ಕಾರ! ಮಾಂಸಾಹಾರ ವರ್ಜ್ಯವಾದರೆ ಮಾಂಸಾಹಾರಿಗಳು ಆವಿಷ್ಕರಿಸಿರುವ ಇವೆಲ್ಲವನ್ನೂ ಯಾಕೆ ಸಸ್ಯಾಹಾರಿಗಳು ತ್ಯಜಿಸುವುದಿಲ್ಲ? ಮಾಂಸಾಹಾರಿ ವಿಜ್ಞಾನಿಗಳು ಇರದಿದ್ದರೆ ಬ್ರಾಹ್ಮಣರು ಮಧ್ಯಯುಗದಂತೆಯೇ ಪೂಜೆ ಹೋಮ ಹವನ ಮಾಡುತ್ತಾ ಭಿಕ್ಷೆ ಬೇಡುತ್ತಾ ಉಪಜೀವನ ನಡೆಸಬೇಕಿತ್ತು. ಈಗಿನಂತೆ ಕೋಟ್ಯಾಧೀಶ ಬ್ರಾಹ್ಮಣರು ಒಬ್ಬರೂ ಇರುತ್ತಿರಲಿಲ್ಲ. ಸಾಫ್ಟ್‌ವೇರ್ ಇಂಜಿನಿಯರ್, ಡಾಕ್ಟರ್ ಆಗಿ ಅಮೆರಿಕಕ್ಕೆ ಓಡುತ್ತಲೂ ಇರಲಿಲ್ಲ. ಹೀಗಾಗಿ ಸಸ್ಯಾಹಾರಿಗಳು ತಾವು ಮಾಂಸಾಹಾರಿಗಳಿಗಿಂತ ಶ್ರೇಷ್ಠರು ಎಂಬ ಪೂರ್ವಕಲ್ಪಿತ ಮನಸ್ಥಿತಿ ಇನ್ನಾದರೂ ತೊರೆಯಬೇಕು.

- ಲಿಂಗರಾಜರಾವ್ ಜಾಧವ್, ಬೆಳಗಾವಿ



ಸಾಧ್ವಿ ಸರಸ್ವತಿಯ ಹುಚ್ಚುಚ್ಚು ಹೇಳಿಕೆಗಳು



ಸನಾತನ ಸಂಸ್ಥೆಯ ಕೇಂದ್ರ ಸ್ಥಾನವಾದ ಗೋವಾದ ರಾಮನಾಥಿ ಆಶ್ರಮದಲ್ಲಿ ಜೂನ್ 16 ರಂದು ನಡೆದ ಅಖಿಲ ಭಾರತೀಯ 6ನೆ ಹಿಂದೂ ಅಧಿವೇಶನದಲ್ಲಿ ಮಾತನಾಡಿದ ಸಾಧ್ವಿ ಸರಸ್ವತಿ "ಯಾರು ಗೋಮಾಂಸವನ್ನು ಭಕ್ಷಣೆ ಮಾಡುತ್ತಾರೋ ಅವರನ್ನು ನೇಣಿಗೆ ಹಾಕಬೇಕು", "ಹಿಂದೂಗಳು ತಮ್ಮನ್ನು ತಾವು ರಕ್ಷಣೆ ಮಾಡಿಕೊಳ್ಳಲು ಮನೆಯಲ್ಲಿ ಆಯುಧಗಳನ್ನು ಇಟ್ಟುಕೊಳ್ಳಬೇಕು" ಎಂಬ ಪ್ರಚೋದನಕಾರಿ ಹೇಳಿಕೆಗಳನ್ನು ನೀಡಿದ್ದಾರೆಂದು ವರದಿಯಾಗಿದೆ (ವಿಜಯ ಕರ್ನಾಟಕ, 16 ಜೂನ್ 2017). ಸಾಧ್ವಿ ಸರಸ್ವತಿ ಮಧ್ಯಪ್ರದೇಶದ ಚಿಂದ್ವಾರಾದ ಸನಾತನ ಧರ್ಮ ಪ್ರಚಾರ ಸೇವಾ ಸಮಿತಿಯ ಅಧ್ಯಕ್ಷರೆಂದು ಹೇಳಲಾಗಿದೆ.

ಹಾಗೆ ನೋಡಿದರೆ ಸಾಧ್ವಿ ಸರಸ್ವತಿಯವರಿಗೆ ಇಂತಹ ದ್ವೇಷದ ಭಾಷಣಗಳು ಹೊಸ ವಿಚಾರವೇನೂ ಅಲ್ಲ. ಎರಡು ವರ್ಷಗಳ ಹಿಂದೆ ತಾರೀಕು 1-3-2015ರಂದು ವಿಶ್ವ ಹಿಂದೂ ಪರಿಷತ್‌ನ ಸುವರ್ಣ ಮಹೋತ್ಸವದ ಅಂಗವಾಗಿ ಮಂಗಳೂರಿನಲ್ಲಿ ನಡೆದಿದ್ದ ಹಿಂದೂ ಸಮಾಜೋತ್ಸವದಲ್ಲಿಯೂ ಈಕೆ ಇದೇ ರೀತಿಯ ಬೆಂಕಿಕಾರುವ ಭಾಷಣವೊಂದನ್ನು ಮಾಡಿದ್ದರು. ಈಕೆಯ ಅಂದಿನ ಕೆಲವು ಹೇಳಿಕೆಗಳು ಈ ಕೆಳಗಿನಂತಿವೆ:

"ಹಿಂದೂ ಹುಡುಗಿಯರಿಗೆ ತಲವಾರುಗಳನ್ನು ನೀಡಿ. ಯಾವುದೇ ಮುಸ್ಲಿಂ ಹಿಂದೂ ಹುಡುಗಿಯನ್ನು ಕತ್ತೆತ್ತಿ ನೋಡಿದರೆ ಆಕೆ ಆತನ ತಲೆ ಕಡಿಯಲಿ."

"ಕೆಲವೇ ಕೆಲವು ದೇಶದ್ರೋಹಿಗಳಿಂದಾಗಿ ಗೋಹತ್ಯೆ ಆಗುತ್ತಿದೆ. ಇದನ್ನು ತಡೆಗಟ್ಟಬೇಕು."

"ರಾಮಮಂದಿರ ನಿರ್ಮಾಣದ ನಿರ್ಣಯ ಕೋರ್ಟಿನಲ್ಲಿ ಆಗಬೇಕಿಲ್ಲ."

"ಮೊದಲು ಅಯೋಧ್ಯೆಯಲ್ಲಿ, ಬಳಿಕ ಪಾಕಿಸ್ತಾನದ ಇಸ್ಲಾಮಾಬಾದಿನಲ್ಲಿ ರಾಮ ಮಂದಿರ ನಿರ್ಮಾಣ ಮಾಡುತ್ತೇವೆ."

"ಭಾರತದಲ್ಲಿ ಬದುಕಬೇಕಾದರೆ ವಂದೇ ಮಾತರಂ ಹೇಳಲೇಬೇಕು."

"ಒಂದು ರೊಟ್ಟಿ ಮತ್ತು ಪ್ಯಾರಾಸಿಟಮಲ್ ಮಾತ್ರೆ ಕೊಟ್ಟು ಹಿಂದೂಗಳನ್ನು ಕ್ರೈಸ್ತ ಧರ್ಮಕ್ಕೆ ಮತಾಂತರ ಮಾಡಲಾಗುತ್ತಿದೆ."

"ಭಾರತದ ಮುಸ್ಲಿಮರು ಭಾರತದ್ದು ತಿಂದು ಪಾಕಿಸ್ತಾನಕ್ಕೆ ಜೈಕಾರ ಹಾಕುತ್ತಾರೆ."

- ಕರಾವಳಿ ಕರ್ನಾಟಕ.ಕಾಂ

ಇದನ್ನು ಪ್ರತಿಭಟಿಸಿ ತಾರೀಕು 5-3-2015ರಂದು ಕರ್ನಾಟಕ ಕೋಮು ಸೌಹಾರ್ದ ವೇದಿಕೆ ಮತ್ತು ಪಿಯುಸಿಎಲ್ ಜಂಟಿಯಾಗಿ ನೀಡಿದ ದೂರಿನ ಮೇರೆಗೆ ಅದೇ ದಿನ ಸಾಧ್ವಿ ಸರಸ್ವತಿ ವಿರುದ್ಧ ಎಫ್‌ಐಆರ್ (0038/2015) ದಾಖಲಾಗಿದೆ. ಆದರೆ ತುಂಬ ಬೇಸರದ ಸಂಗತಿ ಏನೆಂದರೆ ಎಫ್‌ಐಆರ್ ಆಗಿ ಇಂದಿಗೆ ಎರಡು ವರ್ಷಗಳೇ ಸಂದಿವೆಯಾದರೂ ಇದುವರೆಗೂ ಪೊಲೀಸರಿಂದ ಆರೋಪಪಟ್ಟಿ ಸಲ್ಲಿಕೆಯಾಗಿಲ್ಲ! ಪ್ರತಿಸಲ ವಿಚಾರಿಸಿದಾಗಲೂ "ಕಡತವನ್ನು ಸರಕಾರಕ್ಕೆ ಕಳುಹಿಸಲಾಗಿದೆ, ಅಲ್ಲಿಂದ ಅನುಮತಿ ಸಿಕ್ಕ ಬಳಿಕವೇ ಚಾರ್ಜ್‌ಶೀಟ್ ಹಾಕಲಾಗುವುದು" ಎಂಬ ಉತ್ತರ ದೊರಕುತ್ತಿದೆ. ಇದರಿಂದ ನಿರಾಸೆ, ಹತಾಶೆಯಷ್ಟೇ ಅಲ್ಲ ಕೆಲವೊಮ್ಮೆ ಕ್ರೋಧ ಉಕ್ಕೇರುತ್ತದೆ. ಸರಕಾರ ಅಂದರೆ ಯಾರು? ಅಧಿಕಾರಿಗಳೇ, ಗೃಹಸಚಿವರೇ ಅಥವಾ ಮುಖ್ಯಮಂತ್ರಿಗಳೇ? ಯಾರೇ ಇರಲಿ, ಅವರೇಕೆ ಇಷ್ಟೊಂದು ತಡ ಮಾಡುತ್ತಿದ್ದಾರೆ? ಈ ವಿಳಂಬದಿಂದಾಗಿ ಸಾಧ್ವಿ ಸರಸ್ವತಿಯವರಿಗೆ ಎಲ್ಲಿಲ್ಲದ ಧೈರ್ಯ ಬಂದುಬಿಟ್ಟಿರುವಂತಿದೆ. ಅಂತೆಯೇ ಮೊನ್ನೆ ಗೋವಾದಲ್ಲಿ ಮತ್ತೆ ಜನರನ್ನು ಪ್ರಚೋದಿಸುವ ಮಾತುಗಳನ್ನು ಆಡಿದ್ದಾರೆ. ಆದುದರಿಂದ ಸಾಧ್ವಿ ಸರಸ್ವತಿ ಪ್ರಕರಣದಲ್ಲಿ ಕರ್ನಾಟಕ ಸರಕಾರ ಇನ್ನು ತಡಮಾಡದೆ ಕೂಡಲೇ 'ಅನುಮತಿ' ನೀಡುವ ಮೂಲಕ ಆರೋಪಪಟ್ಟಿ ಸಲ್ಲಿಕೆಯಾಗುವಂತೆ ನೋಡಿಕೊಳ್ಳುವುದು ಅತ್ಯಗತ್ಯವಾಗಿದೆ. ಇಂತಹ ಪ್ರಕರಣಗಳಲ್ಲಿ ಒಂದು ತಿಂಗಳೊಳಗಾಗಿ ನ್ಯಾಯಾಲಯಕ್ಕೆ ಆರೋಪಪಟ್ಟಿ ಸಲ್ಲಿಕೆಯಾಗಿ ಮೂರು ತಿಂಗಳುಗಳೊಳಗಾಗಿ ತೀರ್ಪು ಬಂದಿತೆಂದಾದರೆ ಸಮಾಜದಲ್ಲಿ ದ್ವೇಷ ಮತ್ತು ಹಿಂಸೆಯ ವಾತಾವರಣವನ್ನು ಸೃಷ್ಟಿಸುವಲ್ಲಿ ಪ್ರಮುಖ ಪಾತ್ರ ವಹಿಸುವ ಇಂತಹ ಉದ್ರೇಕಕಾರಿ ಭಾಷಣಗಳಿಗೆ ಕಡಿವಾಣ ಹಾಕಲು ಸಾಧ್ಯವಾಗಬಹುದೆಂದು ನನ್ನ ಅನಿಸಿಕೆ.


-ಸುರೇಶ ಭಟ್ ಬಾಕ್ರಬೈಲು, ಮಂಗಳೂರು

07 ⏮ ಕೊಡಗು....

ಮತ್ತು ರೇವಣ್ಣನ ಬೇರೆಯದೇ ಇರಾದೆ ಇದೆ.

ರೇವಣ್ಣ ಹಾಗೂ ಬಿಜೆಪಿಯ ಬೋಪಯ್ಯ ಆಪ್ತರು. ಬೋಪಯ್ಯ ಅರೆಭಾಷೆ ಗೌಡ ಜನಾಂಗಕ್ಕೆ ಸೇರಿರುವುದು ಇದಕ್ಕೆ ಕಾರಣ. ಹಾಗಾಗಿ ರೇವಣ್ಣನ ಮೂಲಕ ಬೋಪಯ್ಯನೇ ಜೆಡಿಎಸ್‌ನಿಂದ ಫರೂಕ್ ಹೆಸರು ಸೂಚಿಸಿದ್ದಾರೆ ಎನ್ನುವ ಮಾತುಗಳು ಕೇಳಿಬರುತ್ತಿವೆ. ಯಾಕೆಂದರೆ ಫರೂಕ್ ಜೆಡಿಎಸ್ ಅಭ್ಯರ್ಥಿಯಾದರೆ, ಮುಸ್ಲಿಮರೆಲ್ಲರೂ ಜೆಡಿಎಸ್‌ಗೆ ಮತ ನೀಡುತ್ತಾರೆ. ಆಗ ಕಾಂಗ್ರೆಸ್ ತನ್ನ ಪರಂಪರಾಗತ ಮುಸ್ಲಿಂ ಮತಗಳನ್ನು ಕಳೆದುಕೊಂಡು ಸೊರಗುತ್ತದೆ. ಇನ್ನು ಮುಸ್ಲಿಂ ಅಭ್ಯರ್ಥಿಯ ಸ್ಪರ್ಧೆಯಿಂದ ಹಿಂದೂ-ಮುಸ್ಲಿಂ ಕಾಳಗವನ್ನಾಗಿಸೋದು ಬಿಜೆಪಿಗೆ ಕಷ್ಟವೇನೂ ಅಲ್ಲ. ಆಗ ಹಿಂದೂ ಮತಗಳು ಕೊಡವ, ಅರೆಭಾಷೆ ಗೌಡ ಜಾತಿಯನ್ನೂ ಮೀರಿ ಬಿಜೆಪಿಗೆ ಹರಿದುಬರುತ್ತವೆ. ಕೇವಲ ಮುಸ್ಲಿಂ ಮತಗಳಿಂದ ಜೆಡಿಎಸ್ ಅಂತೂ ಗೆಲ್ಲುವುದಿಲ್ಲ, ಮುಸ್ಲಿಂ ಮತಗಳಿಲ್ಲದೆ ಕಾಂಗ್ರೆಸ್ಸೂ ಗೆಲ್ಲುವುದಿಲ್ಲ. ಆಗ ಬಿಜೆಪಿಯ ಬೋಪಯ್ಯ ಸುಲಭವಾಗಿ ಗೆದ್ದುಬಿಡಬಹುದು ಎನ್ನುವುದು ಇದರ ಹಿಂದಿರುವ ಹುನ್ನಾರ.

ಮತ್ತೊಂದು ಕಡೆ ಜೀವಿಜಯರದ್ದೂ ಭಾರಿ ಲೆಕ್ಕಾಚಾರಗಳಿವೆ. ವಿರಾಜಪೇಟೆಯಲ್ಲಿ ತಮ್ಮ ಪಕ್ಷದಿಂದ ಮುಸ್ಲಿಂ ಅಭ್ಯರ್ಥಿಯನ್ನು ಕಣಕ್ಕಿಳಿಸಿದರೆ ಅದನ್ನೇ ನೆಪ ಮಾಡಿಕೊಂಡು ತನ್ನ ಮಡಿಕೇರಿ ಕ್ಷೇತ್ರದಲ್ಲಿ ಮುಸ್ಲಿಂ ಮತಗಳನ್ನು ಕೊಳ್ಳೆ ಹೊಡೆಯಬಹುದೆನ್ನುವುದು ಅವರ ತಂತ್ರ. ಅಲ್ಲದೇ ಕೊಡಗಿನ ಚುನಾವಣೆಯ ವೆಚ್ಚವೆಲ್ಲವನ್ನೂ ರೊಕ್ಕಸ್ಥ ಉದ್ಯಮಿ ಫರೂಕ್ ಹೆಗಲಿಗೆ ಹೊರಿಸಿ ತಾನು ನಿರಾಳವಾಗಬಹುದೆನ್ನುವ ಹಣಕಾಸು ಚಿಂತನೆಯೂ ಇದೆ. ಆದರೆ ತನ್ನ ಬುಡದಲ್ಲೇ ಇರುವ ಐಗೂರು ಗ್ರಾಮದಲ್ಲಿ ಇತ್ತೀಚೆಗೆ ಮಸೀದಿಯೊಂದರಲ್ಲಿ ಕುರಾನನ್ನು ಸುಟ್ಟು ಹಾಕಿ ಗಲಭೆ ಉಂಟಾದಾಗ ನೆಪಕ್ಕೂ ಅತ್ತ ಭೇಟಿ ಕೊಡದ ಜೀವಿಜಯ ಬಗ್ಗೆ ಅಲ್ಪಸಂಖ್ಯಾತರಿಗೆ ಕಿಂಚಿತ್ತೂ ಒಲವಿಲ್ಲ. ವಿರಾಜಪೇಟೆ ಕ್ಷೇತ್ರದಲ್ಲಿ 60 ಸಾವಿರ ಮುಸಲ್ಮಾನರಿದ್ದು ಅವರೆಲ್ಲ ಸಂಪೂರ್ಣವಾಗಿ ನಿಮ್ಮನ್ನು ಬೆಂಬಲಿಸುತ್ತಾರೆ ಎಂದು ಜೀವಿಜಯ ಫರೂಕ್‌ಗೆ ಆಸೆ ಹುಟ್ಟಿಸಿದ್ದಾರೆ. ಆದರೆ ವ್ಯಾಪಾರಿ ಬುದ್ಧಿಯ ಫರೂಕ್ ತನ್ನದೇ ರೀತಿಯಲ್ಲಿ ಸರ್ವೇ ಮಾಡಿಸಿ 'ನನಗೆ ಟಿಕೆಟ್ ಬೇಡ, ಇತ್ತೀಚೆಗೆ ಕಾಂಗ್ರೆಸಿನಿಂದ ಹೊರಬಂದಿರುವ ಹರಿಶ್ಚಂದ್ರ ಹಂಸಗೆ ಅವಕಾಶ ಕೊಡಿ' ಎಂದು ನಯವಾಗೇ ನುಣುಚಿಕೊಳ್ಳುವ ಪ್ರಯತ್ನ ಮಾಡಿದ್ದಾರೆ.



ಒಂದುವೇಳೆ ವಿರಾಜಪೇಟೆಯಿಂದ ಬಿಜೆಪಿ ಬೋಪಯ್ಯನನ್ನು ಕಣಕ್ಕಿಳಿಸದೆ ಕೊಡವ ಜನಾಂಗದವರೊಬ್ಬರಿಗೆ ಅವಕಾಶ ಕಲ್ಪಿಸಿದರೆ, ಜೆಡಿಎಸ್‌ನಿಂದ ಮನೋಜ್ ಎಂಬ ಅರೆಭಾಷೆ ಜನಾಂಗದ ಹೊಸಮುಖವೊಂದನ್ನು ಅಭ್ಯರ್ಥಿಯಾಗಿಸಲು ಪ್ಲಾನ್ ಬಿ ರೆಡಿ ಮಾಡಿಕೊಂಡಿರುವ ಜೀವಿಜಯಗೆ ಯಾವ ಕಾರಣಕ್ಕೂ ಎಂ.ಸಿ.ನಾಣಯ್ಯ ಬೇಕಾಗಿಲ್ಲ. ಯಾಕೆಂದರೆ ನಾಣಯ್ಯ ಮತ್ತು ಜೀವಿಜಯರದ್ದು ಎಣ್ಣೆಸೀಗೇಕಾಯಿ ಸಂಬಂಧ. ಇತ್ತೀಚೆಗಷ್ಟೆ ಜೆಡಿಎಸ್ ಪಕ್ಷದ ಒಂದಷ್ಟು ಕಾರ್ಯಕರ್ತರು ಇವರಿಬ್ಬರ ತಿಕ್ಕಾಟವನ್ನು ಶಮನ ಮಾಡುವ ಸಲುವಾಗಿ ಕೊಡಗು ಉಸ್ತುವಾರಿ ಜಿ.ಟಿ. ದೇವೇಗೌಡರನ್ನು ಭೇಟಿ ಮಾಡಿ ಮನವಿ ಮಾಡಿಕೊಂಡಿದ್ದರು. ಅದಕ್ಕೆ ಸ್ಪಂದಿಸಿದ್ದ ಜಿಟಿಡಿ ಇಬ್ಬರನ್ನೂ ಒಂದೇ ವೇದಿಕೆಯಲ್ಲಿ ಕೂರಿಸಿ ಚರ್ಚಿಸಲು ಸಿದ್ಧತೆ ಮಾಡಿಕೊಂಡಿದ್ದರು. ನಾಣಯ್ಯ ಬರುವುದಕ್ಕೆ ಒಪ್ಪಿಗೆ ನೀಡಿದರೆ, ಹುಂಬ ಜೀವಿಜಯ ತಾನು ನಾಣಯ್ಯ ಇರುವ ವೇದಿಕೆಗೆ ಬರುವುದಿಲ್ಲ ಎಂಬ ಉದ್ಧಟತನ ತೋರಿದ್ದರು. ಹೇಗೂ ಮಾಜಿ ಸಂಸದ ಎಚ್.ವಿಶ್ವನಾಥ್ ಕಾಂಗ್ರೆಸ್ ಬಿಟ್ಟು ಜೆಡಿಎಸ್ ಸೇರುವ ಸಾಧ್ಯತೆ ಇರೋದರಿಂದ ತನಗೆ ಮಡಿಕೇರಿಯಲ್ಲಿ ಬಲ ಬಂದು ಗೆಲ್ಲುತ್ತೇನೆ ಎಂಬ ಲೆಕ್ಕಾಚಾರದಲ್ಲಿರುವ ಜೀವಿಜಯ ನಾಣಯ್ಯನ ಸಹಕಾರ ತನಗೆ ಅಗತ್ಯವಿಲ್ಲ ಎನ್ನುವ ಮದದುಂಕಾರದಲ್ಲಿದ್ದಾರೆ. ಇದು ಜೆಡಿಎಸ್‌ನ ದುಸ್ಥಿತಿ!

■ ಬಿ.ಎನ್. ಮನುಶೆಣೈ

Registered No.RNP/KA/BGS/2036/2017-19 Posted at :BGPSO, Mysore Road, Bangalore-26 Thursday R B P LANKESH, Kannada Weekly Price Rs. 15/- 05-06-2017 RNI No. KARKAN



ಕಿರಿಕ್ ಹುಡುಗಿ ಮೂಕಿ ಪಾತ್ರ

ಕಳೆದ ಶನಿವಾರವಷ್ಟೇ 'ಕಿರಿಕ್ ಪಾರ್ಟಿ'ಯ ಅಭಿನಯಕ್ಕಾಗಿ ಫಿಲ್ಮ್‌ಫೇರ್ ಪ್ರಶಸ್ತಿ ಪಡೆದ ಸಂಯುಕ್ತ ಹೆಗಡೆ, ಈಗ ಮತ್ತೊಂದು ಅಚ್ಚರಿಯ ಸುದ್ದಿ ಕೊಟ್ಟಿದ್ದಾರೆ. ಟಾಲಿವುಡ್ ನಿರ್ದೇಶಕ ಶ್ರೀನಾಗ್ ಅವರ ಸಿನಿಮಾದಲ್ಲಿ ಇವರು ಮೂಕಿಯಾಗಿ ಕಾಣಿಸಿಕೊಂಡಿದ್ದಾರಂತೆ. ಆದೊಂದು ಸವಾಲಿನ ಪಾತ್ರ ಅಂದಿದ್ದಾರೆ ಸಂಯುಕ್ತ. 'ಕಿರಿಕ್ ಪಾರ್ಟಿ' ಸಿನಿಮಾದಲ್ಲಿ ಬಬ್ಲಿಯಾಗಿ ಕಾಣಿಸಿಕೊಂಡಿದ್ದ ಇವರು, ಸದ್ಯ 'ಕಾಲೇಜ್ ಕುಮಾರ್' ಚಿತ್ರದಲ್ಲಿ ಕಾಲೇಜ್ ಸ್ಟೂಡೆಂಟ್ ಪಾತ್ರ ನಿರ್ವಹಿಸುತ್ತಿದ್ದಾರೆ. ಇದೇ ಮೊದಲ ಬಾರಿಗೆ ಸವಾಲಿನ ಪಾತ್ರವನ್ನು ಅವರು ಒಪ್ಪಿಕೊಂಡಿದ್ದಾರಂತೆ.

ಸಂಯುಕ್ತ ಮೂಕಿಯಾಗಿ ನಟಿಸಲಿರುವ ಚಿತ್ರಕ್ಕೆ ಒಮ್ಮೆ 'ನಿಶ್ಯಬ್ದ' ಒಮ್ಮೆ 'ಯುದ್ಧ' ಎಂದು ಹೆಸರಿಡಲಾಗಿದೆ. ಬಹುತೇಕ ತಮಿಳು ಸಿನಿಮಾರಂಗದ ತಂತ್ರಜ್ಞರೇ ಈ ಚಿತ್ರಕ್ಕಾಗಿ ಕೆಲಸ ಮಾಡಲಿದ್ದಾರೆ.

ನಮ್ಮ ಮನಸಿನೊಳಗೆ ಯುದ್ಧವೂ ಇದೆ, ನಿಶ್ಯಬ್ದವೂ ಇದೆ. ಅದನ್ನೇ ಪಾತ್ರದ ಮೂಲಕ ಹೇಳಲು ಹೊರಟಿದ್ದಾರಂತೆ ನಿರ್ದೇಶಕರು. ಸಂಯುಕ್ತ ಸಿನಿಮಾದ ನಾಯಕಿಯಾದರೆ, ಪ್ರಭು ನಾಯಕ.

'ಕಾಲೇಜ್ ಕುಮಾರ್' ಸಿನಿಮಾದಲ್ಲಿ ನಟಿಸಲು ತನಗೆ ಟೈಮ್ ಇಲ್ಲ ಎಂದು ಹೇಳುವ ಮೂಲಕ ಕಿರಿಕ್ ಮಾಡಿಕೊಂಡಿದ್ದ ಹುಡುಗಿ, ಆನಂತರ ಯಾವುದೇ ಸಿನಿಮಾವನ್ನು ಒಪ್ಪಿಕೊಂಡಿರಲಿಲ್ಲ. ಫಿಲ್ಮ್‌ಫೇರ್ ಪ್ರಶಸ್ತಿ ಬಂದನಂತರ ಮತ್ತಷ್ಟು ಸಿನಿಮಾಗಳು ಬರುವ ನಿರೀಕ್ಷೆಯಲ್ಲಿ ಇದ್ದಾರೆ.

ನಿಖಿತಾ ಟ್ರೈನಿಂಗ್

ನಿರ್ದೇಶಕ ಯೋಗರಾಜ್ ಭಟ್ ಸಿನಿಮಾದಲ್ಲಿ ನಟಿಸಬೇಕೆಂದರೆ, ಪಾತ್ರಕ್ಕಾಗಿ ಸಂಪೂರ್ಣ ಸಿದ್ಧವಾಗಬೇಕು. ಇಲ್ಲದೇ ಇದ್ದರೆ, ಅವರು ಯಾವುದೇ ಕಾರಣಕ್ಕೂ ಕ್ಯಾಮೆರಾ ಮುಂದೆ ನಿಲ್ಲಲು ಬಿಡುವುದಿಲ್ಲ. ಇಂತಹ ಅನುಭವಕ್ಕೆ ಸಾಕ್ಷಿಯಾಗಿದ್ದಾರೆ ನಿಖಿತಾ ನಾರಾಯಣ್.

ಯೋಗರಾಜ್ ಭಟ್ ಸದ್ಯ 'ಮುಗುಳುನಗೆ' ಸಿನಿಮಾಗೆ ಆಕ್ಷನ್ ಕಟ್ ಹೇಳುತ್ತಿದ್ದಾರೆ. ಈ ಸಿನಿಮಾದಲ್ಲಿ ಬರೋಬ್ಬರಿ ನಾಲ್ಕು ನಾಯಕಿಯರಿದ್ದು ಅದರಲ್ಲಿ ಒಂದು ಪಾತ್ರವನ್ನು ನಿಖಿತಾ ನಿರ್ವಹಿಸುತ್ತಿದ್ದಾರೆ. ಈ ಪಾತ್ರಕ್ಕಾಗಿ ಅವರು ಗಿಟಾರ್ ಕಲಿತಿದ್ದಾರಂತೆ. ಅಲ್ಲದೇ ಮೈತುಂಬಾ ಟ್ಯಾಟೂ ಕೂಡ ಹಾಕಿಸಿಕೊಂಡಿದ್ದಾರೆ. ತಲೆಗೂದಲ ಬಣ್ಣ ಬದಲಾಯಿಸುವುದರ ಜತೆಗೆ ಡಬ್ಬಿಂಗ್ ಮಾಡುವುದು ಹೇಗೆ ಅನ್ನುವುದನ್ನೂ ಕಲಿತುಕೊಂಡು ತಾವೇ ಡಬ್ ಕೂಡ ಮಾಡುತ್ತಿದ್ದಾರೆ.

ಈಗಾಗಲೇ ನಿಖಿತಾ 'ಮಡಮಕ್ಕಿ' ಸಿನಿಮಾದಲ್ಲಿ ನಟಿಸಿದ್ದಾರೆ. ಅಲ್ಲದೇ ದರ್ಶನ್ ಅವರ 'ವಿರಾಟ್' ಚಿತ್ರದಲ್ಲೂ ಇವರು ಕಾಣಿಸಿಕೊಂಡಿದ್ದರು. ಇದು ಇವರ ಮೂರನೇ ಸಿನಿಮಾ. ಹಾಗಾಗಿ ಸಂಪೂರ್ಣ ತಯಾರಿಯೊಂದಿಗೆ ಕ್ಯಾಮೆರಾ ಮುಂದೆ ನಿಂತಿದ್ದಾರಂತೆ. "ಗಿಟಾರ್ ಕಲಿಯಲು ಮೊದಲಿನಿಂದಲೂ ನನಗೆ ಆಸೆ ಇತ್ತು. ಪಾತ್ರಕ್ಕಾಗಿ ಕಲಿಯಲೇಬೇಕಾದ ಅನಿವಾರ್ಯತೆ ಬಂತು. ಒಂದೂವರೆ ತಿಂಗಳುಗಳ ಕಾಲ ಕ್ಲಾಸ್‌ಗೆ ಹೋಗಿ ಗಿಟಾರ್ ಕಲಿತಿದ್ದೇನೆ. ಅಲ್ಲದೇ, ನಮ್ಮ ಪಾತ್ರಕ್ಕೆ ನಾವೇ ಡಬ್ ಮಾಡುವುದು ಎಷ್ಟು ಕಷ್ಟ ಅಂತ ಅರ್ಥಮಾಡಿಕೊಂಡಿದ್ದೇನೆ" ಅಂತಾರೆ ನಿಖಿತಾ.

ಅಂದಹಾಗೆ 'ಮುಗುಳುನಗೆ' ಚಿತ್ರಕ್ಕೆ ಗಣೇಶ್ ನಾಯಕ. ಅಪೂರ್ವ, ಆಶಿಕಾ ನಾರಾಯಣ್, ಅಮೂಲ್ಯ ಕೂಡ ತಾರಾಗಣದಲ್ಲಿ ಇದ್ದಾರೆ.





ವೆಂಕಟ್ ಫಿನಾಯಿಲ್

ನಿರ್ದೇಶಕ, ನಟ, ನಿರ್ಮಾಪಕ ಎಲ್ಲವೂ ಆಗಿರುವ ವೆಂಕಟ್ ಫಿ… ಕುಡಿದಿರುವ ಸುದ್ದಿಯನ್ನು ಅಂತಾರಾಷ್ಟ್ರೀಯ ವಿಷಯ ಅನ್ನುವಂತೆ ಮಾ… ಬಿಂಬಿಸಿದವು. ಆದರೆ, ಈ ಹಿಂದಿನ ಕಹಾನಿಯನ್ನು ಯಾರೂ … ಹೋಗಲಿಲ್ಲ. ಹಾಗಾಗಿ ವೆಂಕಟ್ ಮತ್ತೆ ಹೀರೋ ಆಗಿಬಿಟ್ಟರು.

ಎಲ್ಲರೂ ಅಂದುಕೊಂಡಂತೆ ವೆಂಕಟ್ ಫಿನಾಯಿಲ್ ಅಲ್ಲ, ಕಾ… ಕುಡಿದಿರಲಿಲ್ಲ. ತಾನು ಫಿನಾಯಿಲ್ ಕುಡಿದಿರುವುದಾಗಿ ತನಗೆ … ಪತ್ರಕರ್ತರಿಗೆ ಮೆಸೇಜ್ ಕಳಿಸಿ, ಡ್ರಾಮಾ ಮಾಡಿಬಿಟ್ಟರು. ಅದಕ್ಕೂ … ತನ್ನ ಸಹೋದರ ರಮೇಶ್ ಅವರ ಪತ್ನಿಯ ಜತೆ ಕಾರ್ ವಿಚಾರವಾ… ಕೂಡ ಮಾಡಿಕೊಂಡಿದ್ದರು. ಅತ್ತಿಗೆಗೆ ಹೆದರಿಸಲು ಫಿ… ಕುಡಿಯುವುದಾಗಿಯೂ ಹೇಳಿದ್ದರು. ಅದನ್ನೇ ಮೀಡಿಯಾಗಳಿ… ಮಾಡಿದ್ದರು. ವೆಂಕಟ್ ಮನೆಗೆ ಚಾನೆಲ್ ಕ್ಯಾಮೆರಾಗಳು ಹೋಗುತ್ತಿ… ಕತೆಯನ್ನೇ ಬದಲಾಯಿಸಿಬಿಟ್ಟರು. ತಾನು ರಚನಾ ಅನ್ನುವ ಹುಡು… ಪ್ರೀತಿಸುತ್ತಿರುವುದಾಗಿ, ಅವಳು ಮದುವೆಗೆ ಒಪ್ಪುತ್ತಿಲ್ಲ ಅನ್ನುವ ಕಾ… ತಾವು ಆತ್ಮಹತ್ಯೆಗೆ ಯತ್ನಿಸಿದ್ದೇನೆ ಎಂದು ಪ್ಲೇಟ್ ಬದಲಾಯಿಸಿದ… ಹುಚ್ಚುತನಕ್ಕೆ ರಚನಾ ಅನ್ನುವ ಹುಡುಗಿ ಟಿವಿಯಲ್ಲಿ ಬರಬೇಕಾಗಿ… ಅಷ್ಟಕ್ಕೂ ರಚನಾ ಕೂಡ ಮುಗ್ಧಳೇನೂ ಅಲ್ಲ. ವೆಂಕಟ್‌ನಿಂದ … ಪಡೆದಿದ್ದಾಳೆ. ಪ್ರೀತಿಗೆ ಪ್ರಚೋದನೆ ಎನ್ನುವಂತೆ ಮೆಸೇಜ್‌ಗಳನ್ನು ಕಳು… ಅದನ್ನೆ ವೆಂಕಟ್ ಪ್ರೀತಿ ಅಂದುಕೊಂಡು ದಡ್ಡತನಕ್ಕೆ ಮುಂದಾಗಿದ… ಪತ್ರಕರ್ತರು ವೆಂಕಟ್‌ನನ್ನು ಬೆಂಡೆತ್ತುತ್ತಿದ್ದಂತೆಯೇ ಮತ್ತೆ ಬದಲ… ಮಾತುಗಳನ್ನು ಆಡುತ್ತಿದ್ದಾನೆ. ಇನ್ಮುಂದೆ ಮೀಡಿಯಾ ಮುಂದೆ ಬರ… ತಂದೆಯ ಮೇಲೆ ಪ್ರಮಾಣ ಮಾಡಿರುವ ವೆಂಕಟ್ ಅದನ್ನು ಉಳಿಸಿಕೊ… ಕಾದು ನೋಡಬೇಕು.

ಬಾಹುಬಲಿಯ ಭೇಟಿಯ ಹಿಂದಿದೆ ರಹಸ್ಯ



'ರಾಜಕುಮಾರ' ಸಿನಿಮಾದ ನಿರ್ದೇಶಕ ಸಂತೋಷ್ ಆನಂದ್‌ರಾಮ್ ಮತ್ತು ನಿರ್ಮಾಪಕ ಕಾರ್ತಿಕ್, ಸದ್ದಿಲ್ಲದೇ ತೆಲುಗಿನ ಖ್ಯಾತ ನಿರ್ದೇಶಕ ರಾಜಮೌಳಿಯನ್ನು ಭೇಟಿ ಮಾಡಿ ಬಂದಿದ್ದಾರೆ. ಈ ಭೇಟಿಯ ಹಿಂದೆ ಯಾವುದೇ ಉದ್ದೇಶವಿಲ್ಲ ಅಂತ ಅವರು ಹೇಳುತ್ತಿದ್ದರೂ, ಅವರ ಆಪ್ತರು ಬೇರೆಯದೇ ಮಾತುಗಳನ್ನು ಆಡುತ್ತಿದ್ದಾರೆ.

ನಿರ್ದೇಶಕ ಸಂತೋಷ್ ಮತ್ತು ನಿರ್ಮಾಪಕ ಕಾರ್ತಿಕ್ ಮತ್ತೊಂದು ಸಿನಿಮಾ ನಿರ್ಮಾಣಕ್ಕೆ ಮುಂದಾಗಿದ್ದಾರೆ. ಐತಿಹಾಸಿಕ ಕತೆಯನ್ನು ಈ ಬಾರಿ ಆಯ್ದುಕೊಳ್ಳುವ ಯೋಚನೆ ಕೂಡ ಇವರಿಗಿದೆ. ಹಾಗಾಗಿ ರಾಜಮೌಳಿ ಅವರನ್ನು ಭೇಟಿ ಮಾಡಿ ಸಲಹೆ ಪಡೆದಿದ್ದಾರಂತೆ. ಸಾಧ್ಯವಾದರೆ, ರಾಜಮೌಳಿ ಅವರ ತಂದೆಯವರು ಕೂಡ ಈ ಸಿನಿಮಾಗೆ ಚಿತ್ರಕತೆ ಬರೆಯಲಿದ್ದಾರೆ.

ಆದರೆ ಸಂತೋಷ್ ಹೇಳುವುದೇ ಬೇರೆ. "'ರಾಜಕುಮಾರ' ಚಿತ್ರ ತೆಲುಗಿಗೆ ರೀಮೇಕ್ ಆಗುತ್ತಿದೆ. ಆ ವಿಚಾರವಾಗಿ ಮಾತನಾಡಲು ಹೈದರಾಬಾದ್‌ಗೆ ಹೋಗಿದ್ದೆವು. ರಾಜಮೌಳಿ ಅವರ ಮನೆ ಕೂಡ ಅಲ್ಲಿತ್ತು. ಸಹಜವಾಗಿಯೇ ಭೇಟಿ ಮಾಡಿದ್ದೇವೆ. ಆಗ ರಾಜಮೌಳಿ ಅವರು ನನ್ನ ಎರಡು ಸಿನಿಮಾಗಳ ಬಗ್ಗೆ ಮಾತಾಡಿದರು. ಅದರಲ್ಲೂ 'ಬೊಂಬೆ ಹೇಳುತೈತಿ' ಹಾಡಿನ ಬಗ್ಗೆ ಪ್ರಸ್ತಾಪ ಮಾಡಿದರು" ಅಂದಿದ್ದಾರೆ. ನಿಜ, 'ರಾಜಕುಮಾರ' ಸಿನಿಮಾ ತೆಲುಗಿಗೆ ರೀಮೇಕ್ ಆಗುತ್ತಿದೆ. ಆದರೆ, ರಾಜಮೌಳಿ ಭೇಟಿಯ ಉದ್ದೇಶವೇ ಬೇರೆಯಿದೆ.

ಚೇತನ್ ಗೆಲುವಾಗ…

ಸೋಲಿನ ಮಹಾಸುಳಿಯಲ್ಲಿ ಸಿಲುಕಿರುವ ನಿರ್ದೇಶಕ ಪಿ.ಸಿ… ಈಗ ಮತ್ತೊಂದು ಸಿನಿಮಾ ಮಾಡಲು ಮುಂದಾಗಿದ್ದಾರೆ. ಸತತವಾಗಿ … ಸಿನಿಮಾಗಳು ಸೋತರೂ, ಗೆಲ್ಲುವ ಕನಸು ಮಾತ್ರ ಇನ್ನೂ … ಇದೆಯಂತೆ. ಈ ಬಾರಿ ಗೆದ್ದೇ ಗೆಲ್ಲುತ್ತೇನೆ ಎಂಬ ವಿಶ್ವಾಸದೊಂದಿ… ಬಜೆಟ್‌ನ ಸಿನಿಮಾವನ್ನೇ ಮಾಡುವುದಾಗಿ ಹೇಳಿದ್ದಾರೆ. ಈ ಚಿ… ದಿನಗಳು' ಖ್ಯಾತಿಯ ನಟ ಚೇತನ್ ನಾಯಕ.

ಚೇತನ್ ಜತೆ ಇನ್ನೂ ಮಾತುಕತೆ ಕೂಡ ಆಡಿಲ್ಲ. ಆದರೂ … ಚಿತ್ರಕ್ಕೆ ಇವರೇ ನಾಯಕ ಅನ್ನುತ್ತಿದ್ದಾರೆ ನಿರ್ದೇಶಕರು. ಈ ಕತೆ ಕೇಳಿ… ಚೇತನ್ ಖಂಡಿತಾ ಒಪ್ಪಿಕೊಳ್ಳುತ್ತಾರೆ ಅನ್ನುವ ವಿಶ್ವಾಸ ನಿರ್ದೇ… ಹಾಗಾಗಿ ಧೈರ್ಯವಾಗಿಯೇ ಚೇತನ್ ಹೆಸರು ಬಳಸಿಕೊಳ್ಳುತ್ತಿದ್ದಾರ…

ಹಲವು ಹೋರಾಟಗಳಲ್ಲಿ ಯಶಸ್ಸು ಕಂಡಿರುವ ಚೇತನ್, ಸಿನಿ… ಗೆಲುವು ಕಂಡವರು. ಹಾಗಾಗಿ ಚೇತನ್ ಮೇಲೆ ನಂಬಿಕೆ ಇಟ್ಟಿದ್ದಾರೆ. … ಇವರಿಗಾಗಿ ಬ್ರಿಟಿಷ್ ಕಾಲದ ಐತಿಹಾಸಿಕ ಕಥೆಯನ್ನು ರೆಡಿ ಮಾಡಿಕೊಂ…

ಮೊನ್ನೆಯಷ್ಟೇ ಶೇಖರ್ ನಿರ್ದೇಶನದ 'ರಾಗ' ಸಿನಿಮಾ … ಅದರ ಹಿಂದೆ ಮಾಡಿದ್ದ 'ಸ್ಟೈಲ್ ಕಿಂಗ್' ಚಿತ್ರ ಕೂಡ ಬಾಕ್ಸ್ ಆ… ಮಕಾಡೆ ಮಲಗಿತ್ತು. ಈ ಬಾರಿ ಐತಿಹಾಸಿಕ ಸಿನಿಮಾ ಮಾಡುತ್ತಿರು… ಗೆಲ್ಲಲಿ ಅನ್ನುವ ಹಾರೈಕೆ ಸಿನಿಮಾ ರಂಗದ್ದು.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com